



# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 5 ಗುರುವಾರ 2023

ಸಂಪುಟ: 44 | ಸಂಚಿಕೆ: 170 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4





## ಲೋಕಸಭೆ ಚುನಾವಣೆಗೂ ಮುನ್ನ

# ಜಾತಿಗಣತಿ ವರದಿ ಬಿಡುಗಡೆ

### ಬೆಳಗಾವಿ ಅಧಿವೇಶನ ವರದಿ ಮಂಡನೆಗೆ ಸರ್ಕಾರ ಚಿಂತನೆ

ಬೆಂಗಳೂರು, ಅ.4(ಕೆಎಂಶಿ)– ಮುಂಬರುವ ಲೋಕಸಭಾ ಚುನಾವಣೆಗೂ ಮುನ್ನವೇ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ವರದಿಯನ್ನು(ಜಾತಿಗಣತಿ) ಬಿಡುಗಡೆಗೊಳಿಸಲು ಕಾಂಗ್ರೆಸ್ ಸರ್ಕಾರ ಮುಂದಾಗಿದೆ

ಗ್ಯಾರಂಟಿ ಯೋಜನೆಗಳ ಅನುಷ್ಠಾನದಿಂದ ಚುನಾವಣೆಯಲ್ಲಿ ದೊಡ್ಡ ಲಾಭ ಗಿಟ್ಟಿಸಬಹುದು ಎಂಬ ಲೆಕ್ಕಾಚಾರದಲ್ಲಿರುವ ಕಾಂಗ್ರೆಸ್ ಕಾಂತರಾಜ್ ಆಯೋಗದ ವರದಿ ಬಹಿರಂಗೊಳಿಸಿದರೆ, ಪಕ್ಷಕ್ಕೆ ಲೋಕಸಭಾ ಚುನಾವಣೆಯಲ್ಲಿ ಹೆಚ್ಚು ಅನುಕೂಲವಾಗಲಿದೆ ಎಂಬ ಲೆಕ್ಕಾಚಾರದಲ್ಲಿದೆ.

ಈ ಉದ್ದೇಶದಿಂದಲೇ ಮುಖ್ಯಮಂತ್ರಿ



ಸಿದ್ದರಾಮಯ್ಯ ಕಳೆದ ಒಂದು ತಿಂಗಳ ಹಿಂದೆಯೇ ಹಿಂದುಳಿದ ವರ್ಗಗಳ ಆಯೋಗದ ಹಾಲಿ ಅಧ್ಯಕ್ಷ ಜಯಪ್ರಕಾಶ್ ಹೆಗಡೆ ಅವರಿಗೆ ಪತ್ರ ಬರೆದು ಶೈಕ್ಷಣಿಕ ಹಾಗೂ ಸಾಮಾಜಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಕೋರಿದ್ದರು. ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿ ಬಿಜೆಪಿ ಆಡಳಿತಾವಧಿಯಲ್ಲಿ ನೇಮಕಗೊಂಡಿದ್ದ ಜಯಪ್ರಕಾಶ್ ಅವರ ಅವಧಿ ನವೆಂಬರ್ ಅಂತ್ಯಕ್ಕೆ ಕೊನೆಗೊಳ್ಳಲಿದ್ದು, ಅದಕ್ಕೂ ಮುನ್ನವೇ ವರದಿ ಸಲ್ಲಿಸುವುದಾಗಿ ಸರ್ಕಾರಕ್ಕೆ ಪತ್ರ ಬರೆದು ತಿಳಿಸಿದ್ದಾರೆ.

ಕಾಂತರಾಜ್ ವರದಿ ಸರ್ಕಾರಕ್ಕೆ ಸಲ್ಲಿಸುವ ಮುನ್ನವೇ ಸೋರಿಕೆಗೊಂಡು, ಸೋರಿಕೆ ಮಾಹಿತಿಯಂತೆ ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗ ಮೊದಲ ಸ್ಥಾನದಲ್ಲೂ ಹಾಗೂ ಅಲ್ಪಸಂಖ್ಯಾತರು ಎರಡನೇ ಸ್ಥಾನದಲ್ಲಿದ್ದಾರೆ. ▶ 8ನೇ ಪುಟಕ್ಕೆ

## ನಾಳೆಯಿಂದ 13ರವರೆಗೆ ದಸರಾ ಯುವ ಸಂಭ್ರಮ

### ರಾಜ್ಯದಾದ್ಯಂತ 400 ಕಾಲೇಜುಗಳ 1,200 ವಿದ್ಯಾರ್ಥಿಗಳಿಂದ ಕಲಾ ಪ್ರದರ್ಶನ




ಮೈಸೂರು ಜಿಲ್ಲಾ ಎಸ್ಪಿ ಸೀಮಾ ಲಾಟ್ಕರ್ ಅವರು ಯುವ ದಸರಾ ಸಂಭ್ರಮದ ಪೋಸ್ಟರ್ ಅನ್ನು ಬಿಡುಗಡೆ ಮಾಡಿದರು. ಈ ವೇಳೆ ಉಪ ಸಮಿತಿಯ ವಿ.ಆರ್.ಶೈಲಜಾ, ಆರ್.ಪ್ರತಾಪ್, ಡಾ.ಆರ್.ನಿಂಗರಾಜ್ ಉಪಸ್ಥಿತರಿದ್ದರು. ಬಲಚಿತ್ರದಲ್ಲಿ ಯುವ ಸಂಭ್ರಮ ಕಾರ್ಯಕ್ರಮಕ್ಕೆ ಜಿಲ್ಲಾಡಳಿತದ ವತಿಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಶೈಲಜಾ ಅವರು ಆಹ್ವಾನಿಸುತ್ತಿರುವುದನ್ನು ಕಾಣಬಹುದು.

ಮೈಸೂರು, ಅ. 4(ಆರ್‌ಕೆ)–2023ರ ದಸರಾ ಮಹೋತ್ಸವದ ಅಂಗವಾಗಿ ಮೈಸೂರಿನ ಮಾನಸ ಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ಅಕ್ಟೋಬರ್ 6ರಿಂದ 13ರವರೆಗೆ ಯುವ ಸಂಭ್ರಮ ಕಾರ್ಯಕ್ರಮ ನಡೆಯಲಿದೆ ಎಂದು ಯುವ ದಸರಾ ಉಪಸಮಿತಿ ವಿಶೇಷಾಧಿಕಾರಿಯಾದ ಎಸ್ಪಿ ಸೀಮಾ ಲಾಟ್ಕರ್ ತಿಳಿಸಿದ್ದಾರೆ.

ಮೈಸೂರಿನ ನಜರ್‌ಬಾದ್‌ನಲ್ಲಿರುವ ಎಸ್ಪಿ ಕಚೇರಿ ಸಭಾಂಗಣದಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಪ್ರತೀದಿನ ಸಂಜೆ 8ರಿಂದ ರಾತ್ರಿ 10 ಗಂಟೆವರೆಗೆ ಯುವ ಸಂಭ್ರಮ ಕಾರ್ಯಕ್ರಮಗಳು ನಡೆಯಲಿದ್ದು, ಪ್ರತೀ ಕಾಲೇಜಿನ 30ರಂತೆ ಒಟ್ಟು 1,200 ವಿದ್ಯಾರ್ಥಿಗಳು ಯುವ ಸಂಭ್ರಮ ವೇದಿಕೆಯಲ್ಲಿ ಸಾಂಸ್ಕೃತಿಕ, ಜಾನಪದ ಕಲಾ ಪ್ರದರ್ಶನ ನೀಡುವರು ಎಂದು ತಿಳಿಸಿದರು.

ಕರ್ನಾಟಕ ಏಕೀಕರಣ, ಭಾರತದ ಸ್ವಾತಂತ್ರ್ಯ ಚಳುವಳಿ, ಲಿಂಗ ಸಮಾನತೆಯೊಂದಿಗೆ ಮಹಿಳಾ ಸಬಲೀಕರಣ ಮತ್ತು ಮಹಿಳಾ ಸ್ವಯಂ ರಕ್ಷಣಾ ಕಲೆ, ಮೊಬೈಲ್‌ನಿಂದ ಪುಸ್ತಕದೊಳಗೆ ಯುವ ಜನತೆಯ ನಡಿಗೆ, ಕರ್ನಾಟಕ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ವಸ್ತುವಿಷಯವಾಗಿಸಿಕೊಂಡು ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಲಿದ್ದಾರೆ ಎಂದು ಅವರು ತಿಳಿಸಿದರು.

ಅ.6ರಂದು ಸಂಜೆ 5 ಗಂಟೆಗೆ ಉಸ್ತುವಾರಿ ಸಚಿವ ಹೆಚ್.ಸಿ. ಮಹದೇವಪ್ಪ ಯುವ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಲಿದ್ದು, ನಟ ವಶಿಷ್ಠ ಸಿಂಹ, ನಟಿ ಹರಿಪ್ರಿಯಾ ಭಾಗವಹಿಸುವರು. ಕಾರ್ಯಕ್ರಮ ಮುಗಿಸಿ ಹಿಂದಿರುಗಲು ಸಾಧ್ಯವಾಗದ ತಂಡಗಳು ರಾತ್ರಿ ವಾಸ್ತವ್ಯ ಹೂಡಲು ಹಾಗೂ ಊಟದ ವ್ಯವಸ್ಥೆ ಮಾಡಲಾಗುವುದು ಎಂದು ಸೀಮಾ ಲಾಟ್ಕರ್ ತಿಳಿಸಿದರು. ಇದೇ ವೇಳೆ ಯುವ ಸಂಭ್ರಮ ಕಾರ್ಯಕ್ರಮಗಳ ಪೋಸ್ಟರ್ ಅನ್ನು ಬಿಡುಗಡೆ ಮಾಡಲಾಯಿತು. ಉಪಸಮಿತಿಯ ವಿ.ಆರ್.ಶೈಲಜಾ, ಆರ್.ಪ್ರತಾಪ್ ಹಾಗೂ ಡಾ.ಆರ್.ನಿಂಗರಾಜ್ ಅವರು ಉಪಸ್ಥಿತರಿದ್ದರು.

### ಏಷ್ಯನ್ ಕ್ರೀಡಾಕೂಟ ಜಾವೆಲಿನ್ ಡಬಲ್ ಧಮಾಕಾ: ನೀರಜ್‌ಗೆ ಚಿನ್ನ, ಕಿಶೋರ್‌ಗೆ ಬೆಳ್ಳಿ



ಹ್ಯಾಂಗ್‌ಝೌ, ಅ.4– ಏಷ್ಯನ್ ಗೇಮ್ಸ್–2023ರ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಭಾರತದ ನೀರಜ್ ಚೋಪ್ರಾ ಚಿನ್ನ ಮತ್ತು ಕಿಶೋರ್ ಜೇನಾ ಬೆಳ್ಳಿ ಪದಕ ಜಯಿಸಿದ್ದಾರೆ.

ಈ ಮೂಲಕ ಜಾವೆಲಿನ್ ಸ್ಪರ್ಧೆಯಲ್ಲಿ ಭಾರತೀಯ ಸ್ಪರ್ಧಿಗಳು ಅಮೋಘ ಸಾಧನೆ ಮಾಡಿದ್ದಾರೆ. ಜಾವೆಲಿನ್ ವಿಭಾಗದಲ್ಲಿ ಚಿನ್ನ ತಮ್ಮ ಬಳಿಯೇ ಉಳಿಸಿರುವ ನೀರಜ್, 88.88 ಮೀಟರ್ ದೂರ ಜಾವೆಲಿನ್ ಎಸೆದು ಗಮನ ಸೆಳೆದಿದ್ದಾರೆ. ನೀರಜ್‌ಗೆ ತಕ್ಕ ಪೈಪೋಟಿ ಒಡ್ಡಿದ ಭಾರತೀಯರೇ ಆದ ಜೇನಾ 87.54 ಮೀಟರ್ ದೂರ ಜಾವೆಲಿನ್ ಎಸೆದು ಬೆಳ್ಳಿ ಪದಕಕ್ಕೆ ಅರ್ಹರಾದರು.

ಟೋಕಿಯೊ ಒಲಿಂಪಿಕ್ ಚಿನ್ನದ ಪದಕ ವೀರ ನೀರಜ್, 2018ರ ಏಷ್ಯನ್ ಕ್ರೀಡಾಕೂಟದಲ್ಲೂ ಚಿನ್ನ ಜಯಿಸಿದ್ದರು.

## ಬರ ಪರಿಸ್ಥಿತಿ ಅಧ್ಯಯನಕ್ಕಾಗಿ ರಾಜ್ಯಕ್ಕೆ ಕೇಂದ್ರ ತಂಡ

### ಮೂರು ತಂಡಗಳು ಇಂದಿನಿಂದ ಪ್ರವಾಸ

ಬೆಂಗಳೂರು, ಅ.4(ಕೆಎಂಶಿ)– ರಾಜ್ಯದ ಬರ ಪರಿಸ್ಥಿತಿ ಅಧ್ಯಯನಕ್ಕೆ ಕೇಂದ್ರದ ಮೂರು ತಂಡಗಳು ರಾಜ್ಯಕ್ಕೆ ಆಗಮಿಸಿದ್ದು, ನಾಳೆಯಿಂದ ನಾಲ್ಕು ದಿನಗಳ ಕಾಲ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ಪರಿಶೀಲನೆ ನಡೆಸಲಿವೆ. ಕೇಂದ್ರ ತಂಡವು ಹತ್ತು ಸದಸ್ಯರನ್ನೊಳಗೊಂಡಿದ್ದು, ರಾಜ್ಯದ ಸ್ಥಳೀಯ ಅಧಿಕಾರಿಗಳೊಂದಿಗೆ ಕೃಷಿ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಲಿದೆ.

ಈ ಹಿನ್ನೆಲೆಯಲ್ಲಿ ಕೃಷಿ ಸಚಿವರಾದ ಎನ್.ಚಲುವರಾಯಸ್ವಾಮಿ ಅವರು ಕೇಂದ್ರ ತಂಡ ಜಿಲ್ಲೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಕಂದಾಯ, ಕೃಷಿ, ತೋಟಗಾರಿಕೆ ಇಲಾಖೆ ಅಧಿಕಾರಿಗಳು ಈ ಸಾಲಿನ ಮಳೆಯ ವಾಸ್ತವ ಪರಿಸ್ಥಿತಿ ಮನವರಿಕೆ ಮಾಡಿಕೊಡಬೇಕು ಎಂಬ ನಿರ್ದೇಶನ ನೀಡಿದ್ದಾರೆ. ಹಲವು ಕಡೆ ಸಂಪೂರ್ಣ ಬೆಳೆ ಹಾನಿಯಾಗಿದ್ದು ಕೆಲವೆಡೆ ಬೆಳೆ ಇದ್ದರೂ ಉಂಟಾಗಲಿರುವ ತೀವ್ರ ಇಳುವರಿ ಕುಸಿತದ ಬಗ್ಗೆ ಪರಿಣಾಮಕಾರಿಯಾಗಿ ವಿವರಿಸಿ ಅರ್ಥ ಮಾಡಿಕೊಡಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.



ಮೂರೂ ತಂಡಗಳು ನಾಳೆ ಬೆಳಗ್ಗೆ 9:30 ರಿಂದ 10:30ರವರೆಗೆ ಕರ್ನಾಟಕ ರಾಜ್ಯ ಪ್ರಕೃತಿ ವಿಕೋಪ ನಿರ್ವಹಣಾ ಕೇಂದ್ರಕ್ಕೆ ಭೇಟಿ ನೀಡಿ ಮಾಹಿತಿ ಪಡೆಯಲಿವೆ. ಮಧ್ಯಾಹ್ನ 12 ಗಂಟೆಗೆ ವಿಧಾನ ಸೌಧದಲ್ಲಿ ರಾಜ್ಯದ ಬರ ಪರಿಸ್ಥಿತಿಯ ಸಂಕ್ಷಿಪ್ತ ವಿವರ ಪಡೆದು ಜಿಲ್ಲೆಗಳಿಗೆ ತೆರಳಲಿವೆ. ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯದ ಜಂಟಿ ಕಾರ್ಯದರ್ಶಿ ಅಜಿತ್‌ಕುಮಾರ್ ಸಾಹು ಅವರ ನೇತೃತ್ವದ ಮೊದಲ ತಂಡದಲ್ಲಿ ಎಣ್ಣೆ ಬೀಜಗಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರಾದ ಡಾ.ಜೆ.ಪೊನ್ನುಸ್ವಾಮಿ, ವೆಚ್ಚ ವ್ಯವಹಾರಗಳ ಇಲಾಖೆಯ ಸಹಾಯಕ ನಿರ್ದೇಶಕ ಮಹೇಂದ್ರ ಚಂಡೇಲಿಯ, ನೀತಿ ಆಯೋಗದ ಸಂಶೋಧನಾಧಿಕಾರಿ ಶಿವಚರಣ್ ಮೀನಾ, ರಾಜ್ಯ ಕೃಷಿ ಆಯುಕ್ತರಾದ ಎಸ್.ಪಾಟೀಲ್ ಅವರಿದ್ದಾರೆ. ಈ ತಂಡವು ನಾಳೆ ಬೆಳಗಾವಿಗೆ ತೆರಳಲಿದೆ.

ಅಕ್ಟೋಬರ್ 6ರಂದು ಬೆಳಗಾವಿ ಹಾಗೂ ವಿಜಾಪುರ ಜಿಲ್ಲೆಗಳಲ್ಲಿ, ಅಕ್ಟೋಬರ್ 7 ರಂದು ಬಾಗಲಕೋಟೆ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಬರ ಪರಿಶೀಲನೆ ನಡೆಸಿ ಅಕ್ಟೋಬರ್ 8 ರಂದು ಬೆಂಗಳೂರಿಗೆ ಮರಳಲಿದೆ. ಕೇಂದ್ರ ಕುಡಿಯುವ ನೀರು ಹಾಗೂ ಸ್ವಚ್ಛತಾ ಸಚಿವಾಲಯದ ಹೆಚ್ಚುವರಿ ಸಲಹೆಗಾರ ಡಿ. ರಾಜಶೇಖರ್ ನೇತೃತ್ವದ ಎರಡನೇ ತಂಡದಲ್ಲಿ ಪಶುಸಂಗೋಪನೆ ಇಲಾಖೆ ನಿರ್ದೇಶಕ ಆರ್.ಥಾಕರೆ, ಗ್ರಾಮೀಣಾಭಿವೃದ್ಧಿ ಇಲಾಖೆಯ ಸಹಾಯಕ ಆಯುಕ್ತ ಮೋತಿರಾಂ, ರಾಜ್ಯದ ಪ್ರಕೃತಿ ವಿಕೋಪ ನಿರ್ವಹಣಾ ಕೇಂದ್ರದ ನಿರ್ದೇಶಕ ಕರೀಗೌಡ ಅವರನ್ನು ಒಳಗೊಂಡಿದೆ.

ಈ ತಂಡವು ಗದಗ್, ಕೊಪ್ಪಳ, ಬಳ್ಳಾರಿ, ವಿಜಯನಗರ ಜಿಲ್ಲಾ ಪ್ರವಾಸ ಬರ ಅಧ್ಯಯನ ಮಾಡಲಿದೆ. ▶ 8ನೇ ಪುಟಕ್ಕೆ

## ಮುಂದಿನ ವಾರ ರಾಜ್ಯದ ಹೊಸ ಶಿಕ್ಷಣ ನೀತಿಗಾಗಿ ಸಮಿತಿ ರಚನೆ

ಬೆಂಗಳೂರು,ಅ.4– ರಾಜ್ಯದ ಹೊಸ ಶಿಕ್ಷಣ ನೀತಿ ರೂಪಿಸಲು ಇನ್ನೊಂದು ವಾರದಲ್ಲಿ ತಜ್ಞರ ಸಮಿತಿ ರಚಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ. ಎನ್.ಸಿ.ಸುಧಾಕರ್ ತಿಳಿಸಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಮಿತಿಗೆ ಯಾರು ಅಧ್ಯಕ್ಷರು, ಸದಸ್ಯರು ಇರಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಿರ್ಧಾರ ಮಾಡಲಿದ್ದಾರೆ ಎಂದರು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಗುಣಮಟ್ಟದ ಶಿಕ್ಷಣ ನೀಡಲು ಅನುಕೂಲವಾಗುವಂತೆ ವರದಿ ನೀಡಲು ಸಮಿತಿ ರಚಿಸಲಾಗುವುದು. ಸಮಿತಿಗೆ ನಿರ್ದಿಷ್ಟ ನಿಯಮಗಳನ್ನು ನೀಡಿ ಎಲ್ಲರ ಭಾವನೆಗಳನ್ನು ಕ್ರೋಢೀಕರಿಸಿ ವರದಿ ನೀಡುವಂತೆ ಸೂಚಿಸಲಾಗುವುದು ಎಂದು ಹೇಳಿದರು.

ರಾಷ್ಟ್ರೀಯ ಶಿಕ್ಷಣ ನೀತಿ ರದ್ದುಪಡಿಸಿ ಹೊಸ ಶಿಕ್ಷಣ ನೀತಿ ಜಾರಿಗೆ ತರುವ ಪ್ರಕ್ರಿಯೆ ಪ್ರಾರಂಭವಾಗಿದೆ. ಈಗಾಗಲೇ ಎನ್‌ಇಪಿಯಡಿ ವ್ಯಾಸಂಗ ಪ್ರಾರಂಭಿಸಿರುವವರು ಅದೇ ಹಳೆಯ ಪದ್ಧತಿಯಲ್ಲೇ ಮುಂದುವರೆಯುತ್ತಾರೆ. ಹೊಸದಾಗಿ ವ್ಯಾಸಂಗ ಆರಂಭಿಸುವವರಿಗೆ ಹೊಸ ಶಿಕ್ಷಣ ನೀತಿಯಡಿ ಶಿಕ್ಷಣ ದೊರೆಯಲಿದೆ.

ಸರ್ಕಾರಿ ಕಾಲೇಜಿನ ಅಧ್ಯಾಪಕರು, ಖಾಸಗಿ ಕೋಚಿಂಗ್ ಸೆಂಟರ್‌ಗಳಲ್ಲಿ ಬೋಧನೆ ಮಾಡುವ ಬಗ್ಗೆ ಹೆಚ್ಚು ದೂರು ಬಂದಿಲ್ಲ. ಕಾಲೇಜಿನ ಅವಧಿಯಲ್ಲಿ ಕೋಚಿಂಗ್ ಸೆಂಟರ್‌ನಲ್ಲಿ ಬೋಧನೆ ಮಾಡುವ ಅಥವಾ ಅವರ ಹೆಸರಿನಲ್ಲಿ ಕೋಚಿಂಗ್ ಸೆಂಟರ್ ತೆರೆದಿರುವ ಬಗ್ಗೆ ದೂರುಗಳಿಲ್ಲ. ಸರ್ಕಾರಿ ಅಧ್ಯಾಪಕರಾದವರು ಖಾಸಗಿಯಾಗಿ ಕೋಚಿಂಗ್ ಸೆಂಟರ್‌ಗಳಲ್ಲಿ ಬೋಧನೆ ಮಾಡಲು ಅವಕಾಶವಿಲ್ಲ ಎಂದು ಸ್ಪಷ್ಟಪಡಿಸಿದರು. ನಗರ ಕೇಂದ್ರಿತ ಎಂಜಿನಿಯರ್ ▶ 8ನೇ ಪುಟಕ್ಕೆ







## ಪಿಎಂ ಉಜ್ವಲ ಯೋಜನೆಯ ಎಲ್‌ಪಿಜಿ ಸಬ್ಸಿಡಿ ಮೊತ್ತ 300 ರೂ.ಗೆ ಹೆಚ್ಚಳ

ನವದೆಹಲಿ, ಅ.4– ಬೆಲೆ ಏರಿಕೆಯ ಬಿಸಿಯಲ್ಲಿರುವ ಬಡ ಮತ್ತು ಮಧ್ಯಮ ವರ್ಗದವರಿಗೆ ತುಸು ನಿರಾಳ ತರುವ ಸುದ್ದಿ ಇದು. ಪಿಎಂ ಉಜ್ವಲ ಯೋಜನೆಯ ಫಲಾನುಭವಿಗಳಿಗೆ ಎಲ್‌ಪಿಜಿ ಸಿಲಿಂಡರ್ ದರದಲ್ಲಿ ಸಿಗುವ ಸಬ್ಸಿಡಿ ಮೊತ್ತವನ್ನು ಕೇಂದ್ರ ಸರ್ಕಾರ ಹೆಚ್ಚಿಸಿದೆ. 200 ರೂನಷ್ಟು ನೀಡಲಾಗುತ್ತಿದ್ದ ಸಬ್ಸಿಡಿಯನ್ನು 300 ರೂ.ಗೆ ಏರಿಸಲಾಗಿದೆ. ಸಂಪುಟ ಸಭೆಯ ಬಳಿಕ ಕೇಂದ್ರ ಸಚಿವ ಅನುರಾಗ್ ಠಾಕೂರ್ ಅವರು ಪಿಎಂ ಉಜ್ವಲ ಯೋಜನೆಯ ಫಲಾನುಭವಿಗಳಿಗೆ ಎಲ್‌ಪಿಜಿ ಸಬ್ಸಿಡಿ ಏರಿಸಿರುವ ವಿಚಾರವನ್ನು ತಿಳಿಸಿದ್ದಾರೆ. ಇತ್ತೀಚೆಗಷ್ಟೇ 14.2 ಕಿಲೋ ಎಲ್‌ಪಿಜಿ ಸಿಲಿಂಡರ್ ದರವನ್ನು ಕೇಂದ್ರ ಸರ್ಕಾರ 200 ರೂ.ನಷ್ಟು ಇಳಿಕೆ ಮಾಡಿತ್ತು. ಎಲ್ಲಾ ಎಲ್‌ಪಿಜಿ ಬಳಕೆದಾರರಿಗೂ ಇದು ಅನ್ವಯ ಆಗುತ್ತದೆ. ಬೆಂಗಳೂರಿನಲ್ಲಿ 1,105.50 ರೂ. ಇದ್ದ 14.2



ಕಿಲೋ ಎಲ್‌ಪಿಜಿ ಸಿಲಿಂಡರ್ ಬೆಲೆ 905.59 ರುಪಾಯಿಗೆ ಇಳಿದಿದೆ. ಇದು ಸಾಮಾನ್ಯ ಬಳಕೆದಾರರು ನೀಡುವ ದರವಾಗಿದೆ.

ಆದರೆ, ಪಿಎಂ ಉಜ್ವಲ ಯೋಜನೆ ಹೊಂದಿರುವವರಿಗೆ ಸರ್ಕಾರ ಈ ಹಿಂದೆಯೇ 200 ರೂ.ನಷ್ಟು ಸಬ್ಸಿಡಿ ಕೊಟ್ಟಿದೆ. ಈಗ ಮತ್ತೆ 100 ರೂ. ಸಬ್ಸಿಡಿ ಒದಗಿಸುತ್ತದೆ. ಅಲ್ಲಿಗೆ ಈ ಯೋಜನೆಯ ಫಲಾನುಭವಿಗಳಿಗೆ ಒಟ್ಟು 300 ರೂ. ಸಬ್ಸಿಡಿ ಸಿಗುತ್ತದೆ. ಇದರೊಂದಿಗೆ 14.2 ಕಿಲೋ ಎಲ್‌ಪಿಜಿ ಸಿಲಿಂಡರ್ ಅನ್ನು ಪಿಎಂ ಉಜ್ವಲ ಯೋಜನೆಯ ಫಲಾನುಭವಿಗಳು ಬೆಂಗಳೂರಿನಲ್ಲಿ 605.50 ರೂಪಾಯಿಗೆ ಪಡೆಯಬಹುದು.

### ಇಂದು ಶಿವಮೊಗ್ಗ ಹಿಂಸಾಚಾರ ಪೀಡಿತ ಪ್ರದೇಶಕ್ಕೆ ಬಿಜೆಪಿ ಸತ್ಯಶೋಧನಾ ತಂಡ ಭೇಟಿ

ಬೆಂಗಳೂರು, ಅ.4– ಶಿವಮೊಗ್ಗ ಹಿಂಸಾಚಾರ ಪೀಡಿತ ಪ್ರದೇಶಕ್ಕೆ ಭೇಟಿ ನೀಡಲು ಬಿಜೆಪಿಯು ಪಕ್ಷದ ಹಿರಿಯ ಮುಖಂಡರನ್ನು ಒಳಗೊಂಡ ಸತ್ಯಶೋಧನಾ ಸಮಿತಿಯನ್ನು ರಚಿಸಿದೆ. ಗುರುವಾರ ಶಿವಮೊಗ್ಗದ ಹಿಂಸಾಚಾರ ಪೀಡಿತ ಪ್ರದೇಶಕ್ಕೆ ತಂಡ ಭೇಟಿ ನೀಡಲಿದೆ

ಶಿವಮೊಗ್ಗದ ರಾಗಿಗುಡ್ಡ ಪ್ರದೇಶದಲ್ಲಿ ಭಾನುವಾರ ಸಂಜೆ ಈದ್ ಮಿಲಾದ್ ಮೆರವಣಿಗೆ ವೇಳೆ ಉದ್ವಿಗ್ನತೆ ಮತ್ತು ಕಲ್ಲು ತೂರಾಟದ ಘಟನೆಗಳ ನಂತರ ನಿಷೇಧಾಜ್ಞೆ ಜಾರಿಗೊಳಿಸಲಾಗಿದ್ದು, ಪರಿಸ್ಥಿತಿ ಈಗ ಶಾಂತಿಯುತವಾಗಿದೆ ಮತ್ತು ನಿಯಂತ್ರಣದಲ್ಲಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಶಿವಮೊಗ್ಗದ ರಾಗಿಗುಡ್ಡ ಪ್ರದೇಶದಲ್ಲಿ ನಡೆದ ಹಿಂಸಾಚಾರವನ್ನು ತೀವ್ರವಾಗಿ ಖಂಡಿಸಿದ್ದಾರೆ. ಪಕ್ಷದ ನಾಯಕರನ್ನು ಒಳಗೊಂಡ ಸತ್ಯಶೋಧನಾ ತಂಡವನ್ನು ▶ 8ನೇ ಪುಟಕ್ಕೆ

## HALನಿಂದ ಮೊದಲ LCA ತರಬೇತಿ ವಿಮಾನ ವಾಯುಸೇನೆಗೆ ಹಸ್ತಾಂತರ

ಬೆಂಗಳೂರು, ಅ.4– ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (HAL) ಸಂಸ್ಥೆಯು ತನ್ನ ಲಘು ಯುದ್ಧ ವಿಮಾನ (LCA) ಅವಳಿ ಆಸನಗಳ ತರಬೇತಿ ಆವೃತ್ತಿಯ ವಿಮಾನವನ್ನು ಭಾರತೀಯ ವಾಯುಪಡೆಗೆ (IAF) ಹಸ್ತಾಂತರಿಸಿತು.

ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (HAL) ಮುಖ್ಯಸ್ಥರು ಎಲ್‌ಸಿಎ ಮಾದರಿ ವಿಮಾನವನ್ನು ಕೇಂದ್ರ ರಕ್ಷಣಾ ಇಲಾಖೆಯ ರಾಜ್ಯಸಚಿವ ಅಜಯ್ ಭಟ್ ಅವರಿಗೆ ಹಸ್ತಾಂತರಿಸುವ ಮೂಲಕ ಹಸ್ತಾಂತರ ಪ್ರಕ್ರಿಯೆ ಪೂರ್ಣಗೊಳಿಸಿದರು.

ಬಳಿಕ ಮಾತನಾಡಿದ ಕೇಂದ್ರ ರಕ್ಷಣಾ ಇಲಾಖೆ ರಾಜ್ಯ ಸಚಿವ ಅಜಯ್ ಭಟ್ ಅವರು, ಇಂದು ಐತಿಹಾಸಿಕ ದಿನ. ನಾನು HALನಲ್ಲಿರಲು ಮತ್ತು ಇಲ್ಲಿ ಮಾಡಿದ ಎಲ್ಲಾ ಒಪ್ಪಂದಗಳಿಗೆ ಸಾಕ್ಷಿಯಾಗಲು ತುಂಬಾ ಹೆಮ್ಮೆಪಡುತ್ತೇನೆ. ನಾವು ಮೊದಲ LCA ಟ್ವಿನ್–ಸೀಟರ್ ಅನ್ನು IAFಗೆ



ಹಸ್ತಾಂತರಿಸಿದ್ದೇವೆ. ಕೆಲವು ವರ್ಷಗಳ ಹಿಂದೆ ನಾವು ಇತರ ದೇಶಗಳ ಮೇಲೆ ಅವಲಂಬಿತರಾಗಿದ್ದೇವು. ಫೈಟರ್ ಜೆಟ್‌ಗಳಿಗಾಗಿ. ಭಾರತವು ಎಲ್ಲಾ ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ಮಾಡಬೇಕೆಂದು ಪ್ರಧಾನಿ ಮೋದಿ ಬಯಸುತ್ತಾರೆ. ನಾವು ಆತ್ಮನಿರ್ಭರ್ ಪಡೆಯುತ್ತಿದ್ದೇವೆ ಎಂದು ಹೇಳಿದರು.

**ಎಲ್‌ಸಿಎ ವಿಶೇಷತೆ:** ಎಲ್‌ಸಿಎ ತೇಜಸ್ ಟ್ವಿನ್ ಸೀಟರ್ ಹಗುರವಾದ, ಎಲ್ಲಾ ಹವಾಮಾನಕ್ಕೆ ಹೊಂದಿಕೊಳ್ಳುವ ಮಲ್ಟಿಪಲ್ ರೋಲ್‌ನ 4.5 ಪೀಳಿಗೆಯ ವಿಮಾನವಾಗಿದೆ. ಇದು ಸಮಕಾಲೀನ ಪರಿಕಲ್ಪನೆಗಳು ಮತ್ತು ತಂತ್ರಜ್ಞಾನಗಳಾದ ಆರಾಮವಾದ ಸ್ಥಿರತೆ, ಕ್ವಾಡ್ರುಪ್ಲೆಕ್ಸ್ ಫ್ಲೈ–ಬೈ–ವೈರ್ ಫ್ಲೈಟ್ ಕಂಟ್ರೋಲ್, ಕುಶಲತೆ, ಸುಧಾರಿತ ಗ್ಲಾಸ್ ಕಾಕ್‌ಪಿಟ್, ಇಂಟಿಗ್ರೇಟೆಡ್ ಡಿಜಿಟಲ್ ಏವಿಯಾನಿಕ್ಸ್ ಸಿಸ್ಟಮ್‌ಗಳು ಮತ್ತು ಏರ್‌ಫ್ರೇಮ್‌ಗಾಗಿ ಸುಧಾರಿತ ಸಂಯೋಜಿತ ಸಾಮಗ್ರಿಗಳ ಸಂಯೋಜನೆಯಾಗಿದೆ. ಇದು ವಿಶ್ವದರ್ಜೆ ಸಾಮರ್ಥ್ಯದ ಕೆಲವೇ ಕೆಲವು ಗಣ್ಯ ರಾಷ್ಟ್ರಗಳ ಪಟ್ಟಿಗೆ ಭಾರತವನ್ನು ಸೇರಿಸುತ್ತದೆ. ಇದು ಸರ್ಕಾರದ "ಆತ್ಮನಿರ್ಭರ್ ಭಾರತ್" ಉಪಕ್ರಮದ ಮತ್ತೊಂದು ಗರಿಯಾಗಿದೆ.

## ವಾಹನಗಳ ದೋಷಪೂರಿತ ನಂಬರ್ ಪ್ಲೇಟ್ ವಿರುದ್ಧ ಕಾರ್ಯಾಚರಣೆ

ಮೈಸೂರು, ಅ. 4 (ಆರ್‌ಕೆ)– ದೋಷಪೂರಿತ ಹಾಗೂ ನಕಲಿ ನಂಬರ್ ಪ್ಲೇಟ್ ಅಳವಡಿಸಿಕೊಂಡು ಓಡಾಡುವ ವಾಹನ ಸವಾರರ ವಿರುದ್ಧ ಸಂಚಾರ ಪೊಲೀಸರು ಕಾರ್ಯಾಚರಣೆ ಆರಂಭಿಸಿದ್ದಾರೆ. ಮೈಸೂರು ನಗರದಾದ್ಯಂತ ದೋಷಪೂರಿತ ಮತ್ತು ನಕಲಿ ನಂಬರ್ ಪ್ಲೇಟ್ ಅಳವಡಿಸಿಕೊಂಡು ಓಡಾಡುತ್ತಿರುವ ವಾಹನಗಳು ಸಂಚಾರ ನಿಯಮ ಉಲ್ಲಂಘಿಸುತ್ತಿರುವುದಲ್ಲದೆ, ಅಪರಾಧ ಎಸಗುತ್ತಿರುವುದು ಕಂಡು ಬಂದ ಹಿನ್ನೆಲೆಯಲ್ಲಿ ಅವುಗಳನ್ನು ಹತ್ತಿಕ್ಕುವಂತೆ ನಗರ ಪೊಲೀಸ್ ಕಮೀಷನರ್ ಬಿ. ರಮೇಶ್ ಅವರ ನಿರ್ದೇಶನದಂತೆ ಸಂಚಾರ ವಿಭಾಗದ ಪೊಲೀಸರು ಕಾರ್ಯಾಚರಣೆ ಆರಂಭಿಸಿದ್ದಾರೆ.

ಮಂಗಳವಾರ ಸಂಜೆ ಹಾರ್ಡಿಂಜ್ ಸರ್ಕಲ್‌ನಲ್ಲಿ ಕರ್ತವ್ಯನಿರತರಾಗಿದ್ದ, ಸಂಚಾರ ಎಸಿಪಿ ಪರಶುರಾಮಪ್ಪ ಅವರು ಒಂದು ಅಂಕಿಗೆ ಸ್ಟಿಕ್ಕರ್ ಅಂಟಿಸಿಕೊಂಡು ದೋಷಪೂರಿತ ನಂಬರ್ ಪ್ಲೇಟ್‌ನೊಂದಿಗೆ



ಒಂದಂಕಿ ನಂಬರ್ ಅಳಿಸಿ ಓಡಾಡುತ್ತಿದ್ದ ಬೈಕ್ ಸವಾರನನ್ನು ಬೆನ್ನತ್ತಿ ಹಿಡಿದು, ವಾಹನ ವಶಪಡಿಸಿಕೊಂಡ ಸಂಚಾರ ಎಸಿಪಿ ಪರಶುರಾಮಪ್ಪ.

ಹೋಗುತ್ತಿದ್ದ ಯುವಕನನ್ನು ಕಂಡು ನಿಲ್ಲಿಸುವಂತೆ ಹೇಳಿದರೂ ನಿಲ್ಲಿಸದೇ ಪರಾರಿಯಾಗಲೆತ್ನಿಸಿದಾಗ ಆತನನ್ನು ಬೆನ್ನತ್ತಿದರು. ಹಿಂದೆ ಪೊಲೀಸ್ ವಾಹನ ಬರುತ್ತಿದೆ ಎಂಬುದನ್ನು ನೋಡಿದ ಯುವಕ ಕೆ.ಆರ್. ಸರ್ಕಲ್ ಮೂಲಕ ಡಿ. ದೇವರಾಜ ಅರಸು ರಸ್ತೆ ಮಾರ್ಗವಾಗಿ ತಪ್ಪಿಸಿಕೊಳ್ಳಲೆತ್ನಿಸಿದನಾದರೂ, ಪರಶುರಾಮಪ್ಪ ಅವರು ಅವನನ್ನು, ಅರಸು ರಸ್ತೆಯಲ್ಲಿ ಹಿಡಿದು ನಿಲ್ಲಿಸಿದರು. ವಿಚಾರಣೆ ನಡೆಸಿದಾಗ ಬೈಕ್ ಸವಾರ ಶ್ರೀರಂಗಪಟ್ಟಣ ತಾಲೂಕಿನ ನಗುವನಹಳ್ಳಿ ಗ್ರಾಮದ ಬಸವಶೆಟ್ಟಿ ಅವರ ಮಗ ಪುರುಷೋತ್ತಮ ಎಂಬುದು ತಿಳಿಯಿತು. ತನ್ನ ಹೀರೋ ಹೋಂಡಾ ಸ್ಪ್ಲೆಂಡರ್ ಬೈಕಿನ ನೋಂದಣಿ ಸಂಖ್ಯೆ ಕೆಎ–09–ಜೆಹೆಚ್ 6376ಯ ನಂಬರ್ ಪ್ಲೇಟ್‌ನಲ್ಲಿ ಒಂದಂಕಿಯನ್ನು ಸ್ಟಿಕ್ಕರ್ ಹಾಕಿ ಕಾಣಿಸದಂತೆ ಮಾಡಿ ಓಡಾಡಿಸುತ್ತಿದ್ದ ಎಂಬುದು ಖಾತರಿಯಾದ ಬಳಿಕ ದೇವರಾಜ ಸಂಚಾರ ಠಾಣೆಗೆ ಆತನನ್ನು ▶ 8ನೇ ಪುಟಕ್ಕೆ



# ಅಂಚೆ ನೌಕರರ ಪ್ರತಿಭಟನೆ



ಮೈಸೂರು,ಅ.4(ಜಿಎ)–ಅಖಿಲ ಭಾರತ ಗ್ರಾಮೀಣ ಅಂಚೆ ನೌಕರರ ಸಂಘದಿಂದ ವಿವಿಧ ಬೇಡಿಕೆಗಳ ಈಡೇರಿಸುವಂತೆ ಆಗ್ರಹಿಸಿ ಆಕಾಶವಾಣಿ ಬಳಿಯ ವಿಭಾಗೀಯ ಕಚೇರಿ ಎದುರು ಪ್ರತಿಭಟಿಸಿದರು.

ಪ್ರತಿದಿನ 8 ಗಂಟೆ ಕೆಲಸ ನೀಡುವುದು, ಪಿಂಚಣಿ ಸೇರಿದಂತೆ ಎಲ್ಲಾ ಸವಲತ್ತುಗಳನ್ನು ಒದಗಿಸಬೇಕು. ಸೇವಾ ಹಿರಿತನದ ಆಧಾರದ ಮೇಲೆ ಸೇವೆ ಸಲ್ಲಿಸಿದ ಜಿಡಿಎಸ್ ನೌಕರರಿಗೆ ವಿಶೇಷ ಹೆಚ್ಚುವರಿ ಭತ್ಯೆ ನೀಡಿ, ಗ್ರೂಪ್ ವಿಮೆ ಕವರೇಜ್ 5ಲಕ್ಷ ರೂ.ವರೆಗೆ ಹೆಚ್ಚಿಸಬೇಕೆಂದು ಆಗ್ರಹಿಸಿದರು.

ಅವೈಜ್ಞಾನಿಕ ಗುರಿ ಸಾಧಿಸದಿರುವ ಜಿಡಿಎಸ್ ನೌಕರರಿಗೆ ನೀಡುತ್ತಿರುವ ಕಿರುಕುಳವನ್ನು ನಿಲ್ಲಿಸಿ, ಗ್ರಾಚ್ಯುಯಿಟಿ ಹಣವನ್ನು 5 ಲಕ್ಷ ರೂ.ವರೆಗೆ ಹೆಚ್ಚಿಸುವುದರ ಜೊತೆಗೆ 180 ದಿನಗಳ ರಜೆ ಉಳಿಸಿಕೊಳ್ಳಲು ಅವಕಾಶ ಕಲ್ಪಿಸಿಕೊಡಬೇಕು. ಜಿಡಿಎಸ್ ಸದಸ್ಯರು ಮತ್ತು ಕುಟುಂಬದ ಸದಸ್ಯರಿಗೆ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ವಿಭಾಗೀಯ ಅಧ್ಯಕ್ಷ ಎಸ್.ಆರ್. ಸೋಮಶೇಖರ್, ಕಾರ್ಯದರ್ಶಿ ಟಿ.ರಾಣಿ ಮತ್ತಿತರರು ಪಾಲ್ಗೊಂಡಿದ್ದರು.



ಪರಿಸರ ಸಂರಕ್ಷಣೆ ಮತ್ತು ಸುಸ್ಥಿರ ಅಭಿವೃದ್ಧಿ ಅಭ್ಯಾಸಗಳು ಮತ್ತು PCB ಉತ್ಪಾದನೆಯಲ್ಲಿನ ಶ್ರೇಷ್ಠತೆಗಾಗಿ ಮೈಸೂರಿನ ಎಟಿ ಅಂಡ್ ಎಸ್ ಎರಡು ರಾಷ್ಟ್ರೀಯ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದೆ. ನವದೆಹಲಿಯಲ್ಲಿ ನಡೆದ ಸಮಾರಂಭದಲ್ಲಿ ಭಾರತ ಸರ್ಕಾರದ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ನಿರ್ದೇಶಕರಿಂದ ಎಟಿ ಅಂಡ್ ಎಸ್ ಹಿರಿಯ ನಿರ್ದೇಶಕ ಸಂತೋಷ್ ಗುಂಡಾಪಿ ಪ್ರಶಸ್ತಿ ಸ್ವೀಕರಿಸಿದರು. ಈ ವೇಳೆ NPI ತಂತ್ರಜ್ಞಾನದ ಹಿರಿಯ ವ್ಯವಸ್ಥಾಪಕ ಹೆಚ್.ವಿ.ಚರಣ್, ಪರಿಸರ ಸಂರಕ್ಷಣೆ ಮತ್ತು ಸುಸ್ಥಿರ ಅಭಿವೃದ್ಧಿ ಅಭ್ಯಾಸಗಳ ಪ್ರಶಸ್ತಿಯನ್ನು ಇಎಚ್‌ಎಸ್ ಮುಖ್ಯಸ್ಥ ಎ.ರವಿ ಹಾಗೂ ಗುಣಮಟ್ಟದ ಪ್ರಶಸ್ತಿಯನ್ನು ಪ್ರಧಾನ ವ್ಯವಸ್ಥಾಪಕ ಎ.ವಿದ್ಯಾಸಾಗರ್, ವಾಣಿಜ್ಯ ವಿಭಾಗದ ವ್ಯವಸ್ಥಾಪಕ ಕೆ.ಮಂಜುನಾಥ ರಫ್ತು ಪ್ರಶಸ್ತಿಯನ್ನು ಸ್ವೀಕರಿಸಿದರು.

# ಅ.7, ಲೋಕದ ಒಳಹೊರಗೆ ನಾಟಕ ಪ್ರದರ್ಶನ



ಮೈಸೂರು, ಅ.4(ಜಿಎ)–ರಂಗ ಸಂಪದ ರಂಗ ತಂಡದ 50ನೇ ವರ್ಷದ ಸಂಭ್ರಮದ ಅಂಗವಾಗಿ ಮೈಸೂರಿನ ನಟನ ರಂಗ ಶಾಲೆಯಲ್ಲಿ ಅ.7ರಂದು 'ಲೋಕದ ಒಳಹೊರಗೆ' ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ಅಧ್ಯಕ್ಷ ಜೆ.ಲೋಕೇಶ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 6.30ಕ್ಕೆ ಪ್ರದರ್ಶನ ಏರ್ಪಡಿಸಲಾಗಿದೆ. ರಂಗ ಸಂಪದವೂ ಕಳೆದ 50 ವರ್ಷಗಳಿಂದ ಒಡಲಾಳ, ಕದಡಿದ ನೀರು, ಸಂಗ್ಯಾ ಬಾಳ್ಯ ಮತ್ತು ಕಿರು ನಾಟಕಗಳು ಸೇರಿದಂತೆ 50 ನಾಟಕಗಳನ್ನು ಪ್ರದರ್ಶಿಸಿದ್ದು, ಸುವರ್ಣ ಸಂಭ್ರಮದಲ್ಲಿರುವ ತಂಡವು ರವೀಂದ್ರನಾಥ ಟಾಗೋರ್ ಅವರ ಘರೇ ಬೈರೇ ಕಾದಂಬರಿಯನ್ನು ಆಧರಿಸಿದ 'ಲೋಕದ ಒಳಹೊರಗೆ' ನಾಟಕವನ್ನು ಬಿ.ಸುರೇಶ್ ನಿರ್ದೇಶಿಸಿದ್ದಾರೆ ಎಂದರು.

ನಂತರ ನಟ, ನಿರ್ಮಾಪಕ, ರಂಗಕರ್ಮಿ ಮತ್ತು ನಾಟಕದ ನಿರ್ದೇಶಕರೂ ಆದ ಬಿ.ಸುರೇಶ್ ಮಾತನಾಡಿ, ಟಾಗೋರರು 1916ರಲ್ಲಿ ಧಾರಾವಾಹಿ ರೂಪದಲ್ಲಿ ಪ್ರಕಟಿಸಿದ್ದು, ನಂತರ 1923ರಲ್ಲಿ ಘರೇ ಬೈರೇ ಕೃತಿ ಕಾದಂಬರಿ ರೂಪದಲ್ಲಿ ಮೂಡಿಬಂದಿದ್ದು, ಅದರಲ್ಲಿ ವಿಷಯಗಳು ಇಂದಿಗೂ ಅತ್ಯಂತ ಪ್ರಸ್ತುತವಾಗಿವೆ. ಹಾಗಾಗಿ ಅದೇ ಚರ್ಚೆಯನ್ನು ಈ ರಂಗರೂಪವು ನೋಡುಗರಿಗೆ ನೀಡುತ್ತದೆ ಎಂದು ತಿಳಿಸಿದರು.

ಈಗಾಗಲೇ ಬೆಂಗಳೂರಿನ ಕಲಾ ಗ್ರಾಮ, ರಂಗಶಂಕರ, ರವೀಂದ್ರ ಕಲಾ ಕ್ಷೇತ್ರಗಳಲ್ಲಿ ಪ್ರದರ್ಶನ ಕಂಡಿದ್ದು, ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ಪಡೆದುಕೊಂಡಿದೆ. ಮೈಸೂರಲ್ಲಿ ರಂಗಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಬರುವ ನಿರೀಕ್ಷೆ ಇದೆ. ಮುಂದಿನ ದಿನಗಳಲ್ಲಿ ಮೈಸೂರಲ್ಲಿ ಮತ್ತೊಂದು ಪ್ರದರ್ಶನ ಏರ್ಪಡಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ರಂಗಕರ್ಮಿ ಮಂಡ್ಯ ರಮೇಶ್, ತಂಡ ಕಾರ್ಯದರ್ಶಿ ನಾಗೇಶ್, ಗಣೇಶ್ ಅಮೀನ್‌ಗಡ ಉಪಸ್ಥಿತರಿದ್ದರು.

# ಇಂದು ಮೈಸೂರಿಗೆ ಶೌರ್ಯ ಜಾಗರಣ ರಥ




ಮೈಸೂರು,ಅ.4(ಜಿಎ)–ವಿಶ್ವ ಹಿಂದೂ ಪರಿಷತ್‌ನ ಬಜರಂಗ ದಳದಿಂದ ನಡೆಯುತ್ತಿರುವ ಶೌರ್ಯ ಜಾಗರಣ ರಥ ಯಾತ್ರೆ ಅ.5ರಂದು ಮೈಸೂರು ತಲುಪಲಿದೆ ಎಂದು ಪರಿಷತ್ ಜಿಲ್ಲಾ ಕಾರ್ಯದರ್ಶಿ ಮಧುಶಂಕರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೆ.25ರಂದು ಚಿತ್ರದುರ್ಗದಿಂದ ಪ್ರಾರಂಭವಾಗಿರುವ ಯಾತ್ರೆಯು ಸನಾತನ ಧರ್ಮ ರಕ್ಷಣೆ ಉದ್ದೇಶ ಹೊಂದಿದ್ದು, ಈ ಯಾತ್ರೆಯು ಅಂದು ಬೆಳಗ್ಗೆ 9.30ಕ್ಕೆ ನಂಜನಗೂಡು ಮಾರ್ಗವಾಗಿ ಗಣಪತಿ ಸಚ್ಚಿದಾನಂದ ಆಶ್ರಮದ ಬಳಿ ನಗರಕ್ಕೆ ಆಗಮಿಸಲಿದೆ ಎಂದು ಹೇಳಿದರು.

ಯಾತ್ರೆಯು ಬೆಳಗ್ಗೆ 10 ಗಂಟೆಗೆ ವಿನಯ ಮಾರ್ಗದ ಸಂಗೀತ ಕಾರ್ನರ್ ಬಳಿ ಸಾಗಲಿದ್ದು, 10.45ಕ್ಕೆ ರಾಜ್‌ಕುಮಾರ್ ರಸ್ತೆಯ ಬಿಎಸ್‌ಎನ್‌ಎಲ್ ಮೈದಾನದಲ್ಲಿ ಸಭಾ ಕಾರ್ಯಕ್ರಮ ನಡೆಯಲಿದೆ. ನಂತರ 11.15ಕ್ಕೆ ತ್ರಿವೇಣಿ ಸರ್ಕಲ್, ಮಧ್ಯಾಹ್ನ 12ಕ್ಕೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಸಭಾ ಕಾರ್ಯಕ್ರಮ ಹಾಗೂ 12.45ಕ್ಕೆ ಆರ್‌ಗೇಟ್ ಸರ್ಕಲ್, ಗನ್‌ಹೌಸ್ ಮೂಲಕ ಸಾಗಿ ಮಧ್ಯಾಹ್ನ 1ಕ್ಕೆ ಮೈಸೂರು –ಹುಣಸೂರು ರಸ್ತೆ ಮೂಲಕ ಮಧ್ಯಾಹ್ನ 2 ಗಂಟೆಗೆ ಬಿಳಿಕೆರೆ ಗ್ರಾಮದಲ್ಲಿ ಬೀಳ್ಕೊಡುಗೆ ನೀಡಲಾಗುವುದು ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಪರಿಷತ್‌ನ ಕಾನೂನು ವಿಭಾಗದ ಪ್ರಮುಖ್ ಅಂಬಿಕಾ, ಜಿಲ್ಲಾ ಮಹಿಳಾ ಘಟಕದ ಪ್ರಮುಖ್ ಸವಿತಾ ಘಾಟ್ಕೆ, ಜಿಲ್ಲಾ ಪ್ರಮುಖ್ ಲೋಕೇಶ್, ಮಠ ಮಂದಿರ ಪ್ರಮುಖ್ ಜನಾರ್ಧನ್ ಇದ್ದರು.

# ನಿಧನ



### ಶ್ರೀಮತಿ ಧರ್ಮಾಂಭ

ಮೈಸೂರು, ಅ.4– ಮೈಸೂರಿನ ಶ್ರೀರಾಂಪುರ ಬಡಾವಣೆ, ಎಸ್‌ಬಿಎಂ ಲೇಔಟ್ ನಿವಾಸಿ ಶ್ರೀಮತಿ ಧರ್ಮಾಂಭ ಅವರು ಮಂಗಳವಾರ ರಾತ್ರಿ ನಿಧನರಾಗಿದ್ದಾರೆ. ಅವರಿಗೆ 84 ವರ್ಷ ವಯಸ್ಸಾಗಿತ್ತು. ದಿವಂಗತರು ಶ್ರೀಮತಿ ಇಂದಿರಾ ಶಿವರಾಂ ಸೇರಿದಂತೆ ಇಬ್ಬರು ಪುತ್ರಿಯರು, ಓರ್ವ ಪುತ್ರ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಬುಧವಾರ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಹಸೀನಾ ತಾಜ್



ಮೈಸೂರಿನ ಬನ್ನಿಮಂಟಪ ನಿವಾಸಿ ಪಾಲಿಕೆ ಮಾಜಿ ಸದಸ್ಯ ದಿವಂಗತ ಜೈನಾಬ್‌ಬಿ ಅವರ ಪುತ್ರಿ ಹಸೀನಾ ತಾಜ್ (53) ಬುಧವಾರ ನಿಧನರಾದರು. ಮೃತರು ಪತಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಟಿಪ್ಪು ಸರ್ಕಲ್‌ನಲ್ಲಿರುವ ಮುಸ್ಲಿಂ ರುದ್ರಭೂಮಿಯಲ್ಲಿ ನೆರವೇರಿತು.

# ದಸರಾ ಹಿನ್ನೆಲೆ: ಮೈಸೂರು ನಗರ, ರಿಂಗ್ ರಸ್ತೆ ಸ್ವಚ್ಛತೆ

## ನಗರಪಾಲಿಕೆ, ಪುರಸಭೆ, ಪಟ್ಟಣ ಪಂಚಾಯ್ತಿ ಅಧಿಕಾರಿಗಳಿಗೆ ಸಂಸದ ಪ್ರತಾಪ್ ಸಿಂಹ, ಮೇಯರ್ ಶಿವಕುಮಾರ್ ತಾಕೀತು

ಮೈಸೂರು,ಅ.4(ಆರ್‌ಕೆ)–ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಮೈಸೂರು ನಗರ ಹಾಗೂ ರಿಂಗ್ ರಸ್ತೆಯಾದ್ಯಂತ ಸ್ವಚ್ಛತಾ ಕಾರ್ಯ ಕೈಗೊಂಡು ಪ್ರವಾಸಿಗರಿಗೆ ಸ್ವಚ್ಛ ನಗರದ ದರ್ಶನ ಮಾಡಿಸುವಂತೆ ಸಂಸದ ಪ್ರತಾಪ್ ಸಿಂಹ ಹಾಗೂ ಮೇಯರ್ ಶಿವಕುಮಾರ್ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ಮೈಸೂರು ಮಹಾನಗರಪಾಲಿಕೆ ಕಚೇರಿ ಸಭಾಂಗಣದಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ದಸರಾ ಸಮೀಪಿಸುತ್ತಿರುವುದರಿಂದ ದೇಶ, ವಿದೇಶಗಳಿಂದ ಬರುವ ಪ್ರವಾಸಿಗರಿಗೆ ಸ್ವಚ್ಛ ನಗರಿ ಮೈಸೂರು ದರ್ಶನವಾಗಬೇಕು. ನಿತ್ಯ ಉತ್ಪತ್ತಿಯಾಗುವ ತ್ಯಾಜ್ಯವನ್ನು ವಿಲೇವಾರಿ ಮಾಡಬೇಕು. ದಸರಾ ಕಾರ್ಯಕ್ರಮಗಳು ಮುಗಿಯುತ್ತಿದ್ದಂತೆಯೇ ಸ್ಥಳವನ್ನು ಸ್ವಚ್ಛಗೊಳಿಸಬೇಕು ಎಂದು ಸೂಚಿಸಿದರು.



ದಸರಾ ಮಹೋತ್ಸವ ಮುಗಿಯುವವರೆಗೆ ಮೈಸೂರು ನಗರದಾದ್ಯಂತ ಸ್ವಚ್ಛತೆ ಮಾಡಲು 385 ಹೆಚ್ಚುವರಿ ಸಿಬ್ಬಂದಿಯನ್ನು 13 ದಿನಗಳವರೆಗೆ ನೇಮಿಸಿಕೊಳ್ಳಲು ಟೆಂಡರ್ ಕರೆಯಲಾಗಿದ್ದು, ದಿನದ ಮೂರು ಪಾಳಿಯಲ್ಲಿ ಪೌರಕಾರ್ಮಿಕರು ಸ್ವಚ್ಛತಾ ಕಾರ್ಯ ಕೈಗೊಳ್ಳುವರು ಎಂದು ನಗರಪಾಲಿಕೆ ಹೆಚ್ಚುವರಿ ಉಪ ಆಯುಕ್ತರಾದ ರೂಪಾ ಸಭೆಗೆ ತಿಳಿಸಿದರು.

ಪ್ರತಿದಿನ ಮನೆ ಮನೆಯಿಂದ ತ್ಯಾಜ್ಯ ಸಂಗ್ರಹ ವಿಲೇವಾರಿ ಜೊತೆಗೆ ರಸ್ತೆಗಳು, ದಸರಾ ಯುವ ಸಂಭ್ರಮ, ಆಹಾರ ಮೇಳ ಇನ್ನಿತರ ಕಾರ್ಯಕ್ರಮಗಳು ನಡೆಯುವ ಸ್ಥಳಗಳನ್ನು ತಕ್ಷಣವೇ ಸ್ವಚ್ಛಗೊಳಿಸಲು ವ್ಯವಸ್ಥೆ ಮಾಡಬೇಕೆಂದು ಸಂಸದ, ಮೇಯರ್ ತಾಕೀತು ಮಾಡಿದರು. ಅದೇ ರೀತಿ ರಿಂಗ್ ರಸ್ತೆಯನ್ನು ಸ್ವಚ್ಛಗೊಳಿಸುವ ಅಭಿಯಾನ ಕೈಗೊಂಡು ಎರಡೂ ಬದಿಯಲ್ಲಿ ಸುರಿದಿರುವ ಘನತ್ಯಾಜ್ಯ ಹಾಗೂ ಕಟ್ಟಡ ತ್ಯಾಜ್ಯ ತೆರವುಗೊಳಿಸಲು ಪಾಲಿಕೆಯು 30 ಮಂದಿ ಸಿಬ್ಬಂದಿಯನ್ನು 15 ದಿನಗಳವರೆಗೆ ನಿಯೋಜಿಸಬೇಕು ಎಂದು ಪ್ರತಾಪ್ ಸಿಂಹ ಸೂಚನೆ ನೀಡಿದರು.

ಪಾಲಿಕೆ ವ್ಯಾಪ್ತಿಗೆ ಬರುವ 15 ಕಿ.ಮೀ. ರಿಂಗ್ ರಸ್ತೆಯನ್ನು ಆರೋಗ್ಯ ವಿಭಾಗದ ಅಧಿಕಾರಿಗಳು ಪೌರಕಾರ್ಮಿಕರಿಂದ ಸ್ವಚ್ಛಗೊಳಿಸಬೇಕು. ಉಳಿದ ಭಾಗವನ್ನು ಹೂಟಗಳ್ಳಿ, ಶ್ರೀರಾಂಪುರ, ರಮ್ಮನಹಳ್ಳಿ ಪಟ್ಟಣ ಪಂಚಾಯ್ತಿ ಮತ್ತು ನಗರಸಭೆ ವತಿಯಿಂದ ಸ್ವಚ್ಛಗೊಳಿಸಬೇಕೆಂದೂ ಅವರು ತಿಳಿಸಿದರು.

ಕಟ್ಟಡ ತ್ಯಾಜ್ಯ, ಪಾರಂಪರಿಕ ತ್ಯಾಜ್ಯ (ಲೆಗಸಿ ವೇಸ್ಟ್) ಗಳನ್ನು ರಿಂಗ್ ರೋಡ್‌ಗೆ ತಂದು ಸುರಿಯುವುದನ್ನು ತಡೆಯಬೇಕು. ಬೀದಿದೀಪಗಳು ಸರಿಯಾಗಿ ಆನ್ ಅಂಡ್ ಆಫ್ ಆಗುವಂತೆ ನೋಡಿಕೊಳ್ಳುವಂತೆಯೂ ಸಂಸದರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಸಿಂಧು, ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳು, ಸೀನಿಯರ್ ಆರೋಗ್ಯಾಧಿಕಾರಿ ಡಾ.ಎಂ.ಪಿ. ವೆಂಕಟೇಶ್, ಆರೋಗ್ಯ ನಿರೀಕ್ಷಕರು, ಪರಿಸರ ಇಂಜಿನಿಯರ್‌ಗಳು ಸಭೆಯಲ್ಲಿ ಹಾಜರಿದ್ದರು.

# 7 ಸಾವಿರಕ್ಕೂ ಹೆಚ್ಚು ರೌಡಿಶೀಟರ್‌ಗಳಿಗೆ ಬಿಜೆಪಿ ಸರ್ಕಾರದಿಂದ ಕ್ಲೀನ್‌ಚಿಟ್

## ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆರೋಪ

ಬೆಂಗಳೂರು, ಅ.4(ಕೆಎಂಶಿ)–ಏಳು ಸಾವಿರಕ್ಕೂ ಹೆಚ್ಚು ರೌಡಿಶೀಟರ್‌ಗಳಿಗೆ ಬಿಜೆಪಿ ಸರ್ಕಾರ ಕ್ಲೀನ್‌ಚಿಟ್ ನೀಡಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಗುರುತರ ಆರೋಪಿಸಿದ್ದಾರೆ.

ಶಿವಮೊಗ್ಗ ಕೋಮುಗಲಭೆ ಹಾಗೂ ಹುಬ್ಬಳ್ಳಿ ಪ್ರಕರಣವನ್ನು ಮುಂದಿಟ್ಟುಕೊಂಡು ಮಾತನಾಡಿದ ಡಿ.ಕೆ.ಶಿವಕುಮಾರ್, ಬಿಜೆಪಿ ಆಡಳಿತದಲ್ಲಿ ಮಾಡಬಾರದನ್ನು ಮಾಡಿ ನಮಗೆ ಬುದ್ಧಿವಾದ ಹೇಳಲು ಹೊರಟಿದ್ದಾರೆ. ಬಿಜೆಪಿ ಸರಕಾರ ಕೋಮು ಘಟನೆಗೆ ಸಂಬಧಪಟ್ಟ ಸಾವಿರಾರು ಪ್ರಕರಣಗಳನ್ನು ಕೈಬಿಟ್ಟಿದೆ. ಜತೆಗೆ ಸಾವಿರಾರು ರೌಡಿಶೀಟರ್‌ಗಳನ್ನು ಬೀದಿಗೆ ಬಿಟ್ಟಿದೆ. ಬಿಜೆಪಿಯವರಿಗೆ ತಮ್ಮ ಮನೆ ಹುಳುಕು, ದೋಸೆ ತೂತು ಕಾಣುತ್ತಿಲ್ಲ. ವಿರೋಧ ಪಕ್ಷದ ನಾಯಕನನ್ನು ಆಯ್ಕೆ ಮಾಡದವರು ನಮಗೆ ಪ್ರಶ್ನೆ ಮಾಡುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು.

ಬಿಜೆಪಿಯವರು ಅವರ ಅಧಿಕಾರವಧಿಯಲ್ಲಿ ಏನೇನು ಮಾಡಿದರು ಎಂಬುದು ಜನರಿಗೆ ಗೊತ್ತಿಲ್ಲ ಎಂದು ತಿಳಿದುಕೊಂಡಿದ್ದಾರೆ. ಜನ ಅವರನ್ನು ಎಲ್ಲಿ ಕೂರಿಸಬೇಕೊ ಅಲ್ಲಿ ಕೂರಿಸಿದ್ದಾರೆ. ಬಿಜೆಪಿ ಸರ್ಕಾರದಲ್ಲಿ ಯಾವ, ಯಾವ ಪ್ರಕರಣಗಳನ್ನು ಹಿಂಪಡೆಯಬೇಕು ಎಂದು ಮನವಿ ಮಾಡಿದವರ ಪಟ್ಟಿ ನಮ್ಮ ಬಳಿ ಇದೆ. ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ಆರಗ ಜ್ಞಾನೇಂದ್ರ, ಮಾಧುಸ್ವಾಮಿ ಸೇರಿದಂತೆ ಅನೇಕರು ಮನವಿ ಮಾಡಿದ್ದರು. 2023ರ ಜನವರಿ ಹಾಗೂ ಫೆಬ್ರವರಿ ತಿಂಗಳಿನಲ್ಲಿ 7,361 ರೌಡಿ ಶೀಟರ್‌ಗಳನ್ನು ಪಟ್ಟಿಯಿಂದ ಕೈ ಬಿಟ್ಟಿದ್ದೇ ಬಿಜೆಪಿ ಸರ್ಕಾರ. ಅವರು ಈಗ ನಮಗೆ ಬುದ್ಧಿ ಹೇಳಲು ಬರುತ್ತಿದ್ದಾರೆ ಎಂದರು.



ಬಿಜೆಪಿಯವರು ಅವರ ಕಾರ್ಯಕರ್ತರ ಪರವಾಗಿ ರಾಜಕಾರಣ ಮಾಡಿದ್ದಾರೆ. ನಾವು ಕಾನೂನು ಪ್ರಕಾರ ನಡೆದುಕೊಳ್ಳುತ್ತಿದ್ದೇವೆ. ಅಮಾಯಕರ ಮೇಲೆ ಇರುವ ಪ್ರಕರಣಗಳನ್ನು ಮಾತ್ರ ಪರಿಶೀಲನೆ ಮಾಡುತ್ತಿದ್ದೇವೆ. ಕಾನೂನಿನ ಚೌಕಟ್ಟಿನಲ್ಲಿ ಮಾಡಲು ಅವಕಾಶವಿದ್ದರೇ ಮಾಡಬಹುದು ಎಂದು ಅಧಿಕಾರಿಗಳು ಶಿಫಾರಸ್ಸು ಮಾಡುತ್ತಾರೆ. ಇದಕ್ಕೆಂದೇ ಸಮಿತಿ ಇದೆ. ಅವರು ವರದಿ ನೀಡಿದ ಮೇಲೆ ತೀರ್ಮಾನ ಮಾಡಲಾಗುತ್ತದೆ ಎಂದು ಹೇಳಿದರು.

ಪ್ರಕರಣಗಳನ್ನು ಹಿಂಪಡೆಯಲು ಸರ್ಕಾರ ಆತುರದಲ್ಲಿ ಇದೆಯೇ ಎನ್ನುವ ಪ್ರಶ್ನೆಗೆ, ನನ್ನ ಮೇಲೂ ಸಾಕಷ್ಟು ಪ್ರಕರಣಗಳು ಇವೆ, ಈಗಲೂ ಅನೇಕ ಚಾಲ್ತಿಯಲ್ಲಿವೆ. ಅನೇಕ ಪ್ರಕರಣಗಳನ್ನು ರಾಜಕೀಯ ಉದ್ದೇಶಕ್ಕೆ ಹಾಕಲಾಗಿದೆ.

ಪ್ರಕರಣ ಹಿಂಪಡೆಯಲು ನಮಗೆ ಏನೂ ಅವಸರ ಇಲ್ಲ, ಬಿಜೆಪಿಯವರೇ ತರಾತುರಿಯಲ್ಲಿ ಇದ್ದಾರೆ. ನೀವು (ಮಾಧ್ಯಮದವರು) ಅವರನ್ನು ಪ್ರತಿದಿನ ತೋರಿಸುತ್ತಾ ಇದ್ದೀರಿ. ಅದಕ್ಕೆ ಅವರು ಆ ರೀತಿ ಹೇಳುತ್ತಿದ್ದಾರೆ ಎಂದರು. ಯಾರ್ಯಾರು ಪ್ರಕರಣ ಹಿಂಪಡೆಯಲು ಪತ್ರ ಬರೆದಿದ್ದರು, ಸಹಿ ಹಾಕಿದ್ದರು ಆ ಪತ್ರಗಳನ್ನೆಲ್ಲಾ ಮುಂದಿಡಲೇ? ನಾನು ಹೆಸರಿಸಿದವರು ಗಲಭೆ ಪ್ರಕರಣಗಳನ್ನು ಹಿಂಪಡೆಯಲು ಶಿಫಾರಸ್ಸು ಮಾಡಿಲ್ಲ ಎಂದು ಹೇಳಲಿ. ಅವರೇ ಬರೆದಿರುವ ಪತ್ರಗಳನ್ನು ಬಿಡುಗಡೆ ಮಾಡುತ್ತೇನೆ ಎಂದು ಸವಾಲು ಹಾಕಿದರು.

ಬಿಹಾರ ಮಾದರಿಯಲ್ಲಿ ಜಾತಿ ಜನಗಣತಿ ವರದಿ ಬಿಡುಗಡೆ ಮಾಡಬೇಕು ಎಂಬ ಒತ್ತಾಯದ ಬಗ್ಗೆ ಕೇಳಿದಾಗ, "ನಮ್ಮ ಸರ್ಕಾರವೇ ಕಾಂತರಾಜು ಸಮಿತಿ ವರದಿಯನ್ನು ಮಾಡಿಸಿದ್ದು. ನಮ್ಮ ಪಕ್ಷದಲ್ಲೂ ಇದರ ಬಗ್ಗೆ ನಿಲುವು ವ್ಯಕ್ತವಾಗಿದೆ. ರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಪಕ್ಷ ಒಂದು ನಿಲುವು ತೆಗೆದುಕೊಳ್ಳುತ್ತದೆ. ಅದರಂತೆ ನಾವು ನಡೆಯುತ್ತೇವೆ. ಒಂದಷ್ಟು ಜನ ಅಪೇಕ್ಷೆ, ಆಕ್ಷೇಪ ಎಲ್ಲ ವ್ಯಕ್ತಪಡಿಸುತ್ತಿದ್ದಾರೆ. ಆದಷ್ಟು ಬೇಗ ಒಂದು ನಿಲುವಿಗೆ ನಾವು ಬರುತ್ತೇವೆ" ಎಂದರು.

ಸರ್ಕಾರದ ಮನಸ್ಥಿತಿ ಹೇಗಿದೆಯೋ ಅದೇ ರೀತಿ ಉಳಿದವರು ಇರುತ್ತಾರೆ. ಅದಕ್ಕೆ ಶಿವಮೊಗ್ಗ ಗಲಭೆ ನಡೆದಿದೆ ಎಂಬ ಸಂಸದ ಪ್ರತಾಪ್ ಸಿಂಹ ಅವರ ಮಾತಿಗೆ ಪ್ರತಿಕ್ರಿಯಿಸಿ, ಹಿಂದೆ ಮೈಸೂರಿನಲ್ಲಿ ಹೊಡೆದಾಟ, ಬಡಿದಾಟ ಮಾಡಿದ್ರಲ್ಲ? ಆಗ ಯಾವ ಮನಸ್ಥಿತಿ ಕೆಲಸ ಮಾಡಿತ್ತು ಎಂದು ಮರು ಪ್ರಶ್ನಿಸಿದರು.

# ಕೆ.ಹೆಮ್ಮನಹಳ್ಳಿಯ ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ಗ್ರಾಮೀಣ ದಸರಾ

ಮೈಸೂರು,ಅ.4–ಮೈಸೂರು ದಸರಾ ಪ್ರಯುಕ್ತ ಅ.15ರಿಂದ 22ರವರೆಗೆ ಪ್ರತಿ ದಿನ ಬೆಳಗ್ಗೆ 6ರಿಂದ ಯೋಗ ಶಿಬಿರ, ಸಂಜೆ 5 ಗಂಟೆಯಿಂದ ರಂಗಗೀತೆಗಳ ಗಾಯನ ಮತ್ತು ರಾತ್ರಿ ವಿಶೇಷ ಪೂಜೆ, ಅಲಂಕಾರ, ತೀರ್ಥಪ್ರಸಾದ ವಿನಿಯೋಗ ಕಾರ್ಯಕ್ರಮವನ್ನು ಕೆ.ಹೆಮ್ಮನಹಳ್ಳಿಯ ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ಏರ್ಪಡಿಸಲಾಗಿದೆ. ಇದೇ ವೇಳೆ ಪಂಚಯೋಗ ನಮಸ್ಕಾರಗಳಾದ ಗಣಪತಿ ನಮಸ್ಕಾರ, ಸೂರ್ಯ ನಮಸ್ಕಾರ, ದುರ್ಗಾ ನಮಸ್ಕಾರ, ಶಿವ ನಮಸ್ಕಾರ ಮತ್ತು ವಿಷ್ಣು ನಮಸ್ಕಾರಗಳನ್ನು ಉಚಿತವಾಗಿ ಕಲಿಸಲಾಗುವುದು. ಅಲ್ಲದೆ ಉತ್ತಮ ಆರೋಗ್ಯಕ್ಕೆ ದಿನನಿತ್ಯ ಅಳವಡಿಸಿಕೊಳ್ಳಬೇಕಾದ ಆಸನಗಳು, ಪ್ರಾಣಾಯಾಮ ತರಬೇತಿ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ ಪಿ.ರವಿಕುಮಾರ್ –9986919032, 9945861398 ಸಂಪರ್ಕಿಸಬಹುದು. ಪ್ರತಿದಿನ ಸಂಜೆ 5 ಗಂಟೆಯಿಂದ ರಂಗಗೀತೆಗಳ ಗಾಯನ ಕಾರ್ಯಕ್ರಮವಿದೆ. ಅಲ್ಲದೆ, ಜನಪದ ಗೀತೆ, ಭರತನಾಟ್ಯ ಇತ್ಯಾದಿ ಯಾವುದೇ ಕಲೆಗಳನ್ನೂ ಸೇವಾ ರೂಪದಲ್ಲಿ ಪ್ರದರ್ಶಿಸಲು ಅವಕಾಶವಿರುತ್ತದೆ. ಕಾರ್ಯಕ್ರಮದ ನಂತರ ಮಹಾಮಂಗಳಾರತಿ, ತೀರ್ಥ ಪ್ರಸಾದವಿದೆ ಎಂದು ಪ್ರಕಟಣೆ ತಿಳಿಸಿದೆ.

# ವಿಶೇಷಚೇತನ ವಿದ್ಯಾರ್ಥಿಗಳಿಗೆ ವಿದ್ಯಾನಿಧಿ ವಿತರಣೆ

ಮೈಸೂರು,ಅ.4–ಸಕ್ಷಮ ಮೈಸೂರು ವತಿಯಿಂದ ವಿಶೇಷಚೇತನ ವಿದ್ಯಾರ್ಥಿಗಳಿಗೆ ಅ.8ರಂದು ವಿದ್ಯಾನಿಧಿ ವಿತರಣೆ ಕಾರ್ಯಕ್ರಮ, ಅಷ್ಟಾವಕ್ರ ಜಯಂತಿ, ಹಾಗೂ ವಿಶ್ವ ಕಿವುಡರ ದಿನಾಚರಣೆ ಏರ್ಪಡಿಸಲಾಗಿದೆ. ನಂಜುಮಳಿಗೆಯ ಗೋಪಾಲಸ್ವಾಮಿ ಶಿಶು ವಿಹಾರದಲ್ಲಿ ಅಂದು ಸಂಜೆ 4 ಗಂಟೆಗೆ ನಡೆಯಲಿರುವ ಸಮಾರಂಭದಲ್ಲಿ ಮಹಾರಾಜ ತಾಂತ್ರಿಕ ಮಹಾವಿದ್ಯಾಲಯದ ಅಧ್ಯಕ್ಷ ಡಾ.ಎಸ್.ಮುರಳಿ, ಸಹಾಯಕ ಪ್ರಾಧ್ಯಾಪಕ ವೇದಮೋಹನ್, ಜಿಲ್ಲಾ ಕಿವುಡರ ಸಂಘದ ಉಪಾಧ್ಯಕ್ಷ ಮಹೇಶ ವರ್ಮ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ಸಕ್ಷಮ ಮೈಸೂರು ಅಧ್ಯಕ್ಷ ಡಾ.ಚಂದ್ರಶೇಖರ್ ಮತ್ತು ಕಾರ್ಯದರ್ಶಿ ಅರುಣಾಚಲ ಶರ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನೀರಿನ ಮಟ್ಟ

| ಕೆಆರ್‌ಎಸ್ ಅಣೆಕಟ್ಟು | ಕಬಿನಿ ಅಣೆಕಟ್ಟು | ಹಾರಂಗಿ ಅಣೆಕಟ್ಟು |
|---|---|---|
| ಗರಿಷ್ಠ ಮಟ್ಟ 124.80 ಅಡಿ | ಗರಿಷ್ಠ ಮಟ್ಟ 2,284.00 ಅಡಿ | ಗರಿಷ್ಠ ಮಟ್ಟ 2,859.00 ಅಡಿ |
| ಇಂದಿನ ಮಟ್ಟ 100.36 ಅಡಿ | ಇಂದಿನ ಮಟ್ಟ 2,276.06 ಅಡಿ | ಇಂದಿನ ಮಟ್ಟ 2,855.30 ಅಡಿ |
| ಹಿಂದಿನ ವರ್ಷದ ಮಟ್ಟ 123.56 ಅಡಿ | ಹಿಂದಿನ ವರ್ಷದ ಮಟ್ಟ 2,282.45 ಅಡಿ | ಹಿಂದಿನ ವರ್ಷದ ಮಟ್ಟ 2,855.37 ಅಡಿ |
| ನಿನ್ನೆಯ ಮಟ್ಟ 99.54 ಅಡಿ | ನಿನ್ನೆಯ ಮಟ್ಟ 2,275.70 ಅಡಿ | ನಿನ್ನೆಯ ಮಟ್ಟ 2,855.16 ಅಡಿ |
| ಇಂದಿನ ಒಳಹರಿವು 9,052 ಕ್ಯುಸೆಕ್ | ಇಂದಿನ ಒಳಹರಿವು 3,349 ಕ್ಯುಸೆಕ್ | ಇಂದಿನ ಒಳಹರಿವು 1,981 ಕ್ಯುಸೆಕ್ |
| ಇಂದಿನ ಹೊರಹರಿವು 1,482 ಕ್ಯುಸೆಕ್ | ಇಂದಿನ ಹೊರಹರಿವು 1,000 ಕ್ಯುಸೆಕ್ | ಇಂದಿನ ಹೊರಹರಿವು 1,400 ಕ್ಯುಸೆಕ್ |



# ಇಂದು ಕಿರುರಂಗಮಂದಿರದಲ್ಲಿ ಮಹಾಮಾರಿ ನಾಟಕ ಪ್ರದರ್ಶನ

ಮೈಸೂರು, ಅ.4(ಜಿಎ)– ಹುಬ್ಬಳ್ಳಿಯ ಸುನಿಧಿ ಕಲಾ ಸೌರಭ ಮತ್ತು ಸಂಚಲನ ಮೈಸೂರು ಸಹಯೋಗದೊಂದಿಗೆ ಅ.5ರಂದು ಕಲಾಮಂದಿರದ ಆವರಣದಲ್ಲಿರುವ ಕಿರು ರಂಗಮಂದಿರದಲ್ಲಿ ಮಹಾಮಾರಿ ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ಸಂಚಲನದ ಅಧ್ಯಕ್ಷ ದೀಪಕ್ ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ವಿಷಯ ತಿಳಿಸಿ, ಅಂದು ಸಂಜೆ 6.30ಕ್ಕೆ ಪ್ರದರ್ಶನ ಆರಂಭವಾಗಲಿದೆ ಎಂದರು.



ನಂತರ ನಿರ್ದೇಶಕ ತ್ಯಾಗರಾಜು ದೇವರಹಳ್ಳಿ ಮಾತನಾಡಿ, ಹಲವಾರು ವರ್ಷಗಳಿಂದ ರಂಗಭೂಮಿಯಲ್ಲಿ ತೊಡಗಿದ್ದು, ಆ ಎಲ್ಲಾ ಅನುಭವಗಳಿಂದ ಮಹಾಮಾರಿ ನಾಟಕ ನಿರ್ದೇಶನ ಮಾಡಿದ್ದೇನೆ. ನಾಟಕವು ಬರಗಾಲಕ್ಕೆ ತುತ್ತಾದ ಒಂದು ಗ್ರಾಮದ ಜನರ ಬದುಕು, ಬವಣೆಯನ್ನು ಕಥಾಹಂದರ ಒಳಗೊಂಡಿದ್ದು, ಪ್ರೀತಿ, ದ್ವೇಷ, ಸಂಚು, ಹಾಸ್ಯ ಸೇರಿದಂತೆ ಮುಂತಾದ ಅಂಶಗಳಿಂದ ಕೂಡಿದೆ ಎಂದರು. ಗೋಷ್ಠಿಯಲ್ಲಿ ಧಾರವಾಡ ರಂಗಾಯಣದ ಮಾಜಿ ನಿರ್ದೇಶಕ ಮತ್ತು ಸುನಿಧಿ ಕಲಾ ಸೌರಭದ ಅಧ್ಯಕ್ಷರೂ ಆದ ಸುಭಾಸ ನರೇಂದ್ರ, ನಟರಾದ ರಕ್ಷಿತ್, ನಾಗೇಶ್ ಉಪಸ್ಥಿತರಿದ್ದರು.

# ಮೈಸೂರು ಹಾಗೂ ಸುತ್ತಮುತ್ತ ಇಂದು...



## ಇಂದಿನ ಪಂಚಾಂಗ

**5.10.2023 ಗುರುವಾರ, ಮಳೆ ನಕ್ಷತ್ರ: ಹಸ್ತ, 28.09.2023ರಿಂದ 10.10.2023**
**ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಮೃಗಶಿರ, ರಾಹುಕಾಲ: ಮಧ್ಯಾಹ್ನ 1.30ರಿಂದ 3ರವರೆಗೆ**

■ **ಅಭಿವೃದ್ಧಿ ಆಯುಕ್ತರು (ಕೈಮಗ್ಗ), ಜವಳಿ ಮಂತ್ರಾಲಯ, ಕೈಮಗ್ಗ ಮತ್ತು ಜವಳಿ ಇಲಾಖೆ, ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾ ಮಂಡಳಿ ನಿಯಮಿತ, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್:** ವಿಶೇಷ ಕೈಮಗ್ಗ ಮೇಳ, ಸಂಸ್ಕೃತಿ–ಹತ್‌ಕರ್ಗ–2023, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆಯಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಉಸಿರಾಟದ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಮನೆ ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ, ಶ್ರೀ ಗಂಗಾ ಚಾರಿಟಬಲ್ ಟ್ರಸ್ಟ್ :** ತರಬೇತಿ ಪಡೆದ ಫಲಾನುಭವಿಗಳಿಗೆ ಉಚಿತ ಅಗರಬತ್ತಿ ಆಟೋಮ್ಯಾಟಿಕ್ ಯಂತ್ರ ವಿತರಣೆ,ಸ್ಥಳ: ಶ್ರೀ ಗಂಗಾ ಚಾರಿಟೆಬಲ್ ಟ್ರಸ್ಟ್ ಆವರಣ, ದೇವರಾಜ ಮೊಹಲ್ಲಾ, ಬೆಳಗ್ಗೆ 10ಕ್ಕೆ.

■ **ಮೈಸೂರು ಯೂನಿವರ್ಸಿಟಿ ಅರ್ಥಶಾಸ್ತ್ರ ಉಪಾಧ್ಯಾಯರ ಸಂಘ:** ರಾಷ್ಟ್ರೀಯ ಶಿಕ್ಷಣ ನೀತಿ 2020: ಅರ್ಥಶಾಸ್ತ್ರ ಪಠ್ಯಕ್ರಮ ಕುರಿತು ಕಾರ್ಯಾಗಾರ, ಉದ್ಘಾಟನೆ: ಸೇಂಟ್ ಫಿಲೋಮಿನಾ ಕಾಲೇಜು ರೆಕ್ಟರ್ ಡಾ.ಬರ್ನಾರ್ಡ್ ಪ್ರಕಾಶ್ ಬರ್ನಿಸ್, ಪ್ರಾಸ್ತಾವಿಕ ಭಾಷಣ: ಅರ್ಥಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥೆ ಡಾ.ಹೆಚ್.ಆರ್.ಉಮಾ, ಮುಖ್ಯ ಅತಿಥಿಗಳು: ಕಾಲೇಜು ಶಿಕ್ಷಣ ವಿಭಾಗದ ಜಂಟಿ ನಿರ್ದೇಶಕಿ ಡಾ. ಎ.ಎಚ್.ಎಂ.ವಿಜಯಲಕ್ಷ್ಮಿ, ಸೇಂಟ್ ಫಿಲೋಮಿನಾ ಕಾಲೇಜು ಉಪ ಪ್ರಾಂಶುಪಾಲರಾದ ಎಂ.ನಾಗರಾಜ್ ಅರಸ್, ರೋನಾಲ್ಡ್ ಪ್ರಕಾಶ್ ಕುಟಿನ್ಹಾ, ಅಧ್ಯಕ್ಷತೆ: ಸೇಂಟ್ ಫಿಲೋಮಿನಾ ಕಾಲೇಜು ಪ್ರಿನ್ಸಿಪಾಲ್ ಡಾ.ರವಿ ಜೆ.ಡಿ.ಸಾಲ್ಡಾನಾ, ಸ್ಥಳ: ಸೇಂಟ್ ಫಿಲೋಮಿನಾ ಕಾಲೇಜು ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘ:** ರಜತ ವರ್ಷದ ಅಂಗವಾಗಿ ಸಾಧಕರಿಗೆ ಸನ್ಮಾನ, ಸಾನ್ನಿಧ್ಯ: ವಂಗೀಪುರ ಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಉದ್ಘಾಟನೆ: ಮೈಸೂರು ವಿವಿ ವಿಶ್ರಾಂತ ಕುಲಪತಿ ಎಸ್.ಎನ್.ಹೆಗಡೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ನಾರಾಯಣ ವಿ.ಹೆಗಡೆ, ಮುಖ್ಯ ಅತಿಥಿಗಳು: ಮಾಜಿ ಶಾಸಕ ವಾಸು, ಮೈಸೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕಿ ಡಾ.ಕೆ.ಆರ್.ದಾಕ್ಷಾಯಿಣಿ, ಸ್ಥಳ: ಜಗನ್ನಾಥ ಶೆಣೈ ಸಭಾಂಗಣ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30ಕ್ಕೆ.

■ **ಶಾರದಾ ವಿಲಾಸ ಫಾರ್ಮಸಿ ಕಾಲೇಜು :** ಪದವೀಧರರ ದಿನಾಚರಣೆ, ಉದ್ಘಾಟನೆ : ಆದಿಚುಂಚನಗಿರಿ ವಿಶ್ವವಿದ್ಯಾನಿಲಯ ಕುಲಪತಿ ಡಾ. ಎಂ.ಎ. ಶೇಖರ್, ಮುಖ್ಯ ಅತಿಥಿಗಳು : ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ. ಬಿ.ಎಂ. ಸುಬ್ರಾಯ, ಎಸ್‌ವಿ ವಾಸ್ಕೂಲರ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ ಬದರಿ ನಾರಾಯಣ್, ಗೌರವ ಅತಿಥಿಗಳು : ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಎನ್. ಚಂದ್ರಶೇಖರ್, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಹನುಮಂತಚಾರ್ ಜೋಷಿ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಬೆಳಗ್ಗೆ 10.30ಕ್ಕೆ.

■ **ಶ್ರೀ ರಾಘವೇಂದ್ರ ಸ್ವಾಮಿಗಳ ಮಠ :** ಪಂಡಿತ್ ಶ್ರೀ ಬಾದರಾಯಣಾಚಾರ್ಯ ಅವರಿಂದ 'ಭಗವದ್ಗೀತೆ 11ನೇ ಅಧ್ಯಯನ'ದ ಪ್ರವಚನ, ಸ್ಥಳ: ಮಠದ ಆವರಣ, ಜಯಲಕ್ಷ್ಮೀಪುರಂ, ಸಂಜೆ 5 ಗಂಟೆಗೆ.

■ **ರಂಗಾಯಣ :** ಸಂಜೆ 5.30ಕ್ಕೆ ಬಿ.ವಿ. ಕಾರಂತ ಕಾಲೇಜು ರಂಗೋತ್ಸವ, ಉದ್ಘಾಟನೆ : ರಂಗಭೂಮಿ ಕಲಾವಿದ ನವೀನ್ ಸಜ್ಜು, ಮುಖ್ಯ ಅತಿಥಿಗಳು : ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ ಕುಲಪತಿ ನಾಗೇಶ್ ವಿ. ಬೆಟ್ಟಕೋಟೆ, ಅಧ್ಯಕ್ಷತೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಶ್ರೀಮತಿ ಧರಣಿದೇವಿ ಮಾಲಗತ್ತಿ, ಸಂಜೆ 6.30ಕ್ಕೆ ಹಾರ್ಡ್ವಿಕ್ ಸ್ವತಂತ್ರ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳಿಂದ ಕಿಂದರಿಜೋಗಿ ನಾಟಕ ಪ್ರದರ್ಶನ, ರಚನೆ : ಕುವೆಂಪು, ನಿರ್ದೇಶನ : ನೂರ್ ಅಹಮದ್ ಶೇಖ್, ಸ್ಥಳ: ವನರಂಗ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಚಿನ್ಮಯ ಮಿಷನ್ :** ಪಂಡಿತ್ ಕೃಷ್ಣರಾವ್ ಪ್ರಕಾಶ್ ಅವರಿಂದ ಪತಾಂಜಲಿಯ ಯೋಗ ಸೂತ್ರಗಳು – ಸಮಾಧಿ ಪಾದ ಕುರಿತು ಉಪನ್ಯಾಸ, ಸ್ಥಳ: ಶ್ರೀ ಚಿನ್ಮಯ ಮಿಷನ್, ಮೈಸೂರು ಆಶ್ರಮದ ದತ್ತ ಸನ್ನಿಧಿ, ಯಜ್ಞಶಾಲೆ, ಗೋಕುಲಂ, ಸಂಜೆ 6ಕ್ಕೆ.

## ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಮೊಬೈಲ್ ಬಳಸೋಣ ಬನ್ನಿ–ಪ್ರಪಂಚಕ್ಕೆ ಬೆಳಕಿನ ಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ: ಮೈಸೂರಿನ ಎನ್.ರವಿಶಂಕರ್, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಶ್ರೀರಾಂ ಭಟ್, 7.15 ಭಾವಗೀತೆ, 8.30 ಹಾಡು ಹೇಳಿದ ಕಥೆ, ಪ್ರಸ್ತುತಿ–ಮೈಸೂರು ಉಮೇಶ್, 10.00 ಜಿ.ಎಸ್. ಕಮಲ ಮತ್ತು ಜಿ.ಎಸ್.ರಾಜಲಕ್ಷ್ಮಿ –ಯುಗಳ ಗಾಯನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 1.20 ಭಾವಗೀತೆ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 4.00 ಜನಪದ ಸಂಗೀತ, 4.30 ಸಂಧ್ಯಾರಾಗ–ಹಿರಿಯ ನಿವೃತ್ತ ಅರಣ್ಯಾಧಿಕಾರಿ ಬಿದಿರು ಲಕ್ಷ್ಮಣ್ ಎಂದೇ ಖ್ಯಾತರಾದ ಎ.ಸಿ.ಲಕ್ಷ್ಮಣ್ ಹಾಗೂ ಅವರ ಮಡದಿ ಸಾವಿತ್ರಿ ಲಕ್ಷ್ಮಣ್ ಅವರೊಂದಿಗೆ ಮಾತುಕತೆ ನಡೆಸಿಕೊಡುವವರು ಜಿ.ಶಾಂತಕುಮಾರ್, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ. ಭಾಗವಹಿಸುವವರು ಕೆ.ಜೆ.ಪುಟ್ಟಸ್ವಾಮಿಗೌಡ ಹಾಗೂ ದೇವೀರಮ್ಮ, ಪ್ರಸ್ತುತಿ– ಎನ್.ಕೇಶವಮೂರ್ತಿ, 8.00 ಯುವವಾಣಿ– ಚಿತ್ರ ಚಿತ್ತಾರ– ಪ್ಲಾಸ್ಟಿಕ್ ಕುರಿತ ವಿಶೇಷ ಕಾರ್ಯಕ್ರಮ, ಪ್ರಸ್ತುತಿ–ಜೆಎಸ್‌ಎಸ್ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿನಿ ಕಾವ್ಯಾ ಪಿ.ಮಳಿಮಠ್, 10.00 ನಾಟಕ

# ಮಹಿಷಾ ದಸರೆ ತಡೆಗಾಗಿ ಅ.13, ಚಾಮುಂಡಿಬೆಟ್ಟ ಚಲೋ

## ಸಂಘರ್ಷವಾದರೂ ಸರಿ ಮಹಿಷಾ ದಸರಾ ತಡೆಯುತ್ತೇನೆ: ಸಂಸದ ಪ್ರತಾಪ್ ಸಿಂಹ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಬುಧವಾರ ಸಂಸದ ಪ್ರತಾಪ ಸಿಂಹ ಮಾತನಾಡಿದರು.

ಮೈಸೂರು,ಅ.4(ಎಂಟಿವೈ)–ನಾಡದೇವಿ ಚಾಮುಂಡೇಶ್ವರಿಯ ಗೌರವ ಕಾಪಾಡುವುದರೊಂದಿಗೆ ಮಹಿಷಾ ದಸರಾವನ್ನು ತಡೆಗಟ್ಟಲು ಅ.13ರಂದು ಬೆಳಗ್ಗೆ 8 ಗಂಟೆಗೆ ಚಾಮುಂಡಿಬೆಟ್ಟ ಚಲೋ ನಡೆಸುತ್ತೇವೆ. ಸಂಘರ್ಷವಾದರೂ ಸರಿ ಮಹಿಷಾ ದಸರಾ ತಡೆಯುತ್ತೇವೆ ಎಂದು ಸಂಸದ ಪ್ರತಾಪ ಸಿಂಹ ಎಚ್ಚರಿಸಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಸರಾ ಉತ್ಸವಕ್ಕೆ 414 ವರ್ಷಗಳ ಇತಿಹಾಸವಿದೆ. ರಾಜರ ಆಳ್ವಿಕೆ ಕಾಲದಿಂದಲೂ ದಸರಾ ಆಚರಣೆಯಲ್ಲಿದ್ದು, ಸ್ವಾತಂತ್ರ್ಯಾನಂತರ ಅಧಿಕಾರ ನಡೆಸಿದ ಎಲ್ಲಾ ಪಕ್ಷಗಳು ಸಾಂಪ್ರದಾಯಿಕ ದಸರಾ ಮಹೋತ್ಸವವನ್ನು ಆಚರಿಸುತ್ತಾ ಬಂದಿವೆ. ಈ ಬಾರಿ ಬರಗಾಲದ ನಡುವೆಯೂ ಸಾಂಪ್ರದಾಯಿಕ ದಸರಾ ಆಚರಿಸಲಾಗುತ್ತಿದೆ. ಇದರ ನಡುವೆ ಮಹಿಷ ದಸರಾ ಎಂಬ ಪದ್ಧತಿಯನ್ನು ಮುಂದುವರೆಸಲು ಸಂಚು ನಡೆಸಲಾಗುತ್ತಿದೆ ಎಂದು ಕಿಡಿಕಾರಿದರು.

ನಾವು ಮೊದಲಿನಿಂದಲೂ ದಸರಾ ಮಹೋತ್ಸವವನ್ನು ನೋಡಿಕೊಂಡು ಬಂದಿದ್ದೇವೆ. ಆದರೆ, ದೆವ್ವ ಯಾವಾಗ ದೇವರಾಯಿತು ಎಂದು ನಮಗೆ ತಿಳಿದಿಲ್ಲ. 2015–16ನೇ ಸಾಲಿನಲ್ಲಿ ಮಹಿಷ ದಸರಾ ಆಚರಣೆ ಆರಂಭಿಸಲಾಯಿತು. ಈ ಹಿಂದೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗಲೇ ಮಹಿಷ ದಸರ ಆಚರಣೆ ನಡೆದಿತ್ತು. ನಂತರ ನಮ್ಮ(ಬಿಜೆಪಿ) ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಆಚರಣೆಯನ್ನು ಹೊಸಕಿ ಹಾಕಲಾಗಿತ್ತು. ಈಗ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಮತ್ತೆ ಬಾಲಬಿಚ್ಚಿ ಮಹಿಷ ದಸರೆ ಆಚರಣೆ ಮಾಡುತ್ತೇವೆಂದು ಹೊರಟಿದ್ದಾರೆ. ಆದರೆ, ಇದಕ್ಕೆ ನಾವು ಬಿಡುವುದಿಲ್ಲ. ಸಂಘರ್ಷವಾದರೂ ಸರಿ ಮಹಿಷ ದಸರಾ ಆಚರಣೆಗೆ ಅವಕಾಶ ನೀಡುವುದಿಲ್ಲ ಎಂದರು.

ಅ.13ರಂದು ಬೆಳಗ್ಗೆ 8 ಗಂಟೆಗೆ ಮೈಸೂರಿಂದ 'ಚಾಮುಂಡಿಬೆಟ್ಟ ಚಲೋ' ಹಮ್ಮಿಕೊಳ್ಳಲಾಗಿದೆ. ಐದು ಸಾವಿರ ಜನರು ಮೆಟ್ಟಿಲುಗಳ ಮೂಲಕ ಬೆಟ್ಟ ಹತ್ತಿದರೆ, ಕೆಲವರು ಬೈಕು, ಕಾರು, ವಾಹನಗಳ ಮೂಲಕವೂ ಬೆಟ್ಟಕ್ಕೆ ಆಗಮಿಸಲಿದ್ದಾರೆ. ಚಾಮುಂಡಿಬೆಟ್ಟ ಚಲೋ ಪಕ್ಷಾತೀತವಾಗಿ ನಡೆಯುವ ಚಳುವಳಿ. ಇದು ಬಿಜೆಪಿ ವತಿಯಿಂದ ನಡೆಯುವ ಜಾಥಾವಲ್ಲ. ಜಾತ್ಯತೀತ, ಧರ್ಮಾತೀತ, ಪಕ್ಷಾತೀತವಾಗಿ ಕಾರ್ಯಕ್ರಮ ನಡೆಯಲಿದೆ. ಇದರಲ್ಲಿ ಆಸ್ತಿಕ ಬಂಧುಗಳು ಸ್ವಯಂಪ್ರೇರಣೆಯಿಂದ ಆಗಮಿಸಬೇಕು ಎಂದು ಕೋರಿದರು.

ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಗೋ.ಮಧುಸೂದನ್ ಸೇರಿದಂತೆ ಅನೇಕ ನಾಯಕರ ಭೇಟಿ ಮಾಡಿ ಚಾಮುಂಡಿಬೆಟ್ಟ ಚಲೋದಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡುತ್ತೇವೆ. ಜಿಲ್ಲೆಯ 11 ಕ್ಷೇತ್ರಗಳ ಶಾಸಕರು ಈ ಚಳುವಳಿಯಲ್ಲಿ ಭಾಗಿಯಾಗಬೇಕು ಎಂದು ಮನವಿ ಮಾಡಿದರು.

ಕೆಲವರು ಈ ಅನಾಚಾರವನ್ನು ಹುಟ್ಟುಹಾಕಿ ದೆವ್ವವನ್ನು ದೇವರೆಂದು ಹೇಳಿ ಪೂಜೆ ಮಾಡಲು ಹೊರಟಿದ್ದಾರೆ. ಆಸ್ತಿಕರ ಭಾವನೆಗಳಿಗೆ ಧಕ್ಕೆ ತರಲು ಸಂಚು ನಡೆಸುತ್ತಿದ್ದಾರೆ. ತಾಯಿ ಚಾಮುಂಡೇಶ್ವರಿಗೆ ಅಪಚಾರ ಎಸಗಿದರೆ ಸುಮ್ಮನಿರಲು ಸಾಧ್ಯವಿಲ್ಲ. ಇಂದು ಕೆಟ್ಟದಕ್ಕೂ ಮತ್ತು ಒಳ್ಳೆಯದಕ್ಕೂ ಚಾಮುಂಡೇಶ್ವರಿ ದೇವಿಯ ಮೊರೆ ಹೋಗುತ್ತೇವೆ. ಆದರೆ, ಈಗ ಅಂತಹ ನಂಬಿಕೆಗೆ ಧಕ್ಕೆ ಮಾಡಬೇಕೆಂದು ಕೆಲವರು ಹೊರಟಿದ್ದಾರೆ. ತನ್ವೀರ್‌ಸೇಠ್ ಅವರೇ ಚಾಮುಂಡಿಬೆಟ್ಟಕ್ಕೆ ಆಗಮಿಸಿ ಪುಷ್ಪಾರ್ಚನೆಯಲ್ಲಿ ಭಾಗಿಯಾಗಲಿದ್ದಾರೆ. ಚಾಮುಂಡೇಶ್ವರಿ ಬರೀ ಬಿಜೆಪಿಯವರಿಗೆ ದೇವರಲ್ಲ. ಕೋಟ್ಯಾಂತರ ಜನರು ಆರಾಧಿಸುವ ದೇವಿ ಗೌರವಕ್ಕೆ ಅಪಚಾರವಾಗುವುದನ್ನು ತಡೆಗಟ್ಟಲು ಮಹಿಷ ದಸರೆ ಪುನರಾಗಮನಕ್ಕೆ ಎಡೆಮಾಡಿಕೊಡಬಾರದು ಎಂದು ಒತ್ತಾಯಿಸಿದರು. ಗೋಷ್ಠಿಯಲ್ಲಿ ಮೇಯರ್ ಶಿವಕುಮಾರ್, ನಗರ ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ವಾಣೀಶ್ ಕುಮಾರ್, ವಿ.ಸೋಮಸುಂದರ್, ಹೆಚ್.ಜಿ.ಗಿರಿಧರ್, ಮಾಧ್ಯಮ ವಕ್ತಾರ ಮಹೇಶ್ ರಾಜೇಅರಸ್, ಕೇಬಲ್ ಮಹೇಶ್ ಇದ್ದರು.

### ರಾಜ್ಯದಲ್ಲಿ ರಾಕ್ಷಸರ ಆಡಳಿತ ನಡೆಯುತ್ತಿದೆ: ಪ್ರತಾಪ್ ಸಿಂಹ

ರಾಜ್ಯದಲ್ಲಿ ಒಳ್ಳೆಯ, ರಾಮರಾಜ್ಯ ಆಡಳಿತದ ಬದಲಿಗೆ ರಾಕ್ಷಸರ ಆಡಳಿತ ನಡೆಯುತ್ತಿದೆ. ಕೆಎಫ್‌ಡಿ, ಪಿಎಫ್‌ಐ, ಎಸ್‌ಡಿಪಿಐನ ಉದ್ದೇಶಿತ ಯೋಜನೆಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರ ಮೌನವಾಗಿ ಸಮ್ಮತಿಸುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಮೌನವಾಗಿರುವಾಗ ಬೇರೆ ಸಚಿವರು ಮಾತನಾಡಲು ಸಾಧ್ಯವೇ ಎಂದು ಪ್ರತಾಪ್ ಸಿಂಹ ಕಿಡಿಕಾರಿದರು.

ಬೆಂಗಳೂರಿನ ಕೆ.ಜಿ.ಹಳ್ಳಿ, ಡಿ.ಜೆ.ಹಳ್ಳಿ ಪ್ರಕರಣದಲ್ಲಿ ತೊಡಗಿದ್ದವರನ್ನು ಅಮಾಯಕರು ಎಂದು ಹೇಳಲಾಗಿದೆ. ಹುಬ್ಬಳ್ಳಿ ಗಲಭೆಯಲ್ಲಿ ಪಾಲ್ಗೊಂಡಿರುವವರ ವಿರುದ್ಧ ಪ್ರಕರಣಗಳನ್ನು ಹಿಂಪಡೆಯಲು ಮುಂದಾಗಿರುವುದು ಖಂಡನೀಯ. ಶಿವಮೊಗ್ಗದಲ್ಲಿ ಎಸ್‌ಪಿ ಮೇಲೆ ಕಲ್ಲು ತೂರಿದರೆ, ಕೋಲಾರದಲ್ಲಿ ಸಂಸದ ಮುನಿಸ್ವಾಮಿ ವಿರುದ್ಧ ಅಲ್ಲಿನ ಎಸ್ಪಿ ಹಲ್ಲೆ ಮಾಡುತ್ತಾರೆ. ಇಲ್ಲಿ ರಾಮರಾಜ್ಯದ ಬದಲಿಗೆ ರಾವಣ, ರಾಕ್ಷಸರ ಆಡಳಿತ ನಡೆಯುತ್ತಿದೆ ಎಂದು ಟೀಕಿಸಿದರು.

ಹಿಂದುಗಳಿಗೆ ಕಲ್ಲು ತೂರುವ ಹಾಗೂ ಹಿಂದಿನಿಂದ ಬಂದು ಚೂರಿ ಹಾಕುವ ಸಂಸ್ಕೃತಿ ತಿಳಿದಿಲ್ಲ. ಗೃಹಸಚಿವರು ಕೂಡ ಕಾನೂನು ಸುವ್ಯವಸ್ಥೆ ಕಾಪಾಡಲು ವಿಫಲರಾಗಿದ್ದಾರೆ. ಸಿದ್ದರಾಮಯ್ಯ ಸರ್ಕಾರ ಬಿಗಿ ಕಳೆದುಕೊಂಡಿದೆ. ಸಿದ್ದರಾಮಯ್ಯ ಮೊದಲನೇ ಬಾರಿಗೆ ಮುಖ್ಯಮಂತ್ರಿಯಾಗಿದ್ದಾಗ ಹಲವಾರು ಹತ್ಯೆಗಳು ನಡೆದಿದ್ದವು. ಕೆಲವು ಮತಾಂಧ ಶಕ್ತಿಗಳ ಪರವಾಗಿ ಬೆಂಬಲ ನೀಡುವ ಕೆಲಸ ಮಾಡುವುದರಿಂದಲೇ ಈ ರೀತಿ ಗಲಭೆಗೆ ಕಾರಣವಾಗಿದೆ ಎಂದು ಆರೋಪಿಸಿದರು.

# ಅ.13ರಂದು ಮಹಿಷಾ ದಸರಾ ಆಚರಣೆ

## ಇದು ಚಾಮುಂಡೇಶ್ವರಿ ದೇವಿ, ಮೈಸೂರು ದಸರಾ ವಿರುದ್ಧ ಅಲ್ಲ–ಅನುಷ್ಠಾನ ಸಮಿತಿ ಸದಸ್ಯರ ಸ್ಪಷ್ಟನೆ



ಮೈಸೂರು, ಅ.4(ಎಸ್‌ಪಿಎನ್)– ಮೈಸೂರಿನ ಅಸ್ಮಿತೆಗಾಗಿ ಆಚರಿಸುತ್ತಿರುವ ಮಹಿಷ ದಸರಾ ಚಾಮುಂಡೇಶ್ವರಿ ದೇವಿ ವಿರುದ್ಧ ಅಥವಾ ಮೈಸೂರು ದಸರಾ ವಿರುದ್ಧವೂ ಅಲ್ಲ ಎಂದು ಮಹಿಷ ದಸರಾ ಅನುಷ್ಠಾನ ಸಮಿತಿ ಸದಸ್ಯರು ಬುಧವಾರ ಘೋಷಿಸಿದರು.

> ಮಹಿಷ ದಸರಾ 1976ರಲ್ಲಿ ಸಾಮಾಜಿಕ ಹೋರಾಟಗಾರ ಮಂಟೇಲಿಂಗಯ್ಯ ನೇತೃತ್ವದಲ್ಲಿ ಚಾಮುಂಡಿಬೆಟ್ಟದ ಮಹಿಷಾಸುರನಿಗೆ ಪುಷ್ಪಾರ್ಚನೆ ಸಲ್ಲಿಸಲಾಗಿತ್ತು. ನಂತರ ವಿವಿಧ ಜನರ ವಿರೋಧದಿಂದ ಪೊಲೀಸ್ ಇಲಾಖೆ ಮಹಿಷ ಆಚರಣೆಗೆ ನಿರ್ಬಂಧ ವಿಧಿಸಿತ್ತು. ನಂತರ 2015ರ ನಂತರ ಮತ್ತೆ ಮಹಿಷ ದಸರಾ ಆರಂಭವಾಗಿತ್ತು. ನಂತರ ಬಿಜೆಪಿ ಸರ್ಕಾರ ಬಂದ ಮೇಲೆ ಈ ಆಚರಣೆ ನಿಲ್ಲಿಸಲು ಪ್ರಯತ್ನಿಸಿದರೂ ಆಚರಣೆ ಮಾಡಿಕೊಂಡು ಬರಲಾಗಿದೆ. ಈ ಬಾರಿ ಅದ್ಧೂರಿಯಾಗಿ ಆಚರಿಸಲು ಸಂವಿಧಾನದಲ್ಲೇ ಅವಕಾಶ ಇರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಸೇರಬೇಕು.
>
> –ಗೋವಿಂದರಾಜು, ಪ್ರಗತಿಪರ ಮುಖಂಡ.

ಮೈಸೂರು ಚಾಮರಾಜಪುರಂನಲ್ಲಿರುವ ವಿಶ್ವ ಮೈತ್ರಿ ಬುದ್ಧ ವಿಹಾರ ಆವರಣದಲ್ಲಿ ಮಹಿಷ ದಸರಾ ಅನುಷ್ಠಾನ ಸಮಿತಿಯ ಸದಸ್ಯ ಹಾಗೂ ಮಾಜಿ ಮೇಯರ್ ಪುರುಷೋತ್ತಮ್ ನೇತೃತ್ವದಲ್ಲಿ ಅಕ್ಟೋಬರ್ 13ರಂದು ಬೆಳಗ್ಗೆ 9.30ಕ್ಕೆ ಚಾಮುಂಡಿಬೆಟ್ಟದ ಮಹಿಷಾಸುರನಿಗೆ ಪುಷ್ಪಾರ್ಚನೆ ಕುರಿತಾದ ಕರಪತ್ರ ಬಿಡುಗಡೆಗೊಳಿಸಿ, ಮಾತನಾಡಿದರು.

ಸಂಸದ ಪ್ರತಾಪ ಸಿಂಹ ಅವರು, ಪತ್ರಿಕಾಗೋಷ್ಠಿ ನಡೆಸಿ, ಮಹಿಷ ದಸರಾ ಆಚರಣೆಗೆ ಅನುವು ಮಾಡಿಕೊಡುವುದಿಲ್ಲ. ಸಂಘರ್ಷವಾದರೂ ಸರಿಯೇ ಎಂದು ಸವಾಲು ಹಾಕಿದ್ದಾರೆ. ಈ ಆಚರಣೆಯಲ್ಲಿ ಯಾವುದೇ ಯಜ್ಞ, ಹೋಮ–ಹವನ ಸೇರಿದಂತೆ ಯಾವುದೇ ಪೂಜಾ ಕೈಂಕರ್ಯಗಳನ್ನು ಹಮ್ಮಿಕೊಳ್ಳುವುದಿಲ್ಲ. ಬದಲಾಗಿ ಮಹಿಷಾಸುರ ಪ್ರತಿಮೆಗೆ ನಾಡಿನ ಗಣ್ಯ ಸಾಹಿತಿಗಳು ಪುಷ್ಪಾರ್ಚನೆ ಸಲ್ಲಿಸುವ ಕಾರ್ಯಕ್ರಮವಾಗಿದೆ ಎಂದು ತಿಳಿಸಿದರು.

ನಮ್ಮ ಆಚರಣೆ ಈ ನೆಲದ ಮೂಲ ನಿವಾಸಿ, ಮಹಿಷ ಮಂಡಲವನ್ನು ಆಡಳಿತ ದೊರೆ ಮಹಿಷಾಸುರನಿಗೆ ದಸರಾ ಸಂದರ್ಭದಲ್ಲಿ ಸಲ್ಲುವ ಪುಟ್ಟ ಗೌರವ. ಪ್ರತಿವರ್ಷದಂತೆ ಈ ವರ್ಷವೂ ಬೃಹತ್ ರ‍್ಯಾಲಿ ಮೂಲಕ ಪುಷ್ಪಾರ್ಚನೆ ಮಾಡಲಾಗುವುದು ಎಂದು ತಿಳಿಸಿದರು.

ಲೇಖಕ ಸಿದ್ದರಾಜು ರಚಿಸಿರುವ 'ಮಹಿಷ ಮಂಡಲ' ಕೃತಿಯಲ್ಲಿ ಅನೇಕ ವಿದ್ವಾಂಸರು, ಮಹಿಷಾಸುರ ಆಳ್ವಿಕೆ ಕಾಲಘಟ್ಟದ ಇತಿಹಾಸ ಕುರಿತು ಉಲ್ಲೇಖ ಮಾಡಿದ್ದಾರೆ. ಮಹಿಷ ಈ ನೆಲದ ದೊರೆ ಹಾಗೂ ಈತನ ಇತಿಹಾಸ ಬೌದ್ಧ ಧರ್ಮದ ಕುರಿತು ಉಲ್ಲೇಖವಿದೆ. ಮಹಿಷ ಮಂಡಲದ ಬಗ್ಗೆ ವಿಶ್ವ ಭೂಪಟವು ಅಚ್ಚರಿಯ ಸಂಗತಿಯನ್ನು ಹೊರಗೆಡವಿದೆ ಎಂದು 'ಮಹಿಷ ಮಂಡಲ' ಪುಸ್ತಕ ಪ್ರದರ್ಶಿಸಿ ತಿಳಿಸಿದರು.

ಅ.13ರಂದು ಮಹಿಷಾಸುರನಿಗೆ ಪುಷ್ಪಾರ್ಚನೆ ಸಲ್ಲಿಸುವ ಕಾರ್ಯಕ್ರಮಕ್ಕೆ ಕನಿಷ್ಠ 10 ಸಾವಿರ ಮಂದಿ ಸೇರುವ ಭರವಸೆ ಇದೆ. ಅಲ್ಲದೆ, ಮೈಸೂರಿನ ಎಲ್ಲಾ ತಾಲೂಕು ಸೇರಿದಂತೆ ರಾಜ್ಯದ ಮೂಲೆ ಮೂಲೆಗೂ ಮಹಿಷಾ ದಸರಾ ಆಚರಣೆ ಕುರಿತು ಜನರಿಗೆ ತಲುಪಿಸುವ ಕೆಲಸವಾಗಬೇಕು. ಹಾಗಾಗಿ ಈ ಹತ್ತು ಸಾವಿರ ಕರಪತ್ರಗಳು ಹಾಗೂ ಇತರೆ ಮಾಧ್ಯಮಗಳ ಮೂಲಕ ಜನರಿಗೆ ತಲುಪಿಸಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಆಟೋಚಾಲಕ ಪುಟ್ಟರಾಜು, ರಾಜು, ಕ್ಯಾಪ್ಟನ್ ಮಹದೇವ್, ರಮೇಶ್, ದೊಡ್ಡಗರಡಿ ಅಧ್ಯಕ್ಷರು, ವಿವಿಧ ಬಡಾವಣೆಯಿಂದ ಆಗಮಿಸಿದ ದಲಿತ, ಪ್ರಗತಿಪರ ಮುಖಂಡರು ಉಪಸ್ಥಿತರಿದ್ದರು.

# ಡಾ.ಎಸ್.ಎಲ್.ಭೈರಪ್ಪ ಅವರಿಗೆ ಅಮೃತಕೀರ್ತಿ ಪ್ರಶಸ್ತಿ ಪ್ರದಾನ



ಕೇರಳದ ಕೊಲ್ಲಂನ ಅಮೃತಪುರಿ ಆಶ್ರಮದಲ್ಲಿ ಖ್ಯಾತ ಕಾದಂಬರಿಕಾರರಾದ ಡಾ.ಎಸ್.ಎಲ್.ಭೈರಪ್ಪನವರಿಗೆ ಮಾತಾ ಅಮೃತಾನಂದಮಯಿ ಅವರಿಂದ 'ಅಮೃತಕೀರ್ತಿ' ಪುರಸ್ಕಾರವನ್ನು ಕೇರಳ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಪ್ರದಾನ ಮಾಡಿದರು. ಕೇಂದ್ರದ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ಖಾತೆ ರಾಜ್ಯ ಸಚಿವ ಅಶ್ವಿನಿ ಕುಮಾರ್ ಚೌಬೆ, ಮಾತಾ ಅಮೃತಾನಂದಮಯಿ, ವಿಶ್ವಸಂಸ್ಥೆಯ 193 ದೇಶಗಳ ಪ್ರತಿನಿಧಿಗಳು ಇದ್ದರು.

ಮೈಸೂರು, ಅ.4(ಎಸ್‌ಪಿಎನ್)– ಖ್ಯಾತ ಕಾದಂಬರಿಕಾರರಾದ ಡಾ.ಎಸ್.ಎಲ್.ಭೈರಪ್ಪನವರಿಗೆ ಮಾತಾ ಅಮೃತಾನಂದಮಯಿ ಅವರಿಂದ 'ಅಮೃತಕೀರ್ತಿ' ಪುರಸ್ಕಾರವನ್ನು ಕೇರಳದ ಕೊಲ್ಲಂನ ಅಮೃತಪುರಿ ಆಶ್ರಮದಲ್ಲಿ ಪ್ರದಾನ ಮಾಡಲಾಯಿತು. ಮಾತಾ ಅಮೃತಾನಂದಮಯಿ ಅವರ 70ನೇ ಹುಟ್ಟುಹಬ್ಬದ ಅಂಗವಾಗಿ ನಡೆದ 'ಅಮೃತ ವರ್ಷಂ– 70'ರ ಸಮಾರಂಭದಲ್ಲಿ ಮಾತಾ ಅಮೃತಾನಂದಮಯಿ ಅವರು ಪ್ರಶಸ್ತಿ ಪ್ರದಾನ ಮಾಡಿದರು. ನಂತರ ಮಾತನಾಡಿದ ಅವರು, ಅಮೃತಕೀರ್ತಿ ಪುರಸ್ಕಾರವು ಮಾತಾ ಅಮೃತಾನಂದಮಯಿ ಮಠದ ಪುರಸ್ಕಾರವಾಗಿದ್ದು, ಭಾರತೀಯ ಸಂಸ್ಕೃತಿ ಹಾಗೂ ವೇದ ಸಂಪ್ರದಾಯಗಳಿಗೆ ಅಮೋಘ ಕೊಡುಗೆ ನೀಡಿದ ಸಾಧಕರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ. ಮಾನವೀಯ ಮೌಲ್ಯಗಳು, ಪುರಾತನ ಭಾರತೀಯ ಸಂಸ್ಕೃತಿ ಹಾಗೂ ಸನಾತನ ಧರ್ಮದ ಸಂರಕ್ಷಣೆಗೆ ಸಹಕರಿಸುವ ವ್ಯಕ್ತಿಗಳಿಗೆ ಈ ಪ್ರಶಸ್ತಿ ನೀಡಲಾಗುತ್ತದೆ ಎಂದರು.

ಅಮೃತಕೀರ್ತಿ ಪ್ರಶಸ್ತಿಯು 1,23,456 ರೂ., ನಗದು, ಸರಸ್ವತಿದೇವಿಯ ವಿಗ್ರಹ ಹಾಗೂ ಪ್ರಮಾಣ ಪತ್ರವನ್ನು ಒಳಗೊಂಡಿದೆ. ಡಾ.ಎಸ್.ಎಲ್.ಭೈರಪ್ಪ ಅವರೊಂದಿಗೆ ಖ್ಯಾತ ವೇದ ಪಂಡಿತ ಪ್ರೊ. ಶ್ರೀವರಾಹಂ ಚಂದ್ರಶೇಖರನ್ ನಾಯರ್, ವೇದ ಸಾಹಿತ್ಯ ಪಾರಂಗತರಾದ ಆಚಾರ್ಯ ರಾಜೇಶ್, ಶ್ರೀ ಶಂಕರಾಚಾರ್ಯ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಡಾ.ಕೆ.ಎಸ್.ರಾಧಾಕೃಷ್ಣನ್ ಅವರಿಗೂ ಸಹ 2020, 2021, 2022 ಹಾಗೂ 2023ರ ಸಾಲಿನ ಅಮೃತಕೀರ್ತಿ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ವೇದಿಕೆಯಲ್ಲಿ ಕೇರಳ ರಾಜ್ಯಪಾಲ ಆರಿಫ್ ಮೊಹಮ್ಮದ್‌ಖಾನ್, ಕೇಂದ್ರದ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ಖಾತೆ ರಾಜ್ಯ ಸಚಿವ ಅಶ್ವಿನಿಕುಮಾರ್ ಚೌಬೆ, ವಿಶ್ವಸಂಸ್ಥೆಯ 193 ದೇಶಗಳ ಪ್ರತಿನಿಧಿಗಳು, ಮಾತಾ ಅಮೃತಾನಂದಮಯಿ ಅವರ ಭಕ್ತ ವೃಂದ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಕಾಡಂಚಿನ ನಡಹಾಡಿ ನಿವಾಸಿಗಳಿಗೆ ಮೂಲಸೌಕರ್ಯಕ್ಕಾಗಿ ಒತ್ತಾಯ



ಮೈಸೂರು, ಅ.4(ಎಸ್‌ಪಿಎನ್)– ಸರಗೂರು ತಾಲೂಕಿನ ಕದಲಕೆ ಹೋಬಳಿಯ ನಡಹಾಡಿ ನಿವಾಸಿಗಳಿಗೆ ಮೂಲ ಸೌಕರ್ಯ ಹಾಗೂ ಇಲ್ಲಿನ ಗ್ರಾಮಸ್ಥರಿಗೆ ಮಂಜೂರು ಮಾಡಿರುವ 60 ಎಕರೆ ಜಮೀನಿನ ಜಾಗದಲ್ಲಿ ಅನಧಿಕೃತ ಒತ್ತುವರಿದಾರರನ್ನು ತೆರವುಗೊಳಿಸುವಂತೆ ಒತ್ತಾಯಿಸಿ ನಡಹಾಡಿ ಮಹಿಳೆಯರು ಮೈಸೂರು ಜಿಲ್ಲಾಧಿಕಾರಿಗಳಿಗೆ ಮತ್ತು ನಾಗರಿಕ ಹಕ್ಕು ನಿರ್ದೇಶನಾಲಯದ ಪೊಲೀಸ್ ಅಧೀಕ್ಷಕರಿಗೆ ಮನವಿ ಸಲ್ಲಿಸಿದರು.

ನಡಹಾಡಿಯ ಮಹಿಳಾ ಮುಖಂಡರಾದ ಮಾದಮ್ಮ ಅವರ ನೇತೃತ್ವದ ನಿಯೋಗ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ, ನಡಹಾಡಿ ಮೈಸೂರು ಜಿಲ್ಲೆ ಕಾಡಂಚಿನ ಪ್ರದೇಶವಾಗಿದ್ದು, ಇಲ್ಲಿಗೆ ಕುಡಿಯುವ ನೀರು, ವಾಸಿಸುವ ಮನೆ, ರಸ್ತೆ ದುರಸ್ತಿ, ವಿದ್ಯುತ್ ಸಂಪರ್ಕ, ಆರೋಗ್ಯ ವ್ಯವಸ್ಥೆ ಯಾವುದೇ ಸೌಕರ್ಯ ಈ ಹಾಡಿಗೆ ಜಿಲ್ಲಾಡಳಿತದಿಂದ ಸಿಗುತ್ತಿಲ್ಲ. ಹಾಗಾಗಿ ಜಿಲ್ಲಾಡಳಿತ ನಡಹಾಡಿಗೆ ಮೂಲ ಸೌಕರ್ಯ ಒದಗಿಸಲು ವಿಶೇಷ ಆಸಕ್ತಿ ವಹಿಸುವಂತೆ ಮನವಿ ಮಾಡಿದ್ದಾರೆ.

ಸರ್ವೆ ನಂ.4ರಲ್ಲಿ 150 ಎಕರೆ ಜಮೀನಿದ್ದು, 1987–88ರಲ್ಲಿ ನಡಹಾಡಿ ಗ್ರಾಮಸ್ಥರಿಗೆ ಮಂಜೂರಾಗಿತ್ತು. ಆದರೆ, ತಾಂತ್ರಿಕ ಕಾರಣಗಳಿಂದ ಇಲ್ಲಿಯವರೆಗೂ ಸರಿಯಾಗಿ ಅರ್ಹ(ಜೇನು ಕುರುಬರಿಗೆ) ಫಲಾನುಭವಿಗಳ ಬಳಕೆ ಸಾಧ್ಯವಾಗದೇ ಒತ್ತುವರಿದಾರರ ಪಾಲಾಗಿದೆ. ಈ ಸಮಸ್ಯೆ ಬಗೆಹರಿಸುವಂತೆ ಮನವಿ ಮಾಡಿದ್ದಾರೆ.

ಈ ಹಿಂದೆ ಇದೇ ಹಾಡಿನಲ್ಲಿ ಬಾಲಕಿಯೊಬ್ಬಳು ಅತ್ಯಾಚಾರಕ್ಕೊಳಗಾಗಿದ್ದ ಸಂದರ್ಭದಲ್ಲಿ ಮಾಜಿ ಸಂಸದ ಉಗ್ರಪ್ಪ ನೇತೃತ್ವದ ಮಹಿಳಾ ಸಂರಕ್ಷಣಾ ತಂಡ ಹಾಡಿಗೆ ಆಗಮಿಸಿ ಅಧ್ಯಯನ ನಡೆಸಿತ್ತು. ಅಂದಿನಿಂದ ಇಂದಿನವರೆಗೂ ಸರ್ಕಾರ ಬದಲಾದರೂ ನಡಹಾಡಿ ಜನರ ಹಣೆಬರಹ ಬದಲಾಗಿಲ್ಲ. ಅಲ್ಲದೆ, ಈ ಸಂಬಂಧ ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನ ಅಧಿಕಾರಿಗಳಿಗೆ ನಡಹಾಡಿ ಸಮಸ್ಯೆ ಬಗ್ಗೆ ಹತ್ತು–ಹಲವು ಬಾರಿ ಮನವಿ ನೀಡಿದರೂ ಪ್ರಯೋಜನವಾಗಿಲ್ಲ. ಇಂತಹ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು.

ಅಲ್ಲದೆ, ಹಾಡಿ ಜನರಿಗೆ ಕಳೆದ 40 ವರ್ಷಗಳ ಹಿಂದೆ ಸರ್ಕಾರ ಮನೆಗಳನ್ನು ವಿತರಣೆ ಮಾಡಿತ್ತು. ಇದೀಗ ಆ ಕುಟುಂಬಗಳು ವಿಸ್ತರಣೆಗೊಂಡು ಅಜ್ಜ–ಅಜ್ಜಿ, ಮಕ್ಕಳು, ಮೊಮ್ಮಕ್ಕಳು ಸೇರಿದಂತೆ ಎಲ್ಲರೂ ಒಂದೇ ಕೋಣೆಯಲ್ಲಿ ಬದುಕು ನಡೆಸುವಂತಾಗಿದ್ದು, ಹೊಸ ಪೀಳಿಗೆ ವಾಸಕ್ಕೆ ಹೊಸ ಮನೆಗಳನ್ನು ವಿತರಿಸುವಂತೆ ಮನವಿ ಮಾಡಿದರು. ಈ ವೇಳೆ ಸಾಮಾಜಿಕ ಹೋರಾಟಗಾರ ಹಾಡಿ ಪ್ರಸನ್ನ, ಎನ್.ಎಂ.ರಾಜೇಶ್, ಕುಮಾರ, ರಾಣಿ, ರತ್ನ, ರಾಜಣ್ಣ, ಸಣ್ಣಿ, ಕುಳ್ಳಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಸಿಕ್ಕಿಂನಲ್ಲಿ ಮೇಘಸ್ಫೋಟ

## ಹಠಾತ್ ಪ್ರವಾಹದಲ್ಲಿ 23 ಸೈನಿಕರು ನಾಪತ್ತೆ



ಗಂಗ್ಟೋಕ್: ಉತ್ತರ ಸಿಕ್ಕಿಂನ ಲೊನಾಕ್ ಸರೋವರದ ಮೇಘಸ್ಫೋಟದಿಂದಾಗಿ ತೀಸ್ತಾ ನದಿಯಲ್ಲಿ ಹಠಾತ್ ಪ್ರವಾಹ ಉಂಟಾಗಿ 23 ಸೇನಾ ಸಿಬ್ಬಂದಿ ನಾಪತ್ತೆಯಾಗಿದ್ದಾರೆ. ಉತ್ತರ ಸಿಕ್ಕಿಂನಲ್ಲಿ ಮೇಘಸ್ಫೋಟ, ಪ್ರವಾಹ ಸಂಭವಿಸಿದ್ದು, ಅನೇಕ ಪ್ರದೇಶಗಳು ಜಲಾವೃತವಾಗಿವೆ. ಪ್ರವಾಹದ ನಂತರ ಚುಂಗ್ ಥಾಂಗ್ ಅಣೆಕಟ್ಟಿನಿಂದ ನೀರು ಬಿಡುಗಡೆ ಮಾಡಿದ್ದರಿಂದ ಕೆಳ ಭಾಗದ ಪ್ರದೇಶಗಳಲ್ಲಿ ನೀರಿನ ಮಟ್ಟ ಇದ್ದಕ್ಕಿದ್ದಂತೆ 15–20 ಅಡಿ ಎತ್ತರಕ್ಕೆ ಏರಿದೆ.

ಸಿಂಘ್‌ಥಾಮ್ ಬಳಿಯ ಬರ್ದಂಗ್‌ನಲ್ಲಿ ನಿಲ್ಲಿಸಲಾಗಿದ್ದ ಸೇನಾ ವಾಹನಗಳು ಮುಳುಗಿವೆ. ನದಿ ಉಕ್ಕಿ ಹರಿಯುತ್ತಿರುವ ಕಾರಣ ತೀಸ್ತಾ ನದಿಯ ಮೇಲಿನ ಸಿಂಥಮ್ ಕಾಲು ಸೇತುವೆ ಕುಸಿದಿದೆ. ಪಶ್ಚಿಮ ಬಂಗಾಳದ ಜಲ್ಪೈಗುರಿ ಆಡಳಿತವು ಮುನ್ನೆಚ್ಚರಿಕೆ ಕ್ರಮವಾಗಿ ನದಿಯ ಕೆಳಗಿನ ಜಲಾನಯನ ಪ್ರದೇಶದಿಂದ ಜನರನ್ನು ಸ್ಥಳಾಂತರಿಸುತ್ತಿದೆ. ಸಿಕ್ಕಿಂ ಸರ್ಕಾರ ರಾಜ್ಯದಲ್ಲಿ ಹೈ ಅಲರ್ಟ್ ಘೋಷಿಸಿದೆ. ತೀಸ್ತಾ ನದಿಯಿಂದ ದೂರ ಇರುವಂತೆ ಜನರಿಗೆ ತಿಳಿಸಲಾಗಿದೆ. ಇನ್ನೂ ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ.

## ಆಸ್ಕರ್ ಪ್ರಶಸ್ತಿ ವಿಜೇತ 'ದಿ ಎಲಿಫೆಂಟ್ ವಿಸ್ಪರರ್ಸ್' ಸಾಕ್ಷ್ಯಚಿತ್ರ ಖ್ಯಾತಿಯ ಬೊಮ್ಮ-ಬೆಳ್ಳಿ ದಂಪತಿಯಿಂದ

# ದಸರಾ ಗಜಪಡೆಗೆ ಪುಷ್ಪ ನಮನ ಸಲ್ಲಿಸಿ ಸ್ಕಾಲ್ ಇಂಡಿಯಾ ಸಮ್ಮೇಳನಕ್ಕೆ ಚಾಲನೆ





ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ದಸರಾ ಗಜಪಡೆಗೆ ಪುಷ್ಪ ನಮನ ಸಲ್ಲಿಸುವ ಮೂಲಕ ಬುಧವಾರ ಆಸ್ಕರ್ ಪ್ರಶಸ್ತಿ ವಿಜೇತ 'ದಿ ಎಲಿಫೆಂಟ್ ವಿಸ್ಪರರ್ಸ್' ಸಾಕ್ಷ್ಯಚಿತ್ರ ಖ್ಯಾತಿಯ ಬೊಮ್ಮ ಮತ್ತು ಬೆಳ್ಳಿ ದಂಪತಿ ಸ್ಕಾಲ್ ಇಂಡಿಯಾ ಸಮ್ಮೇಳನಕ್ಕೆ ಚಾಲನೆ ನೀಡಿದರು. ಮೈಸೂರಿನ ಸೈಲೆಂಟ್ ಶೋರ್ಸ್ ರೆಸಾರ್ಟ್ ಅಂಡ್ ಸ್ಪಾದಲ್ಲಿ ಹಮ್ಮಿಕೊಂಡಿರುವ ಸ್ಕಾಲ್ ಇಂಡಿಯಾ ಸಮ್ಮೇಳನಕ್ಕೆ ಬುಧವಾರ ಸಮ್ಮೇಳನದ ರಾಯಭಾರಿಗಳೂ ಆದ ಬೊಮ್ಮ-ಬೆಳ್ಳಿ ದಂಪತಿ ಚಾಲನೆ ನೀಡುತ್ತಿರುವುದನ್ನು ಬಲಚಿತ್ರದಲ್ಲಿ ಕಾಣಬಹುದು.

ಮೈಸೂರು, ಅ.4(ಪಿಎಂ)– ದಸರಾ ಗಜಪಡೆಗೆ ಪುಷ್ಪ ನಮನ ಸಲ್ಲಿಸುವ ಮೂಲಕ ಸ್ಕಾಲ್ ಇಂಡಿಯಾ ಕಾಂಗ್ರೆಸ್‌ಗೆ (ಸಮ್ಮೇಳನ) ಆಸ್ಕರ್ ಪ್ರಶಸ್ತಿ ವಿಜೇತ 'ದಿ ಎಲಿಫೆಂಟ್ ವಿಸ್ಪರರ್ಸ್' ಸಾಕ್ಷ್ಯಚಿತ್ರ ಖ್ಯಾತಿಯ ಬೊಮ್ಮ ಮತ್ತು ಬೆಳ್ಳಿ ದಂಪತಿ ಬುಧವಾರ ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಚಾಲನೆ ನೀಡಿದರು.

ವಾಯುವಿಹಾರಕ್ಕೆ ಹೊರಟ್ಟಿದ್ದ ದಸರಾ ಗಜಪಡೆಗೆ ಪುಷ್ಪಾರ್ಚನೆ ಮಾಡಿ, ಕರ್ನಾಟಕ ಪ್ರವಾಸೋದ್ಯಮ ಇಲಾಖೆ ಸಹಯೋಗದೊಂದಿಗೆ ಸ್ಕಾಲ್ ಇಂಟರ್‌ನ್ಯಾಷನಲ್ ಇಂಡಿಯಾ ವತಿಯಿಂದ ಮೈಸೂರಿನಲ್ಲಿ ಎರಡು ದಿನಗಳು ನಡೆಯಲಿರುವ ಸಮ್ಮೇಳನಕ್ಕೆ ಅವರು ಚಾಲನೆ ನೀಡಿದರು.

ಅಶ್ವಾರೋಹಿದಳದ ಜೊತೆಗೆ ಪೂಜಾ ಕುಣಿತ, ಡೊಳ್ಳು ಕುಣಿತ, ಮಂಗಳವಾದ್ಯ ಸೇರಿದಂತೆ ಜಾನಪದ ಕಲಾ ತಂಡಗಳೊಂದಿಗೆ ಸ್ಕಾಲ್ ಇಂಡಿಯಾ ಪದಾಧಿಕಾರಿಗಳು ಹಾಗೂ ಸದಸ್ಯರು ಕೆಆರ್ ವೃತ್ತದವರೆಗೆ ಗಜಪಡೆಯೊಂದಿಗೆ ಹೆಜ್ಜೆ ಹಾಕಿದರು. ಬಹುತೇಕ ಮಂದಿ ಮೈಸೂರು ಪರಂಪರೆಯ ಮೈಸೂರು ಪೇಟ ಸೇರಿದಂತೆ ಪಂಚೆ–ಬಿಳಿ ಅಂಗಿಯ ವಸ್ತ್ರದೊಂದಿಗೆ ಹೆಜ್ಜೆ ಹಾಕುವ ಮೂಲಕ ಗಮನ ಸೆಳೆದರು. ಬಳಿಕ ಅರಮನೆ ಸುತ್ತಲಿನ ರಸ್ತೆಯಲ್ಲಿ ಸಾರೋಟಿನಲ್ಲಿ ಸಂಚರಿಸಿ ಸಂಭ್ರಮಿಸಿದರು.

ಬಳಿಕ ಪ್ರವಾಸೋದ್ಯಮ ಉತ್ತೇಜಿಸುವ ನಿಟ್ಟಿನಲ್ಲಿ ಹಮ್ಮಿಕೊಂಡಿರುವ ಈ ಸಮ್ಮೇಳನದ ಸಭಾ ಕಾರ್ಯಕ್ರಮಕ್ಕೆ ಮೈಸೂರು ನಗರದ ಹೊರವಲಯದ ಸೈಲೆಂಟ್ ಶೋರ್ಸ್ ರೆಸಾರ್ಟ್ ಅಂಡ್ ಸ್ಪಾದಲ್ಲಿ ಸಮ್ಮೇಳನದ ರಾಯಭಾರಿಗಳೂ ಆದ ಬೊಮ್ಮ–ಬೆಳ್ಳಿ ದಂಪತಿ ಚಾಲನೆ ನೀಡಿದರು. ಇಲ್ಲಿ ಎರಡು ದಿನಗಳು ಸಮ್ಮೇಳನ ನಡೆಯಲಿದ್ದು, ಬಳಿಕ ಅ.8ರವರೆಗೆ ಬೆಂಗಳೂರಿನಲ್ಲಿ ಮುಂದುವರೆಯಲಿದೆ.

ಸಮ್ಮೇಳನ ಉದ್ಘಾಟಿಸಿದ ನಂತರ ಬೊಮ್ಮ ಮಾತನಾಡಿ, ಮನುಷ್ಯರಾದವರು ಅರಣ್ಯ ಮತ್ತು ವನ್ಯಜೀವಿಗಳ ಮೇಲೆ ಪ್ರೀತಿ ಮತ್ತು ಕಾಳಜಿ ತೋರಬೇಕು. ಅರಣ್ಯ ಉಳಿಯಲು ಮತ್ತು ವನ್ಯಜೀವಿಗಳು ಬದುಕಲು ಅವಕಾಶ ನೀಡಬೇಕು. ಅವೂ ನಮ್ಮಂತೆಯೇ ಎಂಬುದನ್ನು ಅರಿಯಬೇಕು. ಕಾಡಿದ್ದರೆ ನಾಡು ಇರಲಿದ್ದು, ಆಗ ಮಾತ್ರ ಮನುಷ್ಯನೂ ಉಳಿಯಬಲ್ಲ ಎಂದು ಹೇಳಿದರು.

ಆನೆಗೆ ನಿತ್ಯ 200ರಿಂದ 500 ಕೆ.ಜಿ ಆಹಾರ ಬೇಕು. 10 ಲೀಟರ್ ಹಾಲು ಬೇಕು. ಆನೆಗಳನ್ನು ನಾವು ಚೆನ್ನಾಗಿ ನೋಡಿಕೊಂಡರೆ ಅಷ್ಟೇ ಪ್ರೀತಿಯನ್ನು ಅವು ನಮ್ಮ ಮೇಲೂ ತೋರುತ್ತವೆ ಎಂದು ನಿರೂಪಕಿಯ ಪ್ರಶ್ನೆಯೊಂದಕ್ಕೆ ಇದೇ ವೇಳೆ ಉತ್ತರಿಸಿದರು.

ಬಳಿಕ ಸಂಸದ ಪ್ರತಾಪ್ ಸಿಂಹ ಮಾತನಾಡಿ, ಭಾರತೀಯ ಪರಂಪರೆ ಹಾಗೂ ಸಂಸ್ಕೃತಿ ಬಿಂಬಿಸುವ ಮೈಸೂರಿನಲ್ಲಿ ಸ್ಕಾಲ್ ಇಂಡಿಯಾ ಸಮ್ಮೇಳನ ನಡೆಯುತ್ತಿರುವುದು ಹೆಮ್ಮೆಯ ಸಂಗತಿ. ಆಗ್ರಾ, ಜೈಪುರ, ದೆಹಲಿ ನಂತರ ಸುಂದರ ಅರಮನೆಗಳನ್ನು ಹೊಂದಿರುವ ಸಾಂಸ್ಕೃತಿಕ ನಗರಿ ಮೈಸೂರು, ಭಕ್ತಿ ಹಾಗೂ ಪರಿಸರ ಪ್ರವಾಸೋದ್ಯಮಕ್ಕೂ ಹೆಸರುವಾಸಿಯಾಗಿದೆ. ಜಿಲ್ಲೆಯಲ್ಲಿ ಬಂಡೀಪುರ ಹಾಗೂ ನಾಗರಹೊಳೆ ರಾಷ್ಟ್ರೀಯ ಉದ್ಯಾನವನಗಳಿವೆ. ಇಲ್ಲಿನ ಪ್ರವಾಸೋದ್ಯಮದ ಬೆಳವಣಿಗೆಗೆ ಕೇಂದ್ರ ಸರ್ಕಾರ ನಿರಂತರವಾಗಿ ಸಹಕರಿಸುತ್ತಿದೆ. ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ನಿರ್ಮಾಣವಾಗಿದೆ ಎಂದರು.

ದೇಶದ ಅಭಿವೃದ್ಧಿಗೆ ಕಳೆದ 9 ವರ್ಷಗಳಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಕೊಡುಗೆ ಅಪಾರವಾಗಿದೆ. ಅವರ ಸಹಕಾರದಿಂದ ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಹಲವು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೇನೆ. ಮೈಸೂರು ಮಂಡಕಳ್ಳಿ ವಿಮಾನ ನಿಲ್ದಾಣದ ರನ್ ವೇ ವಿಸ್ತರಣೆ ಮಾಡಲಾಗುತ್ತಿದೆ. ಬೆಂಗಳೂರು ಮತ್ತು ಮೈಸೂರು ನಡುವೆ ರೈಲ್ವೆ ಹಳಿಯನ್ನು ದ್ವಿಗುಣ ಮಾಡಲಾಗಿದೆ. ಅಲ್ಲದೆ, ಇಲ್ಲಿಗೆ ವಂದೇ ಭಾರತ್ ಎಕ್ಸ್‌ಪ್ರೆಸ್ ಪರಿಚಯಿಸಲಾಗಿದೆ. ಶೀಘ್ರದಲ್ಲಿ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಆಫ್ ಇಂಡಿಯಾ ಕೂಡ ಬರಲಿದೆ. ಮೈಸೂರು ಪ್ರವಾಸೋದ್ಯಮದ ಅಭಿವೃದ್ಧಿಗೆ ಎಲ್ಲಾ ಸೌಲಭ್ಯಗಳನ್ನು ಹೊಂದಿದ್ದು, ಅದಕ್ಕೆ ಪ್ರವಾಸೋದ್ಯಮ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ತಮ್ಮ ಬೆಂಬಲ ಅಗತ್ಯವಾಗಿದೆ ಎಂದು ಕೋರಿದರು.

ಸ್ಕಾಲ್ ಇಂಡಿಯಾ ಸಮ್ಮೇಳನದ ಅಧ್ಯಕ್ಷ ಸುದೀಪ್ತ ದೇಬ್ ಮಾತನಾಡಿ, ಸುಸ್ಥಿರ ಪ್ರವಾಸೋದ್ಯಮದ ಅಭಿವೃದ್ಧಿ, ನಮ್ಮ ಭೂಮಿಯ ರಕ್ಷಣೆ ಹಾಗೂ ಮೌಲಿಕ ಲಾಭ ಸಂಪಾದನೆಗೆ ಉತ್ತೇಜಿಸುವುದು ಈ ಸಮ್ಮೇಳನದ ಉದ್ದೇಶ. ಪ್ರಕೃತಿಗೆ ಆಪ್ತರಾದ ಬೊಮ್ಮ–ಬೆಳ್ಳಿ ಈ ಸಮ್ಮೇಳನದ ರಾಯಭಾರಿಗಳಾಗಿರುವುದು ಸಂತಸದ ವಿಚಾರ ಎಂದು ಹರ್ಷ ವ್ಯಕ್ತಪಡಿಸಿದರು.

ಸ್ಕಾಲ್ ಇಂಟರ್‌ನ್ಯಾಷನಲ್ ಮೈಸೂರು ಅಧ್ಯಕ್ಷ ಬಿ.ಎಸ್.ಪ್ರಶಾಂತ್ ಮಾತನಾಡಿ, ನಮ್ಮ ಸಮ್ಮೇಳನದ ಲಾಂಛನ ಆನೆ. ಆನೆಯೊಂದಿಗೆ ಬೊಮ್ಮ–ಬೆಳ್ಳಿ ದಂಪತಿಗೆ ಇರುವ ಆತ್ಮೀಯತೆ ಇಡೀ ಜಗತ್ತಿಗೆ ಗೊತ್ತಿದೆ. ಇದು ಪ್ರಾಣಿ ಹಾಗೂ ಮನುಷ್ಯನ ನಡುವಿನ ಸಾಮರಸ್ಯದ ಸಂಕೇತ. ಪ್ರವಾಸೋದ್ಯಮ ಕ್ಷೇತ್ರ ಬೆಳೆಯಬೇಕು. ಅದಕ್ಕೆ ಪೂರಕವಾದ ವಾತಾವರಣ ನಿರ್ಮಾಣವಾಗಬೇಕು. ಈ ನಿಟ್ಟಿನಲ್ಲಿ ಸದರಿ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಸ್ಕಾಲ್ ಇಂಟರ್‌ನ್ಯಾಷನಲ್ ಬೆಂಗಳೂರು ಅಧ್ಯಕ್ಷ ಅಯ್ಯಪ್ಪ ಸೋಮಯ್ಯ ಮಾತನಾಡಿ, ಜಂಬೂಸವಾರಿ, ಅರಮನೆ ನೋಡಲು ಲಕ್ಷಾಂತರ ಪ್ರವಾಸಿಗರು ಮೈಸೂರಿಗೆ ಬರುತ್ತಾರೆ. ಪ್ರವಾಸೋದ್ಯಮಕ್ಕೆ ದೇಶದಲ್ಲೇ ಹೆಸರಾದ ಬೆಂಗಳೂರು ಮತ್ತು ಮೈಸೂರಿನಲ್ಲಿ ನಮ್ಮ ಐತಿಹಾಸಿಕ ಸಮ್ಮೇಳನ ನಡೆಯುತ್ತಿರುವುದು ಹೆಮ್ಮೆಯ ಸಂಗತಿ ಎಂದು ಹರ್ಷ ವ್ಯಕ್ತಪಡಿಸಿದರು.

ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ, ಸ್ಕಾಲ್ ಇಂಟರ್ ನ್ಯಾಷನಲ್ ಇಂಡಿಯಾ ಅಧ್ಯಕ್ಷ ಕಾರ್ಲ್ ವಾರ್ಝ್, ಡಿ.ದೇವರಾಜ ಅರಸು ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಕೌಟಿಲ್ಯ ರಘು, ಜಿಎಸ್‌ಎಸ್ ಫೌಂಡೇಶನ್‌ನ ಶ್ರೀಹರಿ ಸೇರಿದಂತೆ ದೇಶ–ವಿದೇಶದ ವಿವಿಧ ಭಾಗಗಳಿಂದ ಬಂದಿರುವ ಸಂಘಟನೆ ಪದಾಧಿಕಾರಿಗಳು ಹಾಗೂ ಸದಸ್ಯರು ಹಾಜರಿದ್ದರು.

### ಇಂದು ಚರ್ಚಾಕೂಟ

ಅ.5ರಂದು ಮಧ್ಯಾಹ್ನ 12ಕ್ಕೆ ಸೈಲೆಂಟ್ ಶೋರ್ಸ್ ರೆಸಾರ್ಟ್ ಮತ್ತು ಸ್ಪಾದಲ್ಲಿ 'ಪಾರಂಪರಿಕ ಸ್ವತ್ತುಗಳು ಪುನರುಜ್ಜೀವನದ ಪ್ರಾಮುಖ್ಯತೆ' ಕುರಿತು ಚರ್ಚಾಕೂಟ ನಡೆಯಲಿದೆ. ಚರ್ಚೆಯಲ್ಲಿ ಇತಿಹಾಸ ತಜ್ಞ ಪ್ರೊ.ಎನ್.ಎಸ್.ರಂಗರಾಜು, ಪುರಾತತ್ವ ಇಲಾಖೆ ಆಯುಕ್ತ ದೇವರಾಜು, ಅಂತಾರಾಷ್ಟ್ರೀಯ ಪ್ರವಾಸೋದ್ಯಮಿ ಸ್ಟೀಫನ್ ಬ್ರೂಸ್ ರಿಚರ್ ಭಾಗವಹಿಸಲಿದ್ದಾರೆ. ಚರ್ಚೆಯ ನಿರ್ವಾಹಕರಾಗಿ ಮೈಸೂರಿನ ಡಾ.ಧರ್ಮಪ್ರಸಾದ್ ಕಾರ್ಯನಿರ್ವಹಿಸಲಿದ್ದಾರೆ.

## ನಕ್ಕರೆ ಅದೇ ಸ್ವರ್ಗ

ತಾಯಿ : (ಗಂಡನ ಮನೆಗೆ ಹೊರಟು ನಿಂತ ಮಗಳನ್ನು ನೇವರಿಸಿ) : ಗಂಡನ ಮಾತು ಕೇಳಬೇಕು. ಎದುರು ವಾದಿಸಬೇಡ
ಮಗಳು : ಅಮ್ಮಾ, ನೀನು ಮಾತ್ರ ಅಪ್ಪನ ಮೇಲೆ ರೇಗ್ತೀಯಾ?
ತಾಯಿ : ಮೊದಮೊದಲು ಸುಮ್ಮನಿರಬೇಕು. ಗಂಡ ತನ್ನ ಎಲ್ಲಾ ಚಟಗಳನ್ನು ಹೇಳಿ ಬಿಡುತ್ತಾನೆ. ಆ ಮೇಲೆ ಅವನ ಜುಟ್ಟು ನಮ್ಮ ಕೈಲಿದ್ದಂತೆ!

**ಮೈಸೂರು ಮಿತ್ರ**
ಗುರುವಾರ, 5 ಅಕ್ಟೋಬರ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

### ಅಮೃತವಾಹಿನಿ..........

ಸಂಸಾರದಲ್ಲಿದ್ದರೆ ತಪ್ಪಲ್ಲ. ಮನಸ್ಸಿನಲ್ಲಿ ದೇವರಿದ್ದರೆ ಸಾಕು. ನೀರಿನಲ್ಲಿ ದೋಣಿಯಿರಬಹುದು. ಆದರೆ ದೋಣಿಯಲ್ಲಿ ನೀರು ಇರಬಾರದು –ಶ್ರೀ ರಾಮಕೃಷ್ಣ

ವೇದ ಸುಳ್ಳಾದರೂ { ಆಗೋದೆಲ್ಲಾ
ಗಾದೆ ಸುಳ್ಳಾಗದು { ಒಳ್ಳೆಯದಕ್ಕೆ

## ನಿಮ್ಮ ಪತ್ರಗಳು

### ಭ್ರಷ್ಟರನ್ನು ಬೇಟೆಯಾಡುವ ಅಧಿಕಾರಿಗಳು ಭ್ರಷ್ಟರೇ?

ಮಾನ್ಯರೆ,

ಜಗತ್ತಿನಲ್ಲಿ ಕಾಡುತ್ತಿರುವ ಭೂತ ಅಂದ್ರೆ ಅದು ಭ್ರಷ್ಟಾಚಾರ. ಭ್ರಷ್ಟಾಚಾರ ಎಂಬ ಭೂತ ಬೇರು ಸಮೇತ ಕಿತ್ತು ಎಸೆಯಲು ಅಥವಾ ಭ್ರಷ್ಟಾಚಾರ ಮುಕ್ತ ಸಮಾಜ ನಿರ್ಮಾಣ ಮಾಡಲು ಸಾಧ್ಯವೇ? ಸಾಧ್ಯವೇ ಇಲ್ಲ. ಏಕೆಂದರೆ ಭ್ರಷ್ಟಾಚಾರ ನಡೆಸುವವರ ವಿರುದ್ಧ ಲೋಕಾಯುಕ್ತ, ಎಸಿಬಿ, ಐಟಿ, ಸಿಬಿಐ ಸೇರಿದಂತೆ ಇನ್ನಿತರ ಭ್ರಷ್ಟಾಚಾರ ಇಲಾಖೆಗಳನ್ನು ಸರ್ಕಾರಗಳು ರಚನೆ ಮಾಡಿವೆ.

ಆದರೆ ಈ ಎಲ್ಲಾ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ನಿಷ್ಠಾವಂತರೇ? ಎಂಬ ಪ್ರಶ್ನೆ ಸಾರ್ವಜನಿಕ ವಲಯಗಳಲ್ಲಿ ಕಾಡುತ್ತಿದೆ. ಭ್ರಷ್ಟರನ್ನು ಬೇಟೆಯಾಡುವ ಅಧಿಕಾರಿಗಳು ಭ್ರಷ್ಟರಾದಾಗ ಜಗತ್ತು ಯಾವ ರೀತಿ ಕೀಳು ಮಟ್ಟಕ್ಕೆ ಹೋಗಬಹುದು? ಭ್ರಷ್ಟರನ್ನು ಬೇಟೆಯಾಡುವ ಲೋಕಾಯುಕ್ತ, ಎಸಿಬಿ, ಐಟಿ, ಸಿಬಿಐ ಸೇರಿದಂತೆ ಇನ್ನಿತರ ಭ್ರಷ್ಟಾಚಾರ ಇಲಾಖೆಗಳ ಅಧಿಕಾರಿಗಳಿಗೆ ರಾತ್ರೋರಾತ್ರಿ ಸೂಟ್ಕೇಸ್ ಬರುತ್ತದೆ? ಎಂಬ ಆರೋಪ ಕೇಳಿ ಬರುತ್ತಿದೆ.

ಅಲ್ಲದೇ ಐಎಎಸ್, ಐಪಿಎಸ್, ಕೆಎಎಸ್ ಅಧಿಕಾರಿಗಳು ಸೇರಿದಂತೆ ದೊಡ್ಡ ದೊಡ್ಡ ಅಧಿಕಾರಿಗಳಾದ ಇಲಾಖೆಯ ಆಯುಕ್ತರು, ಜಿಲ್ಲಾಧಿಕಾರಿಗಳು, ತಹಸೀಲ್ದಾರರು ಶೇ.10 ಲಂಚ ಎಲ್ಲಾ ಇಲಾಖೆಗಳು ಕೊಡಲೇಬೇಕು. ಲಂಚ ಕೊಡದೇ ಹೋದ್ರೆ ಮುಖ್ಯವಾಗಿ ಸಹಿ ಮಾಡುವುದಿಲ್ಲ? ಎಂಬ ಆರೋಪ ಕೇಳಿಬರುತ್ತಿದೆ. ದಾಖಲೆ ಸಮೇತ ಅಧಿಕಾರಿಗಳ ಜಾಲ ಪತ್ತೆ ಹಚ್ಚಲು ಒಬ್ರ–ಇಬ್ರ, 100 ಜನ ಅಧಿಕಾರಿಗಳಲ್ಲಿ 2–3 ಜನ ನಿಷ್ಠಾವಂತ ಅಧಿಕಾರಿಗಳು ಇರಬಹುದೇನು. ಒಟ್ಟಿನಲ್ಲಿ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಭ್ರಷ್ಟರನ್ನು ಹಿಡಿಯುವ ಅಧಿಕಾರಿಗಳು ಭ್ರಷ್ಟರೇ? ಆದಾಗ ಹೇಗೆ ತಾನೇ ಭ್ರಷ್ಟಾಚಾರ ಮುಕ್ತ ಸಮಾಜ ನಿರ್ಮಾಣ ಮಾಡಲು ಸಾಧ್ಯ.

ಅಲ್ಲದೇ ತೆರಿಗೆ ವಿಷಯದಲ್ಲೂ ಸರ್ಕಾರಕ್ಕೆ ವಂಚನೆ ಮಾಡಲಾಗುತ್ತಿದೆ. ಭ್ರಷ್ಟ ಅಧಿಕಾರಿಗಳ ಭ್ರಷ್ಟಾಚಾರ ಮುಚ್ಚಿ ಹಾಕಲು ಕೆಲ ಪತ್ರಕರ್ತರಿಗೂ ಹಣದ ಆಮಿಷವೊಡ್ಡಿದ್ದು ಸುಳ್ಳಲ್ಲ. ರಾಜಕಾರಣಿಗಳು ಮತ್ತು ಅಧಿಕಾರಿಗಳ ಆಸ್ತಿ, ಅಂತಸ್ತು, ಸೇರಿದಂತೆ ಎಲ್ಲ ವೈಯಕ್ತಿಕ ಮತ್ತು ಕುಟುಂಬ ಆದಾಯದ ಬಗ್ಗೆ ಆರ್.ಟಿ.ಐ ಅಡಿ ವ್ಯಾಪ್ತಿಗೆ ತರಬೇಕು ಮತ್ತು ವೆಬ್‌ಸೈಟ್‌ನಲ್ಲಿ ಸಾರ್ವಜನಿಕವಾಗಿ ಪ್ರಕಟಿಸಬೇಕು ಅಂದಾಗ ಭ್ರಷ್ಟರ ಮಾಹಿತಿ ತಿಳಿಯಲಿದೆ. ಒಟ್ಟಿನಲ್ಲಿ ಹಿಂದೆ ನಡೆದಿದ್ದ ಘಟನೆಗಳನ್ನು ಅಧಿಕಾರಿಗಳು ಮರೆತು ಇನ್ನು ಮುಂದೆಯಾದರೂ ಬೇಟೆಯಾಡುವ ಅಧಿಕಾರಿಗಳು ಮತ್ತು ಎಲ್ಲ ಇಲಾಖೆಗಳಿಂದ ಶೇ. 10 ರಷ್ಟು ಲಂಚ ಸ್ವೀಕರಿಸುವ ದೊಡ್ಡ ದೊಡ್ಡ ಅಧಿಕಾರಿಗಳು ಎಚ್ಚೆತ್ತುಕೊಂಡು ಒಳ್ಳೆಯ ಅಧಿಕಾರಿಗಳಾಗಿ ದೇಶ, ರಾಜ್ಯದಲ್ಲಿ ಕಾರ್ಯನಿರ್ವಹಿಸುವಂತಾಗಲಿ ಎನ್ನುವುದು ಜನರ ಅಭಿಮತವಾಗಿದೆ.

–ವೀರೇಶ ಧೂಪದಮಠ

### ಮೈಸೂರಿಗೇಕೆ ಈ ದೌರ್ಭಾಗ್ಯ

ಮಾನ್ಯರೆ,

ಮೈಸೂರು ನಗರ ಬೆಂಗಳೂರಿನ ನಂತರ ಕ್ಷಿಪ್ರ ಗತಿಯಲ್ಲಿ ಬೆಳವಣಿಗೆ ಆಗುತ್ತಿದೆ. ಜನ ಸಾಮಾನ್ಯರು ಮಾತನಾಡುವಂತೆ ಬೆಂಗಳೂರು ಮುಂಬೈ ಆಗಿದೆ. ಮೈಸೂರು ಬೆಂಗಳೂರು ಆಗಿದೆ. ಇತ್ತೀಚೆಗೆ ಬೆಂಗಳೂರು ನಗರದಲ್ಲಿ ಅನೇಕ ವರ್ಷಗಳ ಕಾಲ ಸಂಚರಿಸಿದ ಹಳೆಯ ಗುಜರಿಗೆ ಹಾಕಲು ಯೋಗ್ಯವಾಗಿರುವ ಹಳೆಯ ಬಿಎಂಟಿಸಿ ಬಸ್ಸುಗಳು ಮೈಸೂರು ನಗರದಲ್ಲಿ ಸಂಚರಿಸುತ್ತಿವೆ. ಈ ಬಸ್‌ಗಳನ್ನು ಚಾಲನೆ ಮಾಡಲು ಪಾಪ ಚಾಲಕರು ಹರಸಾಹಸ ಪಡುತ್ತಿದ್ದಾರೆ.

ಕೆಲವೊಮ್ಮೆ ಈ ಬಸ್‌ಗಳು ಮಾರ್ಗ ಮಧ್ಯದಲ್ಲೇ ಕೆಟ್ಟು ನಿಲ್ಲುತ್ತವೆ. ಈ ಬಸ್‌ಗಳಿಗೆ ಇಂಧನದ ಬಳಕೆಯೂ ಅಧಿಕವಾಗಿದೆ. ಮುಖ್ಯಮಂತ್ರಿಗಳ ತವರೂರಿಗೆ ಸುಸ್ಥಿತಿಯ ಬಸ್‌ಗಳನ್ನು ಸಾರ್ವಜನಿಕರಿಗೆ ಒದಗಿಸಲಿ.

–ಜಿ.ಪಿ. ರಾಜೇಶ್, ವಿ.ವಿ.ಪುರಂ, ಮೈಸೂರು.

### ಈ ಮಾರ್ಗವನ್ನು ಡಾಂಬರೀಕರಣಗೊಳಿಸಿ

ಮಾನ್ಯರೆ,

ಮೈಸೂರು ನಗರ ಬಸ್ ನಿಲ್ದಾಣದ ಗ್ರಾಮಾಂತರ ಭಾಗಗಳಿಗೆ ಸಂಚರಿಸುವ (ಇಲವಾಲ, ಬೋಗಾದಿ, ಹುಲ್ಲಹಳ್ಳಿ) ಮಾರ್ಗದ ರಸ್ತೆಯು ಸಂಪೂರ್ಣ ಗುಂಡಿಬಿದ್ದಿದೆ. ಇದು ಮೈಸೂರು ನಗರ ಬಸ್ ನಿಲ್ದಾಣ ಒಳಭಾಗದಲ್ಲಿಯೇ ಇದೆ. ಮಳೆ ಬಂದರಂತೂ ಕೆಸರುಗದ್ದೆಯಾಗಿ ಬಿಡುತ್ತದೆ. ಪಾಪ ಗುಂಡಿ ಬಿದ್ದ ಮಾರ್ಗದಲ್ಲಿ ಬಸ್ ಚಾಲನೆ ಮಾಡಲು ಚಾಲಕರು ಹರಸಾಹಸಪಡುತ್ತಾರೆ. ಇದು ಕೆಎಸ್‌ಆರ್‌ಟಿಸಿ ಅಧಿಕಾರಿಗಳ ಕಣ್ಣಿಗೆ ಬಿದ್ದಿಲ್ಲವೆ? ಆದಷ್ಟು ಗುಣಮಟ್ಟದ ಕಾಮಗಾರಿ ಮಾಡುವಂತೆ ಮನವಿ. – ನೊಂದ ಪ್ರಯಾಣಿಕರು, ಮೈಸೂರು.

### ಬಿಟ್ಟಿ ಭಾಗ್ಯಗಳ ಮೂಲಕ ಅಧಿಕಾರಕ್ಕೆ ಬಂದ ಸರ್ಕಾರ ಸದ್ದು–ಗದ್ದಲವಿಲ್ಲದೆ ಬೆಲೆ ಏರಿಸಿದೆ

ಮಾನ್ಯರೆ,

ಪ್ರಚಂಡ ಬಹುಮತ ಗಳಿಸಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ತನ್ನ ಪ್ರಾರಂಭದ ದಿನಗಳನ್ನು ಬಿಟ್ಟಿ ಭಾಗ್ಯಗಳಿಂದ ಪ್ರಚಾರ ಪಡೆದು ಬೆನ್ನು ಚಪ್ಪರಿಸಿಕೊಂಡಿದ್ದೇ ಈಗ ಸಾಧನೆ ಎನ್ನಲಾಗುತ್ತಿದೆ. ಅಗತ್ಯ ವಸ್ತುಗಳ ಬೆಲೆ ಏರಿಕೆ ನಿಧಾನವಾಗಿ ಮಾಡುತ್ತಿರುವ ಸರ್ಕಾರ, ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದಂತೆ ಆಗಿದೆ. ಹೆಂಗಸರಿಗೆ ಭಾಗ್ಯಗಳನ್ನು ಘೋಷಿಸಿದೆ. ಅಗತ್ಯ ವಸ್ತುಗಳ ಬೆಲೆ ಶೇಕಡಾ 25 ಕ್ಕೂ ಹೆಚ್ಚು ಈ ನಾಲ್ಕು ತಿಂಗಳಲ್ಲಿ ಏರಿಸಿರುವುದೇ ಸರ್ಕಾರದ ಮಹತ್ಸಾಧನೆಯಾಗಿದೆ.

ಜೊತೆಯಲ್ಲಿ ಶಿವಮೊಗ್ಗದ ಕೋಮುಗಲಭೆ ಮತಾಂಧರ ಪೂರ್ವ ನಿಯೋಜಿತ ಕುತಂತ್ರ ಎನ್ನುವ ಗುಮಾನಿ ನಿಜವೇ ಅನ್ನುವಂತಾದರೆ; ಕಾಂಗ್ರೆಸ್ ಹಿರಿಯ ನಾಯಕ ಶಾಮನೂರು ಶಿವಶಂಕರಪ್ಪ ಲಿಂಗಾಯಿತ ಅಧಿಕಾರಿಗಳ ಪರ ಬ್ಯಾಟಿಂಗ್ ಮಾಡಿದ್ದಕ್ಕೆ ಅಂಕಿ–ಅಂಶ ಬಿಡುಗಡೆ ಮಾಡಿದ ರಾಜ್ಯ ಸರ್ಕಾರ. ಯಾವ ಜಾತ್ಯತೀತೆಯ ಪಾಠ ಹೇಳಲು ಹೊರಟಿದೆ. ನಾಚಿಕೆಯಾಗಬೇಕು ರಾಜ್ಯ ಸರ್ಕಾರಕ್ಕೆ.

ಚುನಾವಣೆಗೆ ಮುನ್ನ ಯಡಿಯೂರಪ್ಪನವರ ಬಗ್ಗೆ ಹುಸಿ ಕಾಳಜಿ ತೋರಿಸುತ್ತಾ ಅವರನ್ನು ಬಿಜೆಪಿಯಲ್ಲಿ ಕಡೆಗಣಿಸಲಾಗುತ್ತದೆ ಎಂಬ ಭಾವನೆಯನ್ನು ಬಿತ್ತುವಲ್ಲಿ ಯಶಸ್ವಿಯಾಗಿದ್ದ ಪಕ್ಷಕ್ಕೆ ಈಗ ಅದೇ ತಿರುಗುಬಾಣವಾಗಬಹುದು ಎಂಬ ಆತಂಕ ಶುರುವಾಗಿರಬೇಕು. ಹಾಗಾಗಿ ಜಾತಿವಾರು ಅಧಿಕಾರಿಗಳ ಪಟ್ಟಿ ಬಿಡುಗಡೆಗೊಳಿಸಿ ಅತೃಪ್ತರನ್ನು ಸಮಾಧಾನಗೊಳಿಸಲು ಯತ್ನಿಸುತ್ತಿದೆ. ಆದರೆ ಇವರ ಮಹಾನಾಯಕ ಇದೇ ವಿಷಯದಲ್ಲಿ ಕೇಂದ್ರ ಸರ್ಕಾರವನ್ನು ಪ್ರಶ್ನಿಸುತ್ತಿದ್ದಾರೆ. ಇದಕ್ಕಿಂತ ಹೆಚ್ಚಿನ ವಿರೋಧಾಭಾಸ ಬೇಕೇ? ಜಾತಿಯ ಹೆಸರಿನಲ್ಲಿ ಮತಗಳಿಕೆ ಎಂಬ ಹುಲಿಯನ್ನು ಏರುವುದು ಸುಲಭ; ಆದರೆ ಇಳಿಯುವುದು ಕಷ್ಟ. ಇದನ್ನು ಎಲ್ಲಾ ಪಕ್ಷಗಳೂ ಮನಗಾಣಬೇಕು. ಇದು ಬರೀ ಆಶಾವಾದವಷ್ಟೇ, ಸಾಕಾರ ಗೊಳ್ಳುವ ಯಾವ ಲಕ್ಷಣಗಳೂ ಕಾಣುತ್ತಿಲ್ಲ. ಬಿಜೆಪಿ ಹಾಗೂ ಜೆಡಿಎಸ್‌ನಂತಹ ವಿರೋಧ ಪಕ್ಷಗಳಿಂದ ಏನೂ ಪ್ರಯೋಜನ ಇಲ್ಲ. ಗೃಹಮಂತ್ರಿ ಹಾಗೂ ರಾಜಧರ್ಮ ನಿರ್ವಹಿಸದ ರಾಜ್ಯ ಸರ್ಕಾರಕ್ಕೆ ಧಿಕ್ಕಾರ ಹಾಕದೇ ಇರಲು ಯಾವ ಕಾರಣಗಳೂ ಸಿಗುತ್ತಿಲ್ಲ.

– ಶಿವಮೊಗ್ಗ ನಾ. ದಿನೇಶ್ ಅಡಿಗ, ಮೈಸೂರು. 03.10.2023



ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

# ‘ಕೋಟಾ’ ಎಂಬ ಯುವಜನತೆಯ ಕನಸಿನ ಹೂದೋಟ ಮಸಣದ ಹೂವಾಗಿ ಪರಿವರ್ತಿತವಾಗುತ್ತಿದೆಯೇಕೆ?

**ಆತ್ಮಹತ್ಯಾ ಪ್ರಕರಣಗಳ ವಿಶ್ಲೇಷಣೆಯಿಂದ ಹೊರ ಬಂದಿರುವ ವಿಚಾರವೆಂದರೆ ಕೋಚಿಂಗ್ ಪ್ರಕ್ರಿಯೆ ತರುವ ಮಾನಸಿಕ ಒತ್ತಡಗಳು, ಪೋಷಕರ–ಸಂಗಾತಿಗಳ–ತರಬೇತಿ ಕೇಂದ್ರಗಳ ನಿರೀಕ್ಷೆಗಳಿಗೆ ಸ್ಪಂದಿಸಲು ಅವರಿಗೆ ಆಗದಿದ್ದಾಗ ಅವರು ಅನುಭವಿಸುವ ಮಾನಸಿಕ ಯಾತನೆ, ತಮಗೆ ಈ ಕೋರ್ಸುಗಳಲ್ಲಿ ಆಸಕ್ತಿ ಇಲ್ಲ, ನಮ್ಮನ್ನು ಮನೆಗೆ ಕರೆದುಕೊಂಡು ಹೋಗಿ ಎಂದು ಪರಿ–ಪರಿಯಾಗಿ ಕೇಳಿಕೊಂಡರೂ ಅದನ್ನು ತಲೆಗೇ ಹಾಕಿಕೊಳ್ಳದ ಪೋಷಕರ ಧೋರಣೆಗಳು ಮತ್ತು ಭವಿಷ್ಯದ ಬಗೆಗಿನ ಅನಿಶ್ಚಿತತೆ ಮತ್ತು ಭಯ–ಇವೆಲ್ಲವೂ ಈ ಮಕ್ಕಳನ್ನು ತಮ್ಮ ಜೀವ ತೆಗೆದುಕೊಳ್ಳುವ ಸ್ಥಿತಿಗೆ ತಳ್ಳುತ್ತಿವೆ ಎಂದು.**

ರಾಜಾಸ್ಥಾನ ರಾಜ್ಯದ ಚಂಬಲ್ ನದಿಯ ದಡದಲ್ಲಿರುವ ಕೋಟಾ ಎಂಬ ನಗರ, ಆ ರಾಜ್ಯದ ಮೂರನೇ ಅತಿ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ನಗರ. ಕೋಟಾದ ಜನಸಂಖ್ಯೆ 12 ಲಕ್ಷ. ಹಾಲಿ ದೇಶದಲ್ಲಿ ಇಂಜಿನಿಯರಿಂಗ್ ಕೋರ್ಸುಗಳಿಗೆ ಪ್ರವೇಶಾರ್ಹತೆಯನ್ನು ನೀಡುವ ಜಾಯಿಂಟ್ ಎಂಟ್ರೆನ್ಸ್ ಪರೀಕ್ಷೆ(ಜೆ.ಇ.ಇ–ಎಇಇ) ಮತ್ತು ಭಾರತ ಹಾಗೂ ಇತರ ಕೆಲ ದೇಶಗಳ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶವನ್ನು ಪಡೆಯಲು ಅರ್ಹತೆಯನ್ನು ನೀಡುವ ನ್ಯಾಷನಲ್ ಎಲಿಜಿಬಿಲಿಟಿ ಕಮ್ ಎಂಟ್ರೆನ್ಸ್ ಟೆಸ್ಟ್ (ನೀಟ್–NEET) ಪರೀಕ್ಷೆಗಳಲ್ಲಿ ಒಳ್ಳೆಯ ಅಂಕಗಳನ್ನು ಪಡೆಯಲು ವಿಶೇಷ ತರಬೇತಿ ನೀಡುವ ಕೋಟಾದ ಕೋಚಿಂಗ್ ಕೇಂದ್ರಗಳಲ್ಲಿ 2.25 ಲಕ್ಷ ವಿದ್ಯಾರ್ಥಿಗಳಿದ್ದಾರೆ . ಪ್ರತಿ ವರ್ಷವೂ 2 ಲಕ್ಷ ಮಂದಿ ಯುವಕ–ಯುವತಿಯರು ಈ ನಗರಕ್ಕೆ ದೇಶದ ನಾನಾ ಭಾಗಗಳಿಂದ ಈ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ತೇರ್ಗಡೆಯಾಗಲು ವಿಶೇಷ ತರಬೇತಿ ಪಡೆಯಲು ಬರುತ್ತಾರೆ ಎಂದು ಹೇಳಲಾಗುತ್ತದೆ. ಈ ನಗರದ ಆರ್ಥಿಕ ವ್ಯವಸ್ಥೆ ನಿಂತಿರುವುದೇ ಈ ವಿದ್ಯಾರ್ಥಿಗಳು ಕೋಚಿಂಗ್ ಕೇಂದ್ರಗಳಲ್ಲಿ ತೊಡಗಿಸುವ ಹಣದ ಮೇಲೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ತಯಾರಿ ಮಾಡುವ ದೇಶದ ಅತಿ ದೊಡ್ಡ ಕೋಚಿಂಗ್ ಉದ್ಯಮ ಪ್ರತಿ ವರ್ಷ 10,000 ಕೋಟಿ ರೂಪಾಯಿಗಳ ಆದಾಯವನ್ನು ತರುತ್ತದೆ ಎಂದು ಹೇಳಲಾಗುತ್ತದೆ

150 ಕ್ಕೂ ಹೆಚ್ಚು ತರಬೇತಿ ಸಂಸ್ಥೆಗಳನ್ನು ಹೊಂದಿರುವ ಈ ನಗರ ಯುವಜನತೆಯ ಕನಸಿನ ಭೂಮಿ ಎಂದರೂ ತಪ್ಪಾಗಲಾರದು. ಏಕೆಂದರೆ ಇಲ್ಲಿ ತರಬೇತಿ ಪಡೆದರೆ ದೇಶದ ಪ್ರತಿಷ್ಠಿತ ತಾಂತ್ರಿಕ ಮತ್ತು ವೈದ್ಯಕೀಯ ಸಂಸ್ಥೆಗಳಲ್ಲಿ ಪ್ರವೇಶ ಖಚಿತ, ಈ ಪದವಿಗಳು ತರುವ ಉದ್ಯೋಗಗಳು ತಮ್ಮ ಮಕ್ಕಳ ಭವಿಷ್ಯದ ಐಷಾರಾಮಿ ಬದುಕಿಗೆ ಸೋಪಾನ ಎಂದು ನಂಬಿರುವ ಪೋಷಕರು ಸಹಸ್ರಾರು ಸಂಖ್ಯೆಯಲ್ಲಿ ತಮ್ಮ ಮಕ್ಕಳೊಡನೆ ಇಲ್ಲಿಗೆ ಧಾವಿಸುತ್ತಾರೆ. ತಮ್ಮ ಮಕ್ಕಳಿಗೆ ಈ ತರಬೇತಿ ಕೇಂದ್ರಗಳಲ್ಲಿ ಪ್ರವೇಶ ದೊರೆತರೆ ಅವರ ಜೀವನ ಸಾರ್ಥಕವಾದಂತೆ ಎಂಬ ಭ್ರಮೆಯಲ್ಲಿ ತೇಲುತ್ತ, ಅವರಿಗೆ ವಸತಿ, ಊಟೋಪಚಾರ ಮುಂತಾದ ವ್ಯವಸ್ಥೆಗಳನ್ನು ಮಾಡಿ ತಮ್ಮ–ತಮ್ಮ ಊರುಗಳಿಗೆ ತೆರಳುತ್ತಾರೆ, ಇಲ್ಲ ಅವರೊಡನೆ ವಾಸ್ತವ್ಯವನ್ನು ಹೂಡುತ್ತಾರೆ. ಆದರೆ ಕಳೆದ ಕೆಲ ದಿನಗಳಿಂದ ಪದೇ–ಪದೆ ಸಂಭವಿಸುತ್ತಿರುವ ಯುವಜನತೆಯ ಆತ್ಮಹತ್ಯೆಗಳು ಈ ಕೋಟಾ ಕೋಚಿಂಗ್ ಕಾರ್ಖಾನೆಯ ಕರಾಳಮುಖ ದರ್ಶನವನ್ನು ಮಾಡಿಸುತ್ತಿವೆ.

ಕಳೆದ 5 ವರ್ಷಗಳ ಹಿಂದೆ ದಾಖಲಾಗಿದ್ದ 07 ಆತ್ಮಹತ್ಯೆಗಳ ಸಂಖ್ಯೆ, ಈ ವರ್ಷ ಇನ್ನೂ ಮುಗಿದೇ ಇಲ್ಲ, ಈಗಾಗಲೇ 25 ಆಗಿದೆ. ಇವರಲ್ಲಿ 12 ಮಂದಿ 18ನೇ ವಯಸ್ಸಿನವರಿಗಿಂತ ಸಣ್ಣವರಾಗಿದ್ದು ಕೋಟಾಗೆ ಬಂದು 6 ತಿಂಗಳಾಗುವುದರೊಳಗೇ ಅವರು ಆತ್ಮಹತ್ಯೆಯ ಮಾರ್ಗವನ್ನು ಹಿಡಿದಿದ್ದರು. ಹಿಂದೂಸ್ತಾನ್ ಟೈಮ್ಸ್ ಪತ್ರಿಕೆ ನಡೆಸಿದ ಒಂದು ಅಧ್ಯಯನದ ಪ್ರಕಾರ ಇವರಲ್ಲಿ ಹೆಚ್ಚಿನವರು ಬಡ ಅಥವಾ ಕೆಳ–ಮಧ್ಯಮ ವರ್ಗಗಳ ಕುಟುಂಬಗಳಿಗೆ ಸೇರಿದವರಾಗಿದ್ದರು ಮತ್ತು ಬಿಹಾರ, ಉತ್ತರ ಪ್ರದೇಶ ರಾಜ್ಯಗಳ ಗ್ರಾಮಗಳು ಅಥವಾ ಸಣ್ಣ ಪಟ್ಟಣಗಳಿಗೆ ಸೇರಿದವರಾಗಿದ್ದರು. ಭವಿಷ್ಯದ ಭವ್ಯ ಬದುಕಿಗೆ ಸೋಪಾನವೆಂದು ಪರಿಗಣಿಸಲ್ಪಟ್ಟು ಲಕ್ಷಾಂತರ ಯುವ ಜನರು ಲಗ್ಗೆ ಹಾಕುತ್ತಿರುವ ಈ ಕೋಚಿಂಗ್ ಕೇಂದ್ರಸ್ಥಾನ ಎತ್ತ ಸಾಗುತ್ತಿದೆ? ತಮ್ಮ ಮಕ್ಕಳ ಭವಿಷ್ಯದ ಬಗ್ಗೆ ನೂರಾರು ಕನಸುಗಳನ್ನು ಕಂಡು ತಮ್ಮ 'ತನು–ಮನ–ಧನ'ಗಳನ್ನೆಲ್ಲ ಒತ್ತೆ ಇಟ್ಟು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಅವರನ್ನು ಇಲ್ಲಿ ಕರೆದುಕೊಂಡು ಬರುವ ಪೋಷಕರಿಗೆ ಮಕ್ಕಳು ದೇಶದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಪ್ರವೇಶ ಪಡೆಯಲು ಸಾಧ್ಯವಾಗದಿರುವ ಮಾತು ಹಾಗಿರಲಿ, ಅವರಲ್ಲಿ ಕೆಲವರು ಆತ್ಮಹತ್ಯೆಯಂಥ ಅತಿರೇಕದ ನಿರ್ಧಾರವನ್ನು ತೆಗೆದುಕೊಳ್ಳುವ ಹಂತವನ್ನು ಏಕೆ ತಲುಪುತ್ತಾರೆ? ಇಂಥ ಆಘಾತಕಾರಿ ಘಟನೆಗಳಿಗೆ ಹೊಣೆ ಯಾರು? ಈ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕುತ್ತಾ ಹೋದ ಹಾಗೆಲ್ಲ ಪೋಷಕರ ಅನಿಯಮಿತ ಮಹತ್ವಾಕಾಂಕ್ಷೆ, ಇಂಜಿನಿಯರಿಂಗ್ ಅಥವಾ ವೈದ್ಯಕೀಯ ಪದವಿಗಳನ್ನು ಪ್ರತಿಷ್ಠಿತ ಸಂಸ್ಥೆಗಳಿಂದ ಪಡೆದರೆ ಮಾತ್ರ ಭವಿಷ್ಯದಲ್ಲಿ ತಮ್ಮ ಬದುಕಿಗೆ ಒಂದು ಅರ್ಥ ಬರುವುದು ಎಂಬ ಭ್ರಮೆಯಲ್ಲಿ ಬೆಳೆದು ಬಂದಿರುವ ಯುವಜನತೆ, ತರಬೇತಿ ಕೇಂದ್ರಗಳ ದುಡ್ಡಿನ ದುರಾಸೆ ಮತ್ತು ಈ ಕೇಂದ್ರಗಳನ್ನು ಅವಲಂಬಿಸಿರುವ ಉದ್ಯಮಗಳು ಹಣ ಗಳಿಕೆಗೆ ಇಳಿದಿರುವ ರೀತಿ–ಈ ಚಿತ್ರಗಳೆಲ್ಲ ನಮ್ಮ ಮುಂದೆ ತೆರೆದು ಕೊಳ್ಳುತ್ತಾ ಹೋಗುತ್ತವೆ.

ಒಂದು ಕಾಲದಲ್ಲಿ ಜವಳಿ ಉದ್ಯಮಕ್ಕೆ ಹೆಸರುವಾಸಿಯಾಗಿದ್ದ ಕೋಟಾ 'ಕೋಚಿಂಗ್ ರಾಜಧಾನಿ' ಎಂದು ಖ್ಯಾತಿಯನ್ನು ಪಡೆದಿದ್ದು ಹೇಗೆ? ಇದಕ್ಕೆ ಹೆಚ್ಚು–ಕಡಿಮೆ ನಾಲ್ಕು ದಶಕಗಳ ಇತಿಹಾಸವಿದ್ದು, ಇದರ ಆರಂಭವಾದದ್ದು ಕೋಟಾದ ಜೆ.ಕೆ.ಸಿನ್ ತೆ ಟಿಕ್ಸ್ ಎಂಬ ಸಂಸ್ಥೆಯಲ್ಲಿ ಉದ್ಯೋಗದಲ್ಲಿದ್ದ ಬನ್ಸಲ್ ಎಂಬುವವರು 1981ರಲ್ಲಿ 8ನೇ ತರಗತಿಯ ಮಕ್ಕಳಿಗೆ ಖಾಸಗಿ ತರಬೇತಿ ನೀಡಲು 'ಬನ್ಸಲ್ ಕ್ಲಾಸೆಸ್' ಎಂಬ ಸಂಸ್ಥೆಯನ್ನು ತೆರೆದಾಗ. ಮುಂಬರುವ ವರ್ಷಗಳಲ್ಲಿ 9 ಮತ್ತು 10 ನೇ ತರಗತಿಗಳ ಮಕ್ಕಳಿಗೂ ಪಾಠ ಹೇಳಿಕೊಡಲಾರಂಭಿಸಿದ ಬನ್ಸಲ್ 1991ರಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಗಳಲ್ಲಿ ಶಿಕ್ಷಣ ಪಡೆಯಬೇಕೆಂಬ ಹಂಬಲವಿರುವ ಕೇವಲ 7 ವಿದ್ಯಾರ್ಥಿಗಳಿಗೆ ಇಂಜಿನಿಯರಿಂಗ್ ಪ್ರವೇಶ ಪರೀಕ್ಷೆಯನ್ನು ಬರೆಯಲು ತರಬೇತಿ ನೀಡಲು ಆರಂಭಿಸಿದರು. ಅವರ ಈ ಪ್ರಯತ್ನ ಹೆಚ್ಚು–ಹೆಚ್ಚು ಸಫಲತೆಯನ್ನು ಕಾಣುತ್ತಾ ಹೋದ ಹಾಗೆಲ್ಲ ಕೇಂದ್ರ ವರ್ಷದಿಂದ ವರ್ಷಕ್ಕೆ ತನ್ನ ರೆಂಬೆಗಳನ್ನು ವಿಸ್ತರಿಸಿಕೊಳ್ಳುತ್ತಾ ಹೋಯಿತು. ಇಂದು ದೇಶದ ಅನೇಕ ರಾಜ್ಯಗಳಲ್ಲಿ 'ಬನ್ಸಲ್ ಕ್ಲಾಸೆಸ್' ಕೇಂದ್ರಗಳನ್ನು ಹೊಂದಿದೆ. ಆದರೆ ಈ ಸಂಸ್ಥೆ ಇಂಜಿನಿಯರಿಂಗ್ ಪ್ರವೇಶ ಪರೀಕ್ಷೆಗಳಿಗೆ ಆಕಾಂಕ್ಷಿಗಳನ್ನು ತಯಾರಿ ಮಾಡುವತ್ತ ಗಮನ ಹರಿಸಿದರೆ, ವೈದ್ಯಕೀಯ ಸಂಸ್ಥೆಗಳಲ್ಲಿ ಪ್ರವೇಶ ಪಡೆಯಲು ವಿದ್ಯಾರ್ಥಿಗಳನ್ನು ತಯಾರಿ ಮಾಡಲೆಂದೇ ಅನೇಕ ಸಂಸ್ಥೆಗಳು ಹುಟ್ಟಿಕೊಂಡಿವೆ.

ಕೋಟಾದ ಕೋಚಿಂಗ್ ಕೇಂದ್ರಗಳಲ್ಲಿ ತರಬೇತಿಯನ್ನು ಪಡೆಯಲು ತಗಲುವ ವೆಚ್ಚವಾದರೂ ಎಷ್ಟು? ಆ ಕೇಂದ್ರದ ಯಶೋಗಾಥೆಯನ್ನು ಗಣನೆಗೆ ತೆಗೆದುಕೊಂಡು ವಾರ್ಷಿಕ ಶುಲ್ಕವನ್ನು ನಿರ್ಧರಿಸಲಾಗುತ್ತದೆ. ಲಭ್ಯವಾಗಿರುವ ಮಾಹಿತಿಯ ಪ್ರಕಾರ ವಾರ್ಷಿಕ ಶುಲ್ಕ 80,000 ರೂಪಾಯಿಗಳಿಂದ ಹಿಡಿದು 1,75,000 ದ ವರೆಗೂ ಇದ್ದು ಕೆಲ ಕೇಂದ್ರಗಳಲ್ಲಿ ಆಯ್ದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ನೀಡಲಾಗುತ್ತದೆ. ಕೇಂದ್ರಗಳ ಶುಲ್ಕವಲ್ಲದೆ ವಸತಿ, ಊಟ ಮತ್ತು ಇತರ ಖರ್ಚುಗಳನ್ನು ಒದಗಿಸಲು ಶ್ರೀಮಂತ ಕುಟುಂಬಗಳಿಗೇನೋ ಸಮಸ್ಯೆಯಿಲ್ಲ, ಆದರೆ ತಮ್ಮ ಮಕ್ಕಳ ಭವಿಷ್ಯವನ್ನು ಭದ್ರ ಮಾಡುವ ಹಂಬಲದಿಂದ ಸಾಲ ಮಾಡಿ, ಮನೆ–ಭೂಮಿಗಳನ್ನು ಒತ್ತೆ ಇಟ್ಟು ಅಥವಾ ಮಾರಾಟ ಮಾಡಿ ಅವರನ್ನು ಕೋಟಾಗೆ ಕಳುಹಿಸಿರುವ ಪೋಷಕರ ಪರಿಸ್ಥಿತಿಗಳು ಹೇಗಿರಬಹುದು ಎಂದು ಯೋಚಿಸ ಹೊರಟಾಗ ಸುಸ್ಥಿರ ಬದುಕನ್ನು ಕಟ್ಟಿಕೊಳ್ಳಬೇಕೆಂಬ ಆಸೆಗಳಿಗೂ ಅದನ್ನು ಸಾಧಿಸುವ ದಾರಿಯಲ್ಲಿರುವ ಅಡೆ–ತಡೆಗಳಿಗೂ ಇರುವ ಅಂತರದ ಆಳ ನಮಗೆ ಅರಿವಾಗುತ್ತದೆ.

ಭವಿಷ್ಯವನ್ನು ರೂಪಿಸಿಕೊಳ್ಳುವ ಕನಸನ್ನು ಹೊತ್ತು ಇಲ್ಲಿ ಬಂದಿರುವ ಯುವ ಜನತೆ ಆತ್ಮಹತ್ಯೆಯ ಬಗ್ಗೆ ಏಕೆ ಯೋಚನೆ ಮಾಡಬೇಕು ಎಂಬ ವಿಚಾರದ ಬಗ್ಗೆ ಗಂಭೀರವಾದ ಚಿಂತನೆ ಈಗ ಆರಂಭವಾಗಿದೆ. ಬಹು ಕಾಲದಿಂದಲೂ ಅನೇಕ ಕುಟುಂಬಗಳಲ್ಲಿ ಇಂಜಿನಿಯರಿಂಗ್ ಅಥವಾ ವೈದ್ಯಕೀಯ ಕೋರ್ಸುಗಳನ್ನು ಹೊರತುಪಡಿಸಿದರೆ ತಮ್ಮ ಮಕ್ಕಳಿಗೆ ಭವಿಷ್ಯವೇ ಇಲ್ಲ ಎನ್ನುವ ಮಿಥ್ಯೆ ಬೇರೂರಿದ್ದು ಅನೇಕ ಪೋಷಕರು ತಮ್ಮ ಮಕ್ಕಳ ಮೇಲೆ ಈ ಕೋರ್ಸುಗಳನ್ನೇ ಓದಬೇಕೆಂಬ ಒತ್ತಡ ತರುತ್ತಾರೆ. ಈ ಕೋಚಿಂಗ್‌ನ ಭ್ರಮೆ ಯಾವ ಮಟ್ಟಿಗೆ ಬೇರೂರಿದೆ ಎಂದರೆ 7ನೇ ತರಗತಿಯಿಂದಲೇ ಕೋಚಿಂಗ್ ಕೇಂದ್ರಗಳಿಗೆ ಮಕ್ಕಳನ್ನು ಸೇರಿಸಲಾಗುತ್ತಿದೆ. ಬೆಳಿಗ್ಗೆ ಶಾಲೆಗೆ ಹೋಗಿ, ಸಂಜೆ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಯಲ್ಲಿ ಅವರು ತೊಡಗುತ್ತಾರೆ. ತಮ್ಮ ಮಕ್ಕಳಿಗೂ ಆಯ್ಕೆಯ ಸ್ವಾತಂತ್ರ್ಯವಿದೆ ಎಂದು ಪೋಷಕರು ಒಪ್ಪಿಕೊಳ್ಳಲು ತಯಾರಿಲ್ಲ. ಆತ್ಮಹತ್ಯಾ ಪ್ರಕರಣಗಳ ವಿಶ್ಲೇಷಣೆಯಿಂದ ಹೊರ ಬಂದಿರುವ ವಿಚಾರವೆಂದರೆ ಕೋಚಿಂಗ್ ಪ್ರಕ್ರಿಯೆ ತರುವ ಮಾನಸಿಕ ಒತ್ತಡಗಳು, ಪೋಷಕರ– ಸಂಗಾತಿಗಳ–ತರಬೇತಿ ಕೇಂದ್ರಗಳ ನಿರೀಕ್ಷೆಗಳಿಗೆ ಸ್ಪಂದಿಸಲು ಅವರಿಗೆ ಆಗದಿದ್ದಾಗ ಅವರು ಅನುಭವಿಸುವ ಮಾನಸಿಕ ಯಾತನೆ, ತಮಗೆ ಈ ಕೋರ್ಸುಗಳಲ್ಲಿ ಆಸಕ್ತಿ ಇಲ್ಲ, ನಮ್ಮನ್ನು ಮನೆಗೆ ಕರೆದುಕೊಂಡು ಹೋಗಿ ಎಂದು ಪರಿ–ಪರಿಯಾಗಿ ಕೇಳಿಕೊಂಡರೂ ಅದನ್ನು ತಲೆಗೇ ಹಾಕಿಕೊಳ್ಳದ ಪೋಷಕರ ಧೋರಣೆಗಳು ಮತ್ತು ಭವಿಷ್ಯದ ಬಗೆಗಿನ ಅನಿಶ್ಚಿತತೆ ಮತ್ತು ಭಯ–ಇವೆಲ್ಲವೂ ಈ ಮಕ್ಕಳನ್ನು ತಮ್ಮ ಜೀವ ತೆಗೆದುಕೊಳ್ಳುವ ಸ್ಥಿತಿಗೆ ತಳ್ಳುತ್ತಿವೆ ಎಂದು.

ಕಾಲ ಕಳೆದಂತೆ ಹೆಚ್ಚುತ್ತಿರುವ ಈ ಆತ್ಮಹತ್ಯೆಗಳನ್ನು ರಾಜಸ್ಥಾನ ಸರ್ಕಾರ ಈಗ ಗಂಭೀರವಾಗಿ ತೆಗೆದುಕೊಂಡಂತಿದ್ದು, ಕೋಚಿಂಗ್ ಕೇಂದ್ರಗಳ ಕಾರ್ಯವೈಖರಿಯನ್ನು ಪರಿಶೀಲಿಸಲು ಒಂದು ಸಮಿತಿಯನ್ನು ರಚಿಸಿದೆ. ಮಕ್ಕಳ ಮೇಲೆ ಒತ್ತಡಗಳನ್ನು ಹೇರಬಾರದು, ಆಂತರಿಕ ಪರೀಕ್ಷೆಗಳನ್ನು ಪದೇ–ಪದೆ ನಡೆಸಿ ಕಡಿಮೆ ಅಂಕಗಳನ್ನು ಪಡೆದವರು ಒತ್ತಡಗಳಿಗೆ ಒಳಗಾಗುವ ಸಂದರ್ಭಗಳನ್ನು ಸೃಷ್ಟಿಸಬಾರದು, ಮನೋಕ್ಲೇಶದಿಂದ ನರಳುತ್ತಿರುವ ಮಕ್ಕಳ ಪೋಷಕರೊಡನೆ ನಿರಂತರ ಸಂಪರ್ಕದಲ್ಲಿದ್ದು ಅವರನ್ನೂ ಆಪ್ತ ಸಮಾಲೋಚನೆಯಲ್ಲಿ ತೊಡಗಿಸಬೇಕು ಮುಂತಾದ ನಿಯಮಗಳನ್ನು ಪಾಲಿಸಲು ಕೇಂದ್ರಗಳಿಗೆ ಸೂಚನೆ ನೀಡಲಾಗುತ್ತಿದೆ.

ಇದೀಗ ಕರ್ನಾಟಕದ ಧಾರವಾಡ ಮತ್ತು ತಮಿಳುನಾಡಿನ ನಾಮಕಲ್ ನಿಧಾನವಾಗಿ ಕೋಟಾದ ಹಾದಿಯಲ್ಲಿ ಸಾಗುತ್ತಿವೆ. ಎಂದರೆ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗಾಗಿ ಈ ಪಟ್ಟಣಗಳಿಗೆ ಬರುವವರ ಸಂಖ್ಯೆ ಏರುತ್ತಿದೆ. ಸಂಬಂಧಿಸಿದ ಆಡಳಿತಾತ್ಮಕ ವ್ಯವಸ್ಥೆಗಳು ಈಗಲೇ ಎಚ್ಚರಿಕೆ ವಹಿಸಿ ಮಕ್ಕಳ ಬದುಕು ಬರಿದಾಗದಂತೆ ನೋಡಿಕೊಳ್ಳಬೇಕಾಗಿದೆ.

## ಗ್ರಾಮೀಣ ಪ್ರದೇಶದಲ್ಲೂ ವೈದ್ಯಕೀಯ ಸೇವೆ ದೊರೆತರೆ ಮಾತ್ರ ಸದೃಢ ಭಾರತ ನಿರ್ಮಾಣ ಸಾಧ್ಯ

### ಎಂ.ಎಸ್.ರಾಮಯ್ಯ ವಿವಿ ಕುಲಪತಿ ಡಾ.ಕುಲದೀಪ್ ಕುಮಾರ್ ರೈನಾ ಅಭಿಮತ



ಮೈಸೂರು, ಅ.4(ಎಸ್‌ಪಿಎನ್)– ಗ್ರಾಮೀಣ ಪ್ರದೇಶದಲ್ಲಿ ಹಾಗೂ ವೈದ್ಯಕೀಯ ಸೇವೆ ದೊರೆಯದ ಸ್ಥಳಗಳಲ್ಲಿ ವೈದ್ಯಕೀಯ ಸೇವೆ ಒದಗಿಸುವುದು ವೈದ್ಯರ ಆದ್ಯ ಕರ್ತವ್ಯ ಎಂದು ಬೆಂಗಳೂರಿನ ರಾಮಯ್ಯ ಅನ್ವಯಿಕ ವಿಜ್ಞಾನ ವಿಶ್ವವಿದ್ಯಾಲಯದ ಕುಲಪತಿ ಡಾ.ಕುಲದೀಪ ಕುಮಾರ್ ರೈನಾ ತಿಳಿಸಿದರು.

ಮೈಸೂರು–ಬೆಂಗಳೂರು ರಸ್ತೆಯಲ್ಲಿರುವ ಜೆಎಸ್‌ಎಸ್ ದಂತ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಪದವಿ ಪ್ರದಾನ ಸಮಾರಂಭದಲ್ಲಿ ಪ್ರಮಾಣ ಪತ್ರ ವಿತರಣೆ ಮಾಡಿ, ಮಾತನಾಡಿದರು. ವೈದ್ಯಕೀಯ ಸೇವೆ ಕೇವಲ ನಗರ ಕೇಂದ್ರೀಕೃತವಾಗಬಾರದು. ಬೆಂಗಳೂರು–ಮೈಸೂರಿಂದ ಗಡಿ ಭಾಗಕ್ಕೂ(100 ಕಿ.ಮೀ ದೂರಕ್ಕೂ) ಉತ್ತಮ ವೈದ್ಯಕೀಯ ಸೇವೆ ದೊರೆಯುವಂತಾಗಬೇಕು. ಗ್ರಾಮೀಣ ಭಾಗದಲ್ಲೂ ವೈದ್ಯಕೀಯ ಸೇವೆ ದೊರೆತರೆ ಮಾತ್ರ ಸದೃಢ ಭಾರತ ನಿರ್ಮಾಣ ಮಾಡಲು ಸಾಧ್ಯ ಎಂದರು. ವೈದ್ಯಕೀಯ ವಿದ್ಯಾರ್ಥಿ ಸೇರಿದಂತೆ ಪ್ರದೇಶಕ್ಕೆ ಇತರೆ ವಿಷಯಗಳ ವಿದ್ಯಾರ್ಥಿಗಳಿಗೆ ಪದವಿ ಎಂಬುದು ಪಾಸ್‌ಪೋರ್ಟ್ ಇದ್ದಂತೆ. ಮುಂದೆ ಸಾಗಬೇಕಾಗಿರುವ ಹಾದಿ ದೊಡ್ಡದಿದೆ. ಪದವಿ ಪೂರೈಸಿದ ಮಾತ್ರಕ್ಕೆ ಅಧ್ಯಯನ ಪೂರ್ಣಗೊಳ್ಳುವುದಿಲ್ಲ. ಜೀವನದ ಉದ್ದಕ್ಕೂ ನಿರಂತರ ಅಧ್ಯಯನದಲ್ಲಿ ತೊಡಗಿದರೆ ಮಾತ್ರ ವೃತ್ತಿ ಜೀವನದಲ್ಲಿ ಯಶಸ್ಸು ದೊರೆಯುತ್ತದೆ ಎಂದರು. ನೀವು ನಿಮ್ಮ ವೃತ್ತಿಯಲ್ಲಿ ಯಶಸ್ಸು ಗಳಿಸಿದ ನಂತರ ನಿಮ್ಮನ್ನು ಎತ್ತರಕ್ಕೆ ಬೆಳೆಸಲು ಶ್ರಮಿಸಿದ ಪೋಷಕರನ್ನು ಮಾತ್ರ ಮರೆಯಬೇಡಿ, ನಿಮ್ಮ ಸಾಧನೆ ಹಿಂದೆ ಪಾಲಕರ ಶ್ರಮ ಅತೀ ದೊಡ್ಡದು ಎಂದು ನೂತನ ಪದವೀಧರರಿಗೆ ಕಿವಿಮಾತು ಹೇಳಿದರು.

ಯಾವುದೇ ವ್ಯಕ್ತಿಗೆ ದಂತ ಸಮಸ್ಯೆ ಕಾಣಿಸಿಕೊಂಡರೆ ಮಾತನಾಡಲು, ಸಂತಸದಿಂದಿರಲು ಸಾಧ್ಯವಿಲ್ಲ. ದಂತ ವೈದ್ಯರು ರೋಗಿಗಳ ದಂತ ಸಮಸ್ಯೆಯನ್ನು ಪರಿಹರಿಸಿ, ಅವರ ನೋವಿಗೆ ತಿಲಾಂಜಲಿ ಹಾಡಬೇಕು. ದಂತ ವೈದ್ಯಕೀಯ ಕ್ಷೇತ್ರ ದೇಶದಲ್ಲಿ ವಿಸ್ತಾರವಾಗಿ ಬೆಳವಣಿಗೆ ಹೊಂದುತ್ತಿದ್ದು, ಸಾಕಷ್ಟು ಅವಕಾಶಗಳು ದೊರೆಯುತ್ತಿವೆ. ಈ ಅವಕಾಶಗಳನ್ನು ಯುವ ದಂತ ವೈದ್ಯರು ಬಳಕೆ ಮಾಡಿಕೊಳ್ಳಬೇಕು ಎಂದರು. ಪ್ರಸ್ತುತ ಸರ್ಕಾರ ನವೋದ್ಯಮಕ್ಕೆ ಹೆಚ್ಚಿನ ಒತ್ತು ನೀಡುತ್ತಿದ್ದು, ಇದರ ಲಾಭವನ್ನು ಯುವ ದಂತ ವೈದ್ಯರು ಪಡೆದುಕೊಂಡು ನೂತನ ಉದ್ಯಮ ಪ್ರಾರಂಭ ಮಾಡಬೇಕು. ನಮ್ಮ ದೇಶದಲ್ಲಿ ಉದ್ಯೋಗ ಪಡೆಯುವವರಿಗಿಂತ ಉದ್ಯೋಗ ನೀಡುವವರ ಸಂಖ್ಯೆ ವೃದ್ಧಿಯಾಗಬೇಕಾಗಿದೆ. ನಿಮ್ಮ ಕ್ಷೇತ್ರದಲ್ಲಿ ಯಶಸ್ಸು ಗಳಿಸಲು ನೀವು ಗಳಿಸಿದ ಜ್ಞಾನವನ್ನು ಸಂಪೂರ್ಣ ಬಳಸಿ ಎಂದು ಕಿವಿಮಾತು ಹೇಳಿದರು.

**ಟಾಪರ್‌ಗಳಿಗೆ ಸನ್ಮಾನ:** ಪ್ರತಿಭಾವಂತ ವಿದ್ಯಾರ್ಥಿಗಳಾದ ಪ್ರತಿಕಾಂತಂ ರಘು ಪವನ್, ಕೆ.ಜೆ. ಟೀನಾ, ಡಿ. ಲಕ್ಷ್ಮೀಶ, ಪ್ರತ್ಯೇಕ ವಿಷಯಗಳಲ್ಲಿ ಹೆಚ್ಚು ಅಂಕಗಳಿಸಿದ ಶ್ರೇಯಸ್, ಅಶೋಕ್ ಕೊಲ್ಲಾಪುರ್, ಎಚ್.ಎಂ. ಪ್ರಗತಿ ಮತ್ತು ವಿ.ಎಸ್.ಶೀತಲ್‌ಗೆ ಪದಕ ನೀಡಿ ಗೌರವಿಸಲಾಯಿತು.

ಈ ವೇಳೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ, ಸಮ ಕುಲಾಧಿಪತಿ ಡಾ.ಬಿ.ಸುರೇಶ್, ಕುಲಪತಿ ಡಾ.ಸುರೀಂದ್ರ ಸಿಂಗ್, ಕುಲಸಚಿವ ಡಾ.ಬಿ. ಮಂಜುನಾಥ್, ಪ್ರಾಂಶುಪಾಲರಾದ ಡಾ. ಎಂ.ಆರ್. ದಾಕ್ಷಾಯಿಣಿ ಇತರರಿದ್ದರು.

## ಅರಮನೆಯ ಶರನ್ನವರಾತ್ರಿ ಉತ್ಸವದ ವೇಳಾಪಟ್ಟಿ ಪ್ರಕಟ



ಮೈಸೂರು,ಅ.4–ದಸರಾ ಮಹೋತ್ಸವದ ಅಂಗವಾಗಿ ಮೈಸೂರು ಅರಮನೆಯಲ್ಲಿ ನಡೆಯಲಿರುವ ಶರನ್ನವರಾತ್ರಿ ಉತ್ಸವದ ಉತ್ಸವದ ವೇಳಾಪಟ್ಟಿಯನ್ನು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರು ಬಿಡುಗಡೆ ಮಾಡಿದ್ದು, ಅ.9ರಿಂದ ನ.8ರವರೆಗೆ ವಿವಿಧ ದಿನಗಳಲ್ಲಿ ಖಾಸಗಿ ದರ್ಬಾರ್ ಸೇರಿದಂತೆ ವಿವಿಧ ಧಾರ್ಮಿಕ ವಿಧಿ–ವಿಧಾನಗಳು ನಡೆಯಲಿವೆ.

ಅ.9ರಂದು ಬೆಳಗ್ಗೆ 7.15ಕ್ಕೆ ನವಗ್ರಹ ಹೋಮ ಮತ್ತು ಇತರೆ ಶಾಂತಿ ಪೂಜೆಗಳು ನಡೆಯಲಿವೆ. ನಂತರ ಬೆಳಗ್ಗೆ 10.05 ರಿಂದ 10.35ರವರೆಗೆ ಅಂಬಾವಿಲಾಸ ದರ್ಬಾರ್ ಹಾಲ್‌ನಲ್ಲಿ ಸಿಂಹಾಸನ ಜೋಡಣೆ ಮತ್ತು ಕನ್ನಡಿ ತೊಟ್ಟಿಯಲ್ಲಿ ಭದ್ರಾಸನ ಕಾರ್ಯಕ್ರಮ ನಡೆಯಲಿದ್ದು, ಬೆಳಗ್ಗೆ 11ಕ್ಕೆ ಪಟ್ಟದ ಆನೆ, ಪಟ್ಟದ ಕುದುರೆ, ಪಟ್ಟದ ಹಸು, ಅಶ್ವ ಮತ್ತು ಗಜನನ್ನು ಗೋಶಾಲೆಗೆ ಕರೆತರಲಾಗುವುದು.

ಅ.15ರಂದು ಬೆಳಗ್ಗೆ 6.05ರಿಂದ 6.25ರವರೆಗೆ ಸಿಂಹಾಸನ ಜೋಡಣೆ, 7.05ರಿಂದ 7.45ರವರೆಗೆ ವಾಣಿ ವಿಲಾಸ ದೇವರ ಮನೆಯಿಂದ ಚಾಮುಂಡಿ ತೊಟ್ಟಿಗೆ ಆಗಮಿಸಿ ಕಂಕಣ ಧಾರಣೆ, 9.45ಕ್ಕೆ ಸಾವರ್ ತೊಟ್ಟಿಗೆ ಪಟ್ಟದ ಆನೆ, ಪಟ್ಟದ ಕುದುರೆ ಮತ್ತ ಪಟ್ಟದ ಹಸು ಆಗಮನ. 10.15ಕ್ಕೆ ಕಳಶ ಪೂಜೆ ಮತ್ತು ಸಿಂಹಾಸನ ಪೂಜೆ ಆರಂಭ. ಮಧ್ಯಾಹ್ನ 1.45ರಿಂದ 2.05ವರೆಗೆ ತಾಯಿ ಚಾಮುಂಡೇಶ್ವರಿ ಅಮ್ಮನವರನ್ನು ಚಾಮುಂಡಿ ತೊಟ್ಟಿಯಿಂದ ಕನ್ನಡಿ ತೊಟ್ಟಿಗೆ ಕರೆತರಲಾಗುವುದು.

ಅ.20ರಂದು ಬೆಳಗ್ಗೆ 10.05ರಿಂದ 10.25ರವರೆಗೆ ಸರಸ್ವತಿ ಪೂಜೆ, ಅ.21ರಂದು ಸಂಜೆ ದರ್ಬಾರ್ ನಂತರ ಕನ್ನಡಿ ತೊಟ್ಟಿಯಲ್ಲಿ ಕಾಳರಾತ್ರಿ, ಅ.22ರಂದು ದುರ್ಗಾಷ್ಟಮಿ, ಅ.23ರ ಮಹಾನವಮಿಯಂದು ಬೆಳಗ್ಗೆ 5.30ಕ್ಕೆ ಚಂಡಿ ಹೋಮ ಆರಂಭ, ಆನೆ ಬಾಗಿಲಿಗೆ ಪಟ್ಟದ ಆನೆ, ಪಟ್ಟದ ಕುದುರೆ, ಪಟ್ಟದ ಹಸು ಆಗಮನ, 6.05ರಿಂದ 6.15ರವರೆಗೆ ಆನೆ ಬಾಗಿಲು ಮೂಲಕ ಶ್ರೀಕೋಡಿ ಸೋಮೇಶ್ವರ ಸ್ವಾಮಿ ದೇವಸ್ಥಾನಕ್ಕೆ ಖಾಸ ಆಯುಧಗಳನ್ನು ಕೊಂಡೊಯ್ಯುವುದು, 7.15ಕ್ಕೆ ಶ್ರೀಕೋಡಿ ಸೋಮೇಶ್ವರಸ್ವಾಮಿ ದೇವಸ್ಥಾನದಿಂದ ಆನೆ ಬಾಗಿಲು ಮೂಲಕ ಕಲ್ಯಾಣ ಮಂಟಪಕ್ಕೆ ಖಾಸ ಆಯುಧಗಳನ್ನು ವಾಪಸ್ಸು ತರುವುದು, 9.30ಕ್ಕೆ ಚಂಡಿ ಹೋಮದ ಪೂರ್ಣಾವುತಿ, 11.45ಕ್ಕೆ ಆನೆ ಬಾಗಿಲಿಗೆ ಪಟ್ಟದ ಆನೆ, ಪಟ್ಟದ ಕುದುರೆ, ಪಟ್ಟದ ಹಸು ಆಗಮನ, 12.20 ರಿಂದ 12.45ರವರೆಗೆ ಕಲ್ಯಾಣ ಮಂಟಪದಲ್ಲಿ ಆಯುಧ ಪೂಜೆ ಆರಂಭ. ಸಂಜೆ ದರ್ಬಾರ್ ಹಾಗೂ ಸಿಂಹ ವಿಸರ್ಜನೆ, ಕಂಕಣ ವಿಸರ್ಜನೆಯು ಖಾಸ ದೇವರ ಮನೆ ಹಾಗೂ ವಾಣಿವಿಲಾಸ ದೇವರ ಮನೆಯಲ್ಲಿ ನಡೆಯುವುದು. ಅ.24ರ ವಿಜಯದಶಮಿಯಂದು ಬೆಳಗ್ಗೆ 9.45ಕ್ಕೆ ಆನೆ ಬಾಗಿಲಿಗೆ ಪಟ್ಟದ ಆನೆ, ಪಟ್ಟದ ಕುದುರೆ, ಪಟ್ಟದ ಹಸು ಆಗಮನ, ಕಲ್ಯಾಣ ಮಂಟಪದಲ್ಲಿ ಖಾಸ ಆಯುಧಗಳಿಗೆ ಉತ್ತರ ಪೂಜೆ. 11.10ರಿಂದ 11.45ರವರೆಗೆ ವಿಜಯ ಯಾತ್ರೆ ಮತ್ತು ಶಮಿ ಪೂಜೆ, ನ.8ರಂದು ಬೆಳಗ್ಗೆ 10.15ರಿಂದ 10.45ರವರೆಗೆ ತೋರಣವನ್ನು ತೋರಣ ಕೊಠಡಿಗೆ ಸೇರಿಸುವುದು.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com*

ಮೈಸೂರು ಮಿತ್ರ

ಗುರುವಾರ 5 ಅಕ್ಟೋಬರ್ 2023

# ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

### ಮನೆ ಮಾರಾಟಕ್ಕಿದೆ
ಮೈಸೂರಿನ ಕನಕದಾಸನಗರ, ದಟ್ಟಗಳ್ಳಿ 3ನೇ ಹಂತದಲ್ಲಿ 30x40 ಅಳತೆಯ ಐದು ಬೆಡ್ ರೂಂಗಳಿರುವ ಮನೆ ಮಾರಾಟಕ್ಕಿದೆ (ಬೈಯರ್ಸ್‌ಗಳು ಮಾತ್ರ ಸಂಪರ್ಕಿಸಿ).
Mob: 9448068783

### ಕೆಲಸಕ್ಕೆ ಬೇಕಾಗಿದ್ದಾರೆ
ಹುಡುಗಿಯರು ವಯೋಮಿತಿ 18–30 ವಿದ್ಯಾರ್ಹತೆ : ಪಿಯುಸಿ ಯಾವುದೇ ಡಿಗ್ರಿ ಮತ್ತು ನರ್ಸಿಂಗ್ ಸೆರಾಕೇರ್ ಮೈಸೂರು ಹೆಲ್ತ್ ಸೆಂಟರ್, ನ್ಯೂ ಕಾಂತರಾಜು ಅರಸು ರಸ್ತೆ, ಕೆ.ಜಿ.ಕೊಪ್ಪಲು, ಮೈಸೂರು
8296366894
7996011692

### MUDA APPROVED SITES FOR SALE
30x40, 30x50 & 40x60 price 18 Lacks Onwards Near KIT Eng. College Next to Lalbahadur Shastri Nagar Off. T-Narasipura Road
7795609173

### ಡೆಲಿವರಿ ಹುಡುಗರು ಬೇಕಾಗಿದ್ದಾರೆ
ಕುಮಾರ್ ಡಯಾಗ್ನೋಸ್ಟಿಕ್ & ಸರ್ಜಿಕಲ್ ಗೋಕುಲಂ 2ನೇ ಹಂತ, ಮೈಸೂರು
ಸಂಪರ್ಕಿಸಿ: ಮಾಲತೇಶ್
9480379989

### ಸೈಟು ಮಾರಾಟಕ್ಕಿದೆ
ವರುಣ ಹಾಗೂ ದಾತ್ರಿ ನಗರದಲ್ಲಿ DTCP Approved 30x40 ಸೈಟು ಮಾರಾಟಕ್ಕಿದೆ P.Sq.2500, Just 100 Mtrs MIT Engineering College, 3.5 Km Columbia Hospital
8073300783

### ಮನೆ ಮಾರಾಟಕ್ಕಿದೆ
45x65 ಹಾಗೂ 35x50 ಸರಗೂರು ಟೌನ್, ಹೆಚ್.ಬಿ.ರಸ್ತೆ, ಫಾರೆಸ್ಟ್ ಆಫೀಸ್ ಪಕ್ಕ, ಅಂಬೇಡ್ಕರ್ ಭವನ ಎದುರು, ಸರಗೂರು ತಾಲ್ಲೂಕು, ಮೈಸೂರು ಜಿಲ್ಲೆ
9980888843
9945101303

### SITE FOR SALE
30x40 East face site sale at Railway Layout, Bogadi (Near Hari Vidyalaya).
Call: 98802-73834

### ಸೈಟು ಮಾರಾಟಕ್ಕಿದೆ
30x40 S/F, 55 ಲಕ್ಷ ರೂಪನಗರ, ಮೈಸೂರು, ಬೋಗಾದಿ
30x40 W/F, 68 ಲಕ್ಷ ದಟ್ಟಗಳ್ಳಿ ಹತ್ತಿರ, ಕ್ರೈಸ್ಟ್ ಪಬ್ಲಿಕ್ ಸ್ಕೂಲ್
20x30 W/F, 35 ಲಕ್ಷ ಬೆಮೆಲ್ ಲೇಔಟ್, ಮೈಸೂರು
9986856999

### DOCUMENT LOST
Original allotment copy Site No.530, 1st Main Road, Maruthi Temple Road, Saraswathipuram, T.K.Layout, Mysore-09, Finder will be suitably rewarded. Please Contact:
9980058545
7406394808

### ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

### HOUSE FOR RENT
(Vegetarians Only) 2BHK House First Floor available for Rent at Krishnamurthipuram, Mysore Near Krishnamurthipuram Post Office. Contact:
9448939404
9353561720

### DTCP SITES FOR SALE
DTCP Sites Rs. 699 per sq.ft., Near Jayapura, H.D. Kote Road, Mysore.
9590491194,9606783264

### ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಸೇಲ್ಸ್ ಮ್ಯಾನ್ ಮತ್ತು ಸೇಲ್ಸ್ ಗರ್ಲ್ಸ್ ಆಕರ್ಷಕ ಸಂಬಳ + ESI, PF, Incentive
ಗಾಂಧಿ ಸರ್ಕಲ್, ಮೈಸೂರು
9980620678

### Shraddhaa Packaging
Weavers Colony, Hebbal Indl. Area, Mysore.
MOB: 9886412655
WANTED WORKERS Printing works Ladies and Gents PUC Pass or Fail.

### 100% NEEM WOOD PLYWOOD & DOORS
@ FACTORY DEPOT RATES
NEEM BOND PLATINUM ® 10yrs WARRANTY
ISO 9001:2015 Certified Depot
CALL 99012 91267 98454 26862

### 100% TEAK WOOD FACTORY FINISH DOORS
@ DEPOT RATES

10 YEARS WARRANTY
www.ssbuildmart.com
9901291267
9845426862

### ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160

### HOUSES & OFFICE SPACE FOR RENT
@ SARASWATHIPURAM, KUVEMPUNAGAR & SURROUNDINGS.
S.S. Property Services (Opp. Kuvempu School), S.S. Puram
93421-25252

### ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9902914891

### SITE FOR SALE
80x60 Ring Road
50x80 - 50' feet Road.
SADANA LAYOUT
Mob: 8431923454

### Walk-in interview
Looking for Site Engineer, Architecture, Business Development Executive and Tele Caller for a reputed construction company. Attractive salary + incentive.
Date: 7-10-2023.
Time: 10.30 am to 5 pm. Contact:
+919945424797, 9880506021

### ತಮಿಳುನಾಡು ಪ್ರವಾಸ 07 ದಿನಗಳು
ದಿನಾಂಕ: 26ನೇ ಅಕ್ಟೋಬರ್ 2023
ಇಶಾ ಫೌಂಡೇಷನ್ (112 ಅಡಿ ಶಿವನ ಪ್ರತಿಮೆ), ಕನ್ಯಾಕುಮಾರಿ, ನವಗ್ರಹ ದರ್ಶನ (ಒಂದು ದಿನದಲ್ಲಿ), ಪಿಚ್ಚಾವರಂ ಮಾಂಗ್ರೂವ್ ಅರಣ್ಯ, ಅಣ್ಣಾಮಲೈ, ರಾಮೇಶ್ವರ, ಧನುಷ್ಕೋಟಿ, ಮಧುರೈ, ತಂಜಾವೂರು ಬೃಹತ್ ಶಿವ, ಕಂಚಿ, ವೆಲ್ಲೋರ್ ಗೋಲ್ಡನ್ ಟೆಂಪಲ್. ಒಬ್ಬರಿಗೆ ರೂ. 14,500.
7022271023, 9611341351

### ಗೋವಾ ಪ್ರವಾಸ
ಹೊರಡುವ ದಿನಾಂಕ: 16 ಅಕ್ಟೋಬರ್ 2023 (3 ದಿನಗಳು). ವೀಕ್ಷಿಸುವ ಸ್ಥಳಗಳು: ಬಾಗ ಬೀಚ್, ದೂಧ್‌ಸಾಗರ್ ಜಲಪಾತ, ಕಲಂಗುಟ್ ಬೀಚ್, ಬಾಸಲಿಕ ಚರ್ಚ್, ಅಗೊಡ ಕೋಟೆ, ಮಂಗೇಶಿ ದೇವಸ್ಥಾನ ಮತ್ತು ನಾಗೇಶಿ ದೇವಸ್ಥಾನ. ಊಟ, ವಸತಿ ಸೇರಿರುತ್ತದೆ.
ಎಲ್ಲಾ ಸೇರಿ ಒಬ್ಬರಿಗೆ ರೂ. 7,500.
Mob: 70222 71023

### WANTED
ಸೋಫಾ ಫರ್ನಿಷಿಂಗ್ ಅಂಗಡಿಯಲ್ಲಿ ಮಹಿಳೆಯರು ಮತ್ತು ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ.
Address: Akbar Road, Near Ashoka Road.
Mob: 9916459786

### MICROWAVE OVEN SERVICES
Indian / Imported
CALL FOR Microwave Oven Repair.
9900237315, 9845963421, 0821-4266495

### AJAX
(Concrete Mixer) Hitachi 200 (Excavator)
Available for rent.
Mob: 9071918450

### Any Kidney Issue ?
Contact: 9566504571
Vijayanagar 1st Stage
ಯಾವುದೇ ತರಹದ ಕಿಡ್ನಿ ಸಮಸ್ಯೆಗಳಿದ್ದರೆ
ವಿಜಯನಗರ 1ನೇ ಹಂತ.

### Beautiful & Professional Interior & Exterior
House Painting (ಬಿಲ್ಡಿಂಗ್ ಪೇಂಟಿಂಗ್)
* Make your home more beautiful.
* Increase the life of your home.
9901690483, 7204062225

### WANTED
30x40 North or East Sunciti Homes yelawala Temple Mount Immediate Registration
8310201386
8861220989

### CHANGE OF NAME
I PAMMY MARAN, R/a # 248, 2nd Cross, Bassar Road, Nazarbad, Mysuru, Have Changed my name as Shobha In front notary chikka Boranna on 03.10.2023 at Mysuru
Sd/-Shobha

### SITE FOR SALE
30x40 S/F, MUDA Approved
Sri Sai Chamundeshwari Layout, Raghavendraswamy Temple Road, Chikkalli, T.Narasipura Road, Mysore.
Mob: 9480084847

### AFFIDAVIT
I, Mohammed Aleem, father of Mohammed Raiyan previously called Riyan Pasha (Aadhar No. 9897 2516 4324), residing at #D.S. Palya and Post, Hebbur, Tumkur-572 120. I declare that on behalf of myself issue wholly renounce / relinquish and abandon the use of my son former name of Riyan Pasha and in place thereof I do hereby assume from this date the my son name Mohammed Raiyan on my own free will in front of Notary C.R.Seetharam on 3-10-2023.
Sd/- Mohammed Aleem

### ಸಾಲ / Loans
House / Site purchase loan, Construction Loan, Mortgage Loan (MUDA, Corporation & Revenue)
77605-98705

### ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

### SITE FOR SALE
40x60 site sale at Suvarna Nagar (Gaddige Road).
Call: 98802-73834

### ನಿವೃತ್ತ ನೌಕರರಿಗೆ ಉದ್ಯೋಗಾವಕಾಶ ಸೆಮಿನಾರ್
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. Benifits : Fixed Salary + PF + ESI + ಇತರೆ ಭತ್ಯೆಗಳು ಲಭ್ಯವಿರುತ್ತದೆ. ಬೇಕಾಗುವ ದಾಖಲಾತಿಗಳು 1) ಫೋಟೊ 2) ಪಾನ್‌ಕಾರ್ಡ್ 3) ಆಧಾರ್ ಕಾರ್ಡ್, 4) ಬ್ಯಾಂಕ್ ಪಾಸ್‌ಬುಕ್. ಸ್ಥಳ: ಮೌರ್ಯ ರೆಸಿಡೆನ್ಸಿ, ಶ್ರೀ ಹರ್ಷ ರಸ್ತೆ, ಮೈಸೂರು. ದಿ.7–10–23, ಸಮಯ: ಬೆಳಿಗ್ಗೆ 11.00. Followed by Lunch
9448376423,9886883858

### ವಾಸ್ತು ಪ್ರಕಾರ
ಹೊಸದಾಗಿ ಮನೆ ಮತ್ತು ಆಲ್ಟ್ರೇಷನ್ ಕೆಲಸ/ಕನ್‌ಸ್ಟ್ರಕ್ಷನ್ ಮಾಡಿಕೊಡಲಾಗುತ್ತದೆ. ಒಂದು ಚದರಕ್ಕೆ 1,80,000/– *ಷರತ್ತು ಅನ್ವಯ
ಸ್ವಾಮಿ ಎಂ., ಸಿವಿಲ್ ಕಂಟ್ರಾಕ್ಟರ್
9945442361
9380885787

### ಸಂಪು ಟ್ಯಾಂಕ್ ಕ್ಲೀನಿಂಗ್
ಸಂಪರ್ಕಿಸಿ:
7975101020

### ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಓಟಿ 15,200/- to 86,000/-
9740733021, 9535028750

### ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

### ನೇಮಕಾತಿ
ಖಾಲಿ ಹುದ್ದೆಗಳು
ಡಾಟಾ ಎಂಟ್ರಿ ಆಪರೇಟರ್ಸ್
ಸಂದರ್ಶನ ಸಮಯ: ಬೆಳಿಗ್ಗೆ 10.00 ರಿಂದ ಸಂಜೆ 3.00 ಹುದ್ದೆ–25
ವಿಠಲ್ ರೆಕಾರ್ಡ್ಸ್ ಪ್ರೈ.ಲಿ.
#42, ಜೆಕೆ ಇಂಡಸ್ಟ್ರಿಯಲ್ ಪಾರ್ಕ್, ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ಮೇಟಗಳ್ಳಿ, ಮೈಸೂರು
hr@centuryvitalrecords.com
Mob: 8867064586

### ಮನೆ & ಅಂಗಡಿ ಭೋಗ್ಯಕ್ಕಿದೆ
2 ಬೆಡ್ ರೂಂ ಇರುವ ಮನೆ ಮೊದಲನೆ ಮಹಡಿ (1ನೇ ಫ್ಲೋರ್ ಹಾಗೂ 1400 Sqft ಅಂಗಡಿ (ಕೆಳಗಡೆ) ಭೋಗ್ಯಕ್ಕಿದೆ. ರಾಮಸ್ವಾಮಿ ಸರ್ಕಲ್ ಹತ್ತಿರ, ಮೈಸೂರು
9900948440

### ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ಆಟೋಮೊಬೈಲ್ ಕಂಪನಿಗೆ ಬೇಕಾಗಿದ್ದಾರೆ.
1) ಮಾರ್ಕೆಟಿಂಗ್ ಎಕ್ಸಿಕ್ಯೂಟೀವ್
2) ಐ.ಟಿ.ಐ ಫಿಟ್ಟರ್
ಕೂಡಲೇ ಸಂಪರ್ಕಿಸಿ:
9743647484
starmysoreresume@gmail.com

### ಕಾರ್ನರ್ ಸೈಟ್ ಸೇಲ್
30x40, ಈಸ್ಟ್ ಫೇಸಿಂಗ್, ಜ್ಞಾನಭಾರತಿ ಲೇಔಟ್, ದಡದಹಳ್ಳಿ, ಮುಡಾ ಖಾತಾ 32 ಲಕ್ಷ
ಡೈರೆಕ್ಟ್ ಓನರ್
9342123373

### WANTED
Sites of any dimension in "SUN CITI HOMES" Phase-1, near Nagawala, Yelwala Hobli.
(Brokers Excuse). Contact:
Mob: 9632338969

### ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ.
97318-91409

### ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕಿನಲ್ಲಿ ಕೆಲಸ ಮಾಡಲು ಪುರುಷರು / ಮಹಿಳೆಯರು ಬೇಕಾಗಿದ್ದಾರೆ.
ಸಂಬಳ: ರೂ. 12,000.
93800-41120

### ಬೇಕಾಗಿದೆ
ಮೈಸೂರಿನಲ್ಲಿ Car Spa or Car Service Station ಬಾಡಿಗೆಗೆ ಬೇಕಾಗಿರುತ್ತದೆ.
ಕೊಡುವವರು ಇದ್ದರೆ ಸಂಪರ್ಕಿಸಿ:
9742361663, 8123179664

### ಶಾದಿಗುರೂಜಿ.ಕಾಂ
ವೀರಶೈವ ಲಿಂಗಾಯತ, ಒಕ್ಕಲಿಗ, ಕುರುಬ, ಬ್ರಾಹ್ಮಣ, ಮರಾಠ, ಆದಿಕರ್ನಾಟಕ, ಬಲಿಜ, ವಿಶ್ವಕರ್ಮದ ಇನ್ನೂ ಎಲ್ಲಾ ಜಾತಿಯ ಸುಂದರ ಶ್ರೀಮಂತ ವಿದ್ಯಾವಂತ ವಧುವರರಿಗೆ ನೇರಸಂಪರ್ಕಿಸಿ:
6361740552

### ಹೋಂ ನರ್ಸಿಂಗ್ ಕೆಲಸ
ಮೈಸೂರಿನ ಹೆಸರಾಂತ ಹೆಲ್ತ್ ಕೇರ್ ಸಂಸ್ಥೆಗೆ ಹೋಂ ನರ್ಸಿಂಗ್ ಕೆಲಸಕ್ಕೆ ಯುವಕ, ಯುವತಿಯರು, ಮಹಿಳೆಯರು, ವಿಧವೆಯರು ತಕ್ಷಣವೇ ಸಂಪರ್ಕಿಸಿ ಊಟ ವಸತಿಯೊಂದಿಗೆ ಸಂಬಳ 12000–18000 (ಸರ್ಕಾರಿ ನೋಂದಾಯಿತಾ ಸಂಸ್ಥೆ)
9035113222

### ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ–ಯುವತಿಯರು ಬೇಕಾಗಿದ್ದಾರೆ.
ಸಂಬಳ: 13,000-21,000+ ESI+PF
ವಿದ್ಯಾರ್ಹತೆ: 10th, PUC, ITI, Diploma & Any Degree
9035734821

### ಉದ್ಯೋಗವಕಾಶ
ಮೈಸೂರಿನ ಹೆಸರಾಂತ ವೈದ್ಯಕೀಯ ಸೇವಾ ಸಂಸ್ಥೆಯಲ್ಲಿ ವಯೋವೃದ್ಧರು, ರೋಗಿಗಳು ಮತ್ತು ವಿಶೇಷ ಚೇತನರನ್ನು ನೋಡಿಕೊಳ್ಳಲು ಶ್ರದ್ಧೆ, ನಿಷ್ಠೆ ಹಾಗೂ ಸೇವಾ ಮನೋಭಾವದಿಂದ ಕೆಲಸ ನಿರ್ವಹಿಸಲು ಯುವಕ, ಯುವತಿಯರು ಮತ್ತು ಮಹಿಳೆಯರು ತಕ್ಷಣ ಬೇಕಾಗಿದ್ದಾರೆ. ವಿದ್ಯಾರ್ಹತೆ: 7/10/PUC, Degree ANM, GNM, Pass / Fail ತಿಂಗಳ ಸಂಬಳ: 10,000/- ರಿಂದ 18000/-
9606714441,08214242351
7349278501

### ಸುವರ್ಣಾವಕಾಶ
ಸರ್ಕಾರದಿಂದ ನಿವೃತ್ತಿ ಹೊಂದಿರುವ ಹಾಗೂ ಸ್ವಯಂ ನಿವೃತ್ತಿ ಪಡೆದುಕೊಂಡಿರುವ ಸರ್ಕಾರಿ ಅಧಿಕಾರಿಗಳಿಗೆ ಮತ್ತು ಗೃಹಿಣಿಯರಿಗೆ ಹಾಗೂ ಆಸಕ್ತಿ ಇರುವ ಅಭ್ಯರ್ಥಿಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಫಿಕ್ಸಡ್ ತಿಂಗಳ ಸಂಬಳ, ESI/PF
9110676257
9739239004

### ತಕ್ಷಣ ಬೇಕಾಗಿದ್ದಾರೆ
ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ವಯೋಮಿತಿ : 18 ರಿಂದ 35 ರೊಳಗೆ ವಿದ್ಯಾರ್ಹತೆ: SSLC ಮೇಲ್ಪಟ್ಟು ಉಚಿತ: ತಿಂಡಿ, ಊಟ ವೇತನ 16000(ESI+PF) & Bonus
ಸ್ಥಳ: ಆಲನಹಳ್ಳಿ Bus Stop, Mysore
9538886304
9035269781

### ನಿವೇಶನ ಮಾರಾಟಕ್ಕಿದೆ
50x30
ಹಳೆ ಕೆಸೆರೆ, ಮೈಸೂರು
7892728003

### P.G.BUILDING
Fully Furnished For Sale / Rent Near Law college Kuvempunagar, Mysore
9845703836
9980029223

### ಬೇಕಾಗಿದ್ದಾರೆ
ಕಾರು ಚಾಲಕರು ಬೇಕಾಗಿದ್ದಾರೆ ಟೂರ್ಸ್ ಅಂಡ್ ಟ್ರಾವೆಲ್ಸ್‌ಗೆ ಸಂಬಂಧಿಸಿದ ನುರಿತ ಕಾರು ಚಾಲಕರು ಬೇಕಾಗಿದ್ದಾರೆ.
9845551044

### ಸೈಟುಗಳು ಮತ್ತು ಜಮೀನಿಗೆ
ಫೆನ್ಸಿಂಗ್ ಕಲ್ಲುಗಳು ಹಾಗೂ ಕಾಂಪೌಂಡ್ ಹಾಕಿ ಕೊಡಲಾಗುತ್ತದೆ ಮತ್ತು ಗ್ರಾವೆಲ್ ಮಣ್ಣು ದೊರೆಯುತ್ತದೆ
7259407518
8310220458

### ಸೈಟು ಬೇಕಾಗಿದೆ
1) ಲಾಲ್ ಬಹದ್ದೂರ್ ಶಾಸ್ತ್ರಿ ನಗರ
2) ಶಾಂತವೇರಿ ಗೋಪಾಲಗೌಡ ನಗರ
ಮಾಲೀಕರು ಸಂಪರ್ಕಿಸಿ
9844444767

### ಹೊಸ ಡ್ಯೂಪ್ಲೆಕ್ಸ್ ಮನೆ ಮಾರಾಟಕ್ಕಿದೆ
30x40 - N/F, E/ ಡೋರ್ 3BHK ಅಟ್ಯಾಚ್ ಬಾತ್, ಆಲ್‌ಟೀಕ್, ಇಟಾಲಿಯನ್ ಕಿಚನ್, ಕಾರ್ ಪಾರ್ಕ್ ಸೌಲಭ್ಯವಿದೆ. ಕಂದಾಯನಗರ 1ನೇ ಹಂತ, ಶ್ರೀರಾಂಪುರ, ಮೈಸೂರು
9901899355

### ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್ 10th/PUC (ಹೂಟಗಳ್ಳಿ, ಹೆಬ್ಬಾಳ್, ಮೇಟಗಳ್ಳಿ)
ESI & PF ಸೌಲಭ್ಯವಿರುತ್ತದೆ.
9739166772
9880419847

### ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 45 ವರ್ಷ ವಿದ್ಯಾರ್ಹತೆ: 7 ರಿಂದ ಪಿಯುಸಿ & ಐಟಿಐ ರಿಯಾಯಿತಿ ದರದಲ್ಲಿ ಊಟ ಮತ್ತು ವಸತಿ ಸೌಲಭ್ಯವಿರುತ್ತದೆ.
7760913433

### ಮನೆ ಮಾರಾಟಕ್ಕಿದೆ
ನಜರ್‌ಬಾದ್ ಪಾಪಾರಂ ಬೀದಿ 3ನೇ ಕ್ರಸ್, ಮೈಸೂರು ಮೈಲಾರಿ ಹೋಟೆಲ್ ಹಿಂಭಾಗ ಮನೆ ಸಂ.961, 16x25 ಮನೆ ಮಾರಾಟಕ್ಕಿದೆ ಕಾರ್ನರ್
6363015322
9845246549

### ಶ್ರೀ ಶಾಕಂಭರಿ ಧಾರ್ಮಿಕ ಶ್ರದ್ಧ ಕೇಂದ್ರ
ಪೂರ್ವ ಹಾಗೂ ಅಪರ ವೈದಿಕ ಕಾರ್ಯಗಳಿಗೆ ಸಂಪರ್ಕಿಸಿ:
ಸಂಧ್ಯಾ ಸುರಕ್ಷ ಟ್ರಸ್ಟ್ ಹೊಸ ಅವಿಷ್ಕಾರದಲ್ಲ ವೃದ್ಧಾಶ್ರಮ ಆಶ್ರಮದಲ್ಲ ಕೆಲವೇ ಮಂದಿಗೆ ಅವಕಾಶವಿದ್ದು ಸೇರಬಯಸುವವರು ಕೂಡಲೇ ಸಂಪರ್ಕಿಸಿ
(ಮಹಾಲಯ ಅಮಾವಾಸ್ಯೆಯ ತರ್ಪಣ ಶ್ರಾದ್ಧಾಕಾರ್ಯಗಳಿಗೆ ಈ ಕೂಡಲೇ ಸಂಪರ್ಕಿಸಿ)
8088799540
8861998817

### ಅಡುಗೆ ಮಾಡುವವರು ಬೇಕಾಗಿದ್ದಾರೆ
ಉತ್ತರ ಕರ್ನಾಟಕ ಶೈಲಿಯ ಹಾಗೂ ದಕ್ಷಿಣ ಭಾರತದ ಆಹಾರಗಳನ್ನು ತಯಾರಿಸುವವರು ಬೇಕಾಗಿದ್ದಾರೆ. ಅಡುಗೆ ಕೆಲಸಗಾರರು– 2
ಹೋಟೆಲ್ ಗಣಪ, ಮೈಸೂರು
9108960005
8971372909

### ಬೇಕಾಗಿದ್ದಾರೆ
ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ.
Salary + OT 18800/- to 78000/-
9964435077
9964435081

### ನಿವೃತ್ತರಿಗೆ ವಿಶೇಷ ಉದ್ಯೋಗ ಅವಕಾಶ ಮೀಟಿಂಗ್
ಕೇಂದ್ರ, ರಾಜ್ಯ, ಬ್ಯಾಂಕಿಂಗ್, ಖಾಸಗಿ, ಪಬ್ಲಿಕ್ ಸೆಕ್ಟರ್ ಕ್ಷೇತ್ರದ ನಿವೃತ್ತರು House Wives ಹಾಗೂ Business ವಲಯದವರಿಗೆ ಪ್ರಖ್ಯಾತ ಬ್ಯಾಂಕ್ ಸಮೂಹದಿಂದ ಸುವರ್ಣ ಅವಕಾಶ 07–10–2023 ಶನಿವಾರ, 11.00 ಗಂಟೆಗೆ, ಸ್ಥಳ: ತತ್ವರಸ Park View ರೆಸ್ಟೋರೆಂಟ್ ನಿವೇದಿತ ಪಾರ್ಕ್ ಪಕ್ಕ, ಪೆಟ್ರೋಲ್ ಬಂಕ್ ಎದುರು)
8105659439,7411259365
9448762821,73749052084

### ಹಕ್ಕು ಪತ್ರ ಕಳೆದಿದೆ
ದಿನಾಂಕ: 02–10–2023 ರಂದು ಬೆಂಗಳೂರು ಜಿಲ್ಲೆಯ ಬೆಂಗಳೂರು ದಕ್ಷಿಣ ತಾಲ್ಲೂಕಿನ ರಾಮೋಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ.90ರಲ್ಲಿನ ಮುನೇಗೌಡ ಎಂಬುವರಿಗೆ ಸೇರಿದ ನಿವೇಶನ ಸಂಖ್ಯೆ 76ರ ಹಕ್ಕುಪತ್ರ ಕಳೆದು ಹೋಗಿರುತ್ತದೆ. ಸಿಕ್ಕಿದವರು ಈ ದೂರವಾಣಿಯನ್ನು ಸಂಪರ್ಕಿಸಿ:
9019116082

### ಬೇಕಾಗಿದ್ದಾರೆ
ಮೈಸೂರಿನ ವರಧಾನಿ ಹೋಂ ನರ್ಸಿಂಗ್ ಸಂಸ್ಥೆಗೆ ವಯಸಾದವರನ್ನು ನೋಡಿಕೊಳ್ಳಲು ಅನುಭವ ಇರುವ ಇಲ್ಲದ ಇರುವ ಹುಡುಗ ಹುಡುಗಿಯರು 8th, 9th, 10th ಪಾಸ್ ಫೇಲಾದ ಯುವಕ, ಯುವತಿಯರು ಬೇಕಾಗಿದ್ದಾರೆ. ಉಳಿದುಕೊಳ್ಳಲು ವ್ಯವಸ್ಥೆ ನರ್ಸಿಂಗ್ ಯುನಿಫಾರ್ಮ್ ಸಂಬಳ ಸಿಗುತ್ತದೆ. ರೂ. 12000/– ರಿಂದ 17000/ – ನರ್ಸಿಂಗ್ ಟ್ರೈನಿಂಗ್ ಇರುತ್ತದೆ.
8123630683

### ಬೇಕಾಗಿದ್ದಾರೆ
ಗಾರ್ಮೆಂಟ್ ಬಟ್ಟೆ ಅಂಗಡಿಯಲ್ಲಿ ಅನುಭವವುಳ್ಳ ಹುಡುಗರು/ ಹುಡುಗಿಯರು ಬೇಕಾಗಿದ್ದಾರೆ.
ಸ್ಥಳ: ಬಜಾರುರಸ್ತೆ, ಕೆ.ಆರ್.ನಗರ
8310214674
9902767669

### ನಿವೃತ್ತ ನೌಕರರಿಗೆ ಉದ್ಯೋಗಾವಕಾಶದ ಸೆಮಿನಾರ್
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. Benifits : Fixed Salary + PF + ESI + ಇತರೆ ಭತ್ಯೆಗಳು ಲಭ್ಯವಿರುತ್ತದೆ. ಬೇಕಾಗುವ ದಾಖಲಾತಿಗಳು 1) ಫೋಟೊ 2) ಪಾನ್‌ಕಾರ್ಡ್ 3) ಆಧಾರ್ ಕಾರ್ಡ್, 4) ಬ್ಯಾಂಕ್ ಪಾಸ್‌ಬುಕ್. ಸ್ಥಳ, ದಿನಾಂಕ ಮತ್ತು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.
7795039992

### ಸೈಟ್ ಮಾರಾಟಕ್ಕಿದೆ
30x50 ಪೂರ್ವ ದಿಕ್ಕು ಪ್ರಗತಿನಗರ, ವಿಜಯನಗರ ಹತ್ತಿರ, 15 ಗುಂಟೆ ಜಮೀನು, ಸೀಗಳ್ಳಿ, ಇಲವಾಲ ಹತ್ತಿರ, ಮೈಸೂರು
9945373122
9448079651

### ಜಮೀನು ಮಾರಾಟಕ್ಕಿದೆ
ಪಿರಿಯಾಪಟ್ಟಣ ಟೌನ್‌ನಿಂದ ಸಿದ್ದಾಪುರ ಮಡಿಕೇರಿ ಮಾರ್ಗವಾಗಿ ಟೌನ್‌ನಿಂದ 2 ಕಿ.ಮೀ, ಅಂತರದಲ್ಲಿ PWD ಮುಖ್ಯರಸ್ತೆಗೆ ಹೊಂದಿಕೊಂಡಂತೆ 2 ಎಕರೆ ಕಮರ್ಷಿಯಲ್ ಸ್ವತ್ತು (Multipurpose) ತಕ್ಷಣದಲ್ಲಿ ಮಾರಾಟಕ್ಕಿದೆ
9611881603

### LIFE PARTNER ಆಗಲು ವಿಚ್ಛೇದಿತೆಗೆ ವರ ಬೇಕಾಗಿದ್ದಾರೆ.
Beutiful ಲಿಂಗಾಯತ Age: 38/5.3 hight, MSc, PHD, Asst Professor, Salary: 80000/- ಇರುವಂತಹ ವಿದ್ಯಾವಂತೆ/ ಸಿರಿವಂತೆ, ವಿಚ್ಛೇದಿತೆ, ವಧುವಿಗೆ 2ನೇ ಸಂಬಂಧಕ್ಕೆ ವಿಧುರ/ ವಿಚ್ಛೇದಿತ/ ನೌಕರಸ್ಥ/ವಿದ್ಯಾವಂತ ವರ ಬೇಕಾಗಿದ್ದಾರೆ. ಯಾವುದೇ ಜಾತಿಯ ಅಭ್ಯಂತರವಿಲ್ಲ/ಮಕ್ಕಳಿದ್ದರೂ ಪರವಾಗಿಲ್ಲ (ಸರಳ ವಿವಾಹಕ್ಕೆ ಆದ್ಯತೆ)
ಮೈಸೂರು: 9480385742

### For Sale
1)30@40 16 lakhs new RT nagr near
2)30@40 Preethi layout srirampura
3)20&30 g+2 Dattagalli
4)14/ 100 near RAMAVILAS road
5) 40@60 old house Jayanagar
6) 40@60 ksfc layout Satagalli
Prakruthi Properties
9538690359
9035990359

### ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

### ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

# ಕಾವೇರಿಗಾಗಿ ಮುಂದುವರೆದ ಹೋರಾಟ

## ಗುತ್ತಿಗೆದಾರರ ಸಂಘದ ಕೆಂಪಣ್ಣ, ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಪ್ರತಿಭಟನೆಯಲ್ಲಿ ಭಾಗಿ



ಮಂಡ್ಯ, ಅ.4– ಕಾವೇರಿ ಕೊಳ್ಳದ ಜಲಾಶಯಗಳಿಂದ ನೀರು ಹರಿಸುತ್ತಿರುವ ಸರ್ಕಾರದ ವಿರುದ್ಧ ರೈತ ಹಿತರಕ್ಷಣಾ ಸಮಿತಿ ನೇತೃತ್ವದಲ್ಲಿ ಹೋರಾಟ ಮುಂದುವರೆದಿದ್ದು, ಬುಧವಾರ ಪ್ರತಿಭಟನೆಗೆ ಮಾಜಿ ಸಚಿವ ಡಿ.ಸಿ.ತಮ್ಮಣ್ಣ, ಗುತ್ತಿಗೆದಾರರ ಸಂಘದ ರಾಜ್ಯಾಧ್ಯಕ್ಷ ಕೆಂಪಣ್ಣ ಹಾಗೂ ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ಗುತ್ತಿಗೆದಾರರು ಸಾಥ್ ನೀಡಿದರು.

ನಗರದ ಲೋಕೋಪಯೋಗಿ ಕಚೇರಿ ಆವರಣದಿಂದ ಮೆರವಣಿಗೆ ಹೊರಟು ಜಯಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ಮಾನವ ಸರಪಳಿ ರಚಿಸಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಮತ್ತು ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರದ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಸರ್‌ಎಂವಿ ಪುತ್ಥಳಿ ಮುಂಭಾಗ ನಡೆಯುತ್ತಿರುವ ಹೋರಾಟದ ಸ್ಥಳಕ್ಕೆ ಬಂದು ಪ್ರತಿಭಟನೆಗೆ ಬೆಂಬಲ ಸೂಚಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ, ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ನಡೆಸುತ್ತಿರುವ ನಿರಂತರ ಧರಣಿ ಸ್ಥಳಕ್ಕೆ ತೆರಳಿ ಕಾವೇರಿ ಹೋರಾಟ ಬೆಂಬಲ ಸೂಚಿಸಿದ ಪ್ರತಿಭಟನಾನಿರತ ಗುತ್ತಿಗೆದಾರರು ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ಕರ್ನಾಟಕಕ್ಕೆ ನಿರಂತರ ಅನ್ಯಾಯವಾಗುತ್ತಿದ್ದು, ತಮಿಳುನಾಡಿಗೆ ನೀರು ಬಿಡುವ ಮೂಲಕ ರಾಜ್ಯ ಸರ್ಕಾರ ರೈತರಿಗೆ ದ್ರೋಹ ಮಾಡಿದೆ ಎಂದು ಹೇಳಿದರು.

ರಾಜ್ಯ ಸರ್ಕಾರ ತಕ್ಷಣ ನೆರೆ ರಾಜ್ಯಕ್ಕೆ ಹರಿಸುತ್ತಿರುವ ನೀರನ್ನು ನಿಲ್ಲಿಸಬೇಕು, ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ವಾಸ್ತವ ಪರಿಸ್ಥಿತಿ ಮನವರಿಕೆ ಮಾಡಿಕೊಡಬೇಕು. ಸಂಕಷ್ಟದ ಸಮಯದಲ್ಲಿ ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿ ಪರಿಹಾರ ರೂಪಿಸಬೇಕು ಎಂದು ಒತ್ತಾಯಿಸಿದರು.

ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಪ್ರತಿಭಟನೆಯಲ್ಲಿ ಭಾಗಿಯಾಗಿ ಮಾತನಾಡಿ, ಸ್ವಾತಂತ್ರ್ಯ ಪೂರ್ವಕ್ಕೆ ಮುನ್ನ ಕೆಆರ್‌ಎಸ್ ಅಣೆಕಟ್ಟೆಗಾಗಿ ಒಪ್ಪಂದವಾಗಿದ್ದರಿಂದ ತಮಿಳುನಾಡು ನಮ್ಮಲ್ಲಿ ಕೆರೆ, ಕಟ್ಟೆಗಳ ಹೂಳೆತ್ತಲು ಸಹ ಬಿಡುತ್ತಿರಲಿಲ್ಲ. ನಾವು ಹೂಳು ತೆಗೆದರೆ ನೀರಿನ ಸಂಗ್ರಹ ಹೆಚ್ಚಾಗುತ್ತದೆ ಎಂದು ಅವಕಾಶ ಕೊಡುತ್ತಿರಲಿಲ್ಲ. 200 ವರ್ಷದಿಂದ ತಮಿಳುನಾಡಿನ ನೀರಿನ ದಾಹ ನೀಗಿಲ್ಲ. ತಮಿಳುನಾಡಿನಲ್ಲಿ ಮತ್ತೊಂದು ನದಿಗೆ ಅಣೆಕಟ್ಟೆ ಕಟ್ಟುತ್ತಿದ್ದಾರೆ. ಆದರೆ ನಮ್ಮಲ್ಲಿ ಪೋಲಾಗುತ್ತಿರುವ ನೀರನ್ನು ಉಳಿಸಿಕೊಳ್ಳಲು ಅಣೆಕಟ್ಟೆ ನಿರ್ಮಿಸಲು ತಮಿಳುನಾಡು ಅವಕಾಶ ಕೊಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಅಂತರಾಜ್ಯ ನದಿ ನೀರಿನ ವಿವಾದಗಳು ಹಲವು ರಾಜ್ಯಗಳಲ್ಲಿದ್ದು, ಎರಡು ರಾಜ್ಯಗಳ ನದಿ ನೀರಿನ ಸಮಸ್ಯೆಯನ್ನು ನೀಗಿಸಲು ಕೇಂದ್ರ ಸರ್ಕಾರ ಅಥವಾ ಸುಪ್ರೀಂಕೋರ್ಟ್ ಶಾಶ್ವತ ಪರಿಹಾರವನ್ನು ಒದಗಿಸಿಕೊಡಲು ಮುಂದಾಗಬೇಕು. ಎರಡು ರಾಜ್ಯಗಳು ಸೇರಿಯೇ ಬಗೆಹರಿಸಿಕೊಳ್ಳಿ ಎಂದು ಕೆಲವು ಸಂದರ್ಭಗಳಲ್ಲಿ ಕೇಂದ್ರ ಸರ್ಕಾರ ಹೇಳಿದೆ. ಆದರೆ ಎರಡು ರಾಜ್ಯಗಳು ಕುಳಿತು ಮಾತುಕತೆ ಮಾಡಿ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಾಗುತ್ತಿಲ್ಲ ಎಂದರು.

ಇದೇ ವೇಳೆ ಕರ್ನಾಟಕದಲ್ಲಿ ಹಳೆ ಮೈಸೂರು ಪ್ರಾಂತ್ಯ ಹಾಗೂ ಕಾವೇರಿಯ ಕಣ್ಣೀರಿನ ಕಥೆ ಮತ್ತು ವ್ಯಥೆ ಕುರಿತು ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಬರೆದಿರುವ ಲೇಖನವನ್ನು ಬಿಡುಗಡೆ ಮಾಡಲಾಯಿತು. ಇದಲ್ಲದೇ ಕೋಲಾರದಿಂದ ಬಂದಿದ್ದ ಪ್ರಸನ್ನ ಹಾಗೂ ಕುಮಾರ್ ಎಂಬ ಕಲಾವಿದರುಗಳು ಕಾವೇರಿ ಸಮಸ್ಯೆಯ ಬಗ್ಗೆ ಯಮ, ಚಿತ್ರಗುಪ್ತನ ವೇಷಭೂಷಣ ತೊಟ್ಟು ಕಿರು ನಾಟಕ ಪ್ರದರ್ಶಿಸಿದರು.

ಪ್ರತಿಭಟನೆಯಲ್ಲಿ ರಾಜ್ಯ ಕಾರ್ಯಾಧ್ಯಕ್ಷ ಮಂಜುನಾಥ್, ಜಿಲ್ಲಾಧ್ಯಕ್ಷ ಯತಿರಾಜ್, ಮುಖಂಡರಾದ ನಾಗರಾಜು, ಕೃಷ್ಣೇಗೌಡ, ಆರ್.ನಾಗೇಶ್, ಮಾರುತಿ, ಸುನಿಲ್ ಬಾಬು, ತ್ಯಾಗರಾಜ್, ರವೀಂದ್ರ, ಕೆ.ಟಿ ಹನುಮಂತು, ಹಿತರಕ್ಷಣಾ ಸಮಿತಿಯ ಸುನಂದಾ ಜಯರಾಂ, ಕೆ.ಬೋರಯ್ಯ, ಕನ್ನಡಸೇನೆ ಮಂಜು, ದಸಂಸ ಕೃಷ್ಣ, ಇಂಡುವಾಳು ಚಂದ್ರಶೇಖರ್ ಸೇರಿದಂತೆ ಹಲವು ಮಂದಿ ಭಾಗವಹಿಸಿದ್ದರು.

### ಇಂದು ಕೆಆರ್‌ಎಸ್‌ಗೆ ಮುತ್ತಿಗೆ

ಕನ್ನಡ ಒಕ್ಕೂಟದ ವತಿಯಿಂದ ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಹಲವು ಮಂದಿ ಹೋರಾಟಗಾರರು ನಾಳೆ (ಗುರುವಾರ) ಕೆಆರ್‌ಎಸ್ ಅಣೆಕಟ್ಟೆಗೆ ಮುತ್ತಿಗೆ ಹಾಕಲಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ವಾಟಾಳ್ ನಾಗರಾಜ್, ಬೆಂಗಳೂರು ನಗರದಿಂದ ಭಾರಿ ರ‍್ಯಾಲಿ ಹೊರಟು ಬೆಂಗಳೂರು, ಬಿಡದಿ, ರಾಮನಗರ, ಚನ್ನಪಟ್ಟಣ, ಮದ್ದೂರು, ಮಂಡ್ಯ, ಶ್ರೀರಂಗಪಟ್ಟಣ ಮಾರ್ಗವಾಗಿ ಕೆಆರ್‌ಎಸ್‌ಗೆ ತೆರಳಿ ಮುತ್ತಿಗೆ ಹಾಕಿ ಹೋರಾಟ ನಡೆಸಲಿದ್ದೇವೆ ಎಂದು ತಿಳಿಸಿದ್ದಾರೆ. ಹೋರಾಟದಲ್ಲಿ ಕನ್ನಡ ಒಕ್ಕೂಟದ ಸಾ.ರಾ.ಗೋವಿಂದು, ಪ್ರವೀಣ್ ಶೆಟ್ಟಿ, ಶಿವರಾಮೇಗೌಡ, ಕೆ.ಆರ್.ಕುಮಾರ್ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರುಗಳು ಭಾಗವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.

# ಕಾವೇರಿ ತೀರ್ಪು ತಿರಸ್ಕಾರಕ್ಕೆ ಆಗ್ರಹಿಸಿ ಕಪ್ಪು ಬಾವುಟ ಪ್ರದರ್ಶಿಸಿ ಮೆರವಣಿಗೆ




ಮಂಡ್ಯ: ಕಾವೇರಿ ನದಿ ನೀರು ಹಂಚಿಕೆ ಜಲ ವಿವಾದದಲ್ಲಿ ಕಾವೇರಿ ನ್ಯಾಯಾಧೀಕರಣ, ಸುಪ್ರೀಂ ಕೋರ್ಟ್ ಹಾಗೂ ಕಾವೇರಿ ನಿರ್ವಹಣಾ ಪ್ರಾಧಿಕಾರ ತೀರ್ಪುಗಳನ್ನು ಕೇಂದ್ರ–ರಾಜ್ಯ ಸರ್ಕಾರ ತಿರಸ್ಕರಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಮಂಡ್ಯದಲ್ಲಿ ಕಪ್ಪು ಬಾವುಟ ಪ್ರದರ್ಶಿಸಿ ಮೆರವಣಿಗೆ ನಡೆಸಿದರು.

ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಿಂದ ಮೆರವಣಿಗೆ ಹೊರಟು ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಮುಖ್ಯಮಂತ್ರಿ ಹಾಗೂ ಪ್ರಧಾನಮಂತ್ರಿಗೆ ಮನವಿ ಪತ್ರ ರವಾನಿಸಿದರು.

ಕಾವೇರಿ ನದಿ ನೀರು ವಿಚಾರದಲ್ಲಿ 1924 ರಲ್ಲಿ ಆದ ಒಪ್ಪಂದದ ಕರಾರು 1974ಕ್ಕೆ ಮುಗಿದಿದ್ದರೂ ಕೇಂದ್ರ ರಾಜ್ಯ ಸರ್ಕಾರ ಮತ್ತು ನ್ಯಾಯಾಲಯಗಳು ಒಪ್ಪಂದಕ್ಕೆ ಶರಣಾಗಿರುವುದು ಯಾವ ನ್ಯಾಯ ಎಂದು ಪ್ರಶ್ನಿಸಿದ ಪ್ರತಿಭಟನಾಕಾರರು ಸಂವಿಧಾನ ಬಾಹಿರ ಅವೈಜ್ಞಾನಿಕ ತೀರ್ಪುಗಳಿಂದ ಕರ್ನಾಟಕಕ್ಕೆ ಆಗುತ್ತಿರುವ ನಿರಂತರ ಅನ್ಯಾಯ ಖಂಡನೀಯ ಎಂದರು.

ಕಾವೇರಿ ನೀರು ನಿರ್ವಹಣಾ ಸಮಿತಿಯನ್ನು ಅಮಾನ್ಯ ಮಾಡಬೇಕು, ಸಂವಿಧಾನದ ಅನುಚ್ಛೇದ 262 ರಂತೆ ಅಂತರ ರಾಜ್ಯ ಜಲವಿವಾದ ಇತ್ಯರ್ಥಕ್ಕೆ ಕಾವೇರಿ ಸಂಕಷ್ಟ ಸೂತ್ರ ರೂಪಿಸಬೇಕು, ಅಂತರ ರಾಜ್ಯ ಜಲ ವಿವಾದ ಪರಿಹಾರ ಕಾಯ್ದೆಗೆ ನಿಯಮ ರೂಪಿಸಬೇಕು, ಭಾರತದ ಸಮಗ್ರ ನದಿ ನೀರು ನಿರ್ವಹಣೆಗೆ ರಾಷ್ಟ್ರೀಯ ವೈಜ್ಞಾನಿಕ ಜಲನೀತಿ ರೂಪಿಸಬೇಕು ಎಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

ಸಂವಿಧಾನದಲ್ಲಿನ ರಾಜ್ಯ ಪಟ್ಟಿಯಲ್ಲಿರುವ ನೀರಾವರಿ ವಿಷಯದಂತೆ ರಾಜ್ಯ ಸರ್ಕಾರ ಸುಗ್ರೀವಾಜ್ಞೆ ಜಾರಿಗೊಳಿಸಬೇಕು ಅದೇ ರೀತಿ ವಿಶೇಷ ಅಧಿವೇಶನ ಕರೆದು ಕಾವೇರಿ ನೀರು ಸಂರಕ್ಷಣಾ ನಿರ್ಣಯ ಕೈಗೊಳ್ಳುವ ಮೂಲಕ ಸಾಂವಿಧಾನಿಕ ಬಿಕ್ಕಟ್ಟು ಸೃಷ್ಟಿಸಬೇಕು, ಕಾವೇರಿ ಸಂಕಷ್ಟ ಸೂತ್ರ ಮತ್ತು ರಾಷ್ಟ್ರೀಯ ವೈಜ್ಞಾನಿಕ ಜಲನೀತಿ ರೂಪಿಸಲು ಒತ್ತಾಯಿಸುವ ಮೂಲಕ ಕರ್ನಾಟಕದ ಜನತೆಗೆ ಆಗುತ್ತಿರುವ ಅನ್ಯಾಯ ತಡೆಯಲು ಮುಂದಾಗಬೇಕೆಂದರು. ಸಮಿತಿಯ ರಾಜ್ಯಾಧ್ಯಕ್ಷ ವೆಂಕಟಗಿರಿಯಯ್ಯ, ಮುಖಂಡರಾದ ಕೆ.ಎಂ.ಶ್ರೀನಿವಾಸ್, ಬಾಲರಾಜ್, ಆನಂದ್ ಭಾಗವಹಿಸಿದ್ದರು.

### ಇಂದು ಹೃದಯ ವೈಶಾಲ್ಯ ಯೋಜನೆಗೆ ಚಾಲನೆ

ಮಂಡ್ಯ, ಅ.4– ಜಿಲ್ಲಾಡಳಿತವು ಮಂಗಳೂರಿನ Cardiology at Doorstep Foundation (CAD) ಸಂಸ್ಥೆ ಅವರ ಸಹಯೋಗದೊಂದಿಗೆ ಮಂಡ್ಯ ಜಿಲ್ಲೆಯಲ್ಲಿ ಹೃದಯ ವೈಶಾಲ್ಯ ಯೋಜನೆಯ ಉದ್ಘಾಟನಾ ಸಮಾರಂಭವನ್ನು ಅ.5 ರಂದು ಬೆಳಗ್ಗೆ 9.30 ಗಂಟೆಗೆ ಮಂಡ್ಯ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಹಮ್ಮಿಕೊಂಡಿದೆ.

ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ ಎಂದು ಜಿಲ್ಲಾಧಿಕಾರಿ ಡಾ. ಕುಮಾರ ಅವರು ತಿಳಿಸಿದ್ದಾರೆ.

# ಪೌರಕಾರ್ಮಿಕರ ಬೇಡಿಕೆಗಳ ಬಗ್ಗೆ ಸರ್ಕಾರದ ಜೊತೆ ಚರ್ಚಿಸಿ ಈಡೇರಿಸುವೆ



ಪಾಂಡವಪುರ, ಅ.4– ಜೀವದ ಹಂಗು ತೊರೆದು ಸ್ವಚ್ಛತೆಯೇ ತನ್ನ ಕಾಯಕ ಎಂದು ಪಟ್ಟಣವನ್ನು ಸುಂದರವನ್ನಾಗಿ ಇಡುವ ಪೌರಕಾರ್ಮಿಕರ ಪಾತ್ರ ಬಹಳ ದೊಡ್ಡದು ಎಂದು ಪ್ರಶಂಸೆ ವ್ಯಕ್ತಪಡಿಸಿದ ಶಾಸಕ ದರ್ಶನ ಪುಟ್ಟಣ್ಣಯ್ಯ, ಸರ್ಕಾರದ ಜೊತೆ ಮಾತನಾಡಿ ಪೌರಕಾರ್ಮಿಕರ ಬೇಡಿಕೆ ಈಡೇರಿಸಲು ಪ್ರಯತ್ನಿಸುವೆ ಎಂದರು.

ಪಟ್ಟಣದ ಪುರಸಭೆ ಅವರಣದಲ್ಲಿ ಪೌರಕಾರ್ಮಿಕರ ದಿನಾಚರಣೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತ ಪ್ರಮುಖವಾಗಿ ದೇಶ ಕಾಯುವ ಯೋಧ, ದೇಶಕ್ಕೆ ಅನ್ನ ನೀಡುವ ರೈತ, ದೇಶದಲ್ಲಿ ಪರಿಸರ ಸ್ವಚ್ಛತೆ ಕಾಪಾಡುವ ಪೌರಕಾರ್ಮಿಕರು ಈ ಮೂರು ವರ್ಗ ಬಹಳ ಶ್ರೇಷ್ಠತೆ ಪಡೆದುಕೊಂಡಿದೆ. ಇಂತಹ ಸಂದರ್ಭದಲ್ಲಿ ಪೌರಕಾರ್ಮಿಕರ ಬದುಕಿನ ಬಗ್ಗೆ ನಾವು ಚಿಂತನೆ ಮಾಡಬೇಕಾಗಿದೆ ಎಂದರು.

ಸೆ.23 ರಂದು ಪೌರಕಾರ್ಮಿಕರ ದಿನಾಚರಣೆ ಮಾಡಬೇಕಾಗಿತ್ತು. ಆದರೆ ಕಾವೇರಿ ಹೋರಾಟದಿಂದ ದಿನಾಚರಣೆ ಮಾಡಲು ಆಗಲಿಲ್ಲ. ಅದಕ್ಕೆ ಕ್ಷಮೆ ಇರಲಿ ಎಂದು ಪೌರಕಾರ್ಮಿಕರಲ್ಲಿ ಮನವಿ ಮಾಡಿಕೊಂಡರು. ಪೌರಕಾರ್ಮಿಕರು ಹಲವು ಸಮಸ್ಯೆಗಳ ಬಗ್ಗೆ ಹೇಳಿದ್ದಾರೆ. ಅವರಿಗೆ ಮನೆ, ಮಕ್ಕಳ ವಿದ್ಯಾಭ್ಯಾಸ ಹಾಗೂ ಮೂಲ ಸೌಲಭ್ಯಗಳನ್ನು ಒದಗಿಸಲು ಸರ್ಕಾರದ ಜೊತೆ ಚರ್ಚಿಸಿ ನ್ಯಾಯ ದೊರಕಿಸುತ್ತೇನೆ ಎಂದು ಭರವಸೆ ನೀಡಿದರು.

ಸಮಾಜದಲ್ಲಿ ನಿಮ್ಮನ್ನು ಬೇರೆ ದೃಷ್ಟಿಯಲ್ಲಿ ನೋಡುತ್ತಾರೆ. ಇಂತಹ ವ್ಯವಸ್ಥೆ ದೂರಮಾಡಿ ಸಮಾನತೆ ಬದುಕು ಕಾಣುವಂತೆ ನಿರ್ಮಾಣ ಮಾಡಲು ಪ್ರತಿಯೊಬ್ಬರು ಪಣತೊಡಬೇಕೆಂದು ಕಿವಿ ಮಾತು ಹೇಳಿದರು ಇದೇ ಸಂದರ್ಭದಲ್ಲಿ ಪೌರ ಕಾರ್ಮಿಕರಿಗೆ ಸನ್ಮಾನಿಸಿ, ಗೌರವಿಸಿದರು.

ಪುರಸಭೆ ಸದಸ್ಯರಾದ ಪಾರ್ಥ, ಚಂದ್ರು, ಅಶೋಕ ಮಾತನಾಡಿ, ಪೌರಕಾರ್ಮಿಕರ ಸೇವೆ ಅಪಾರವಾಗಿದೆ. ಇವರಿಗೆ ಸರಿಯಾದ ಮೂಲ ಸೌಲಭ್ಯ ಕಲ್ಪಿಸಿ ಸಮಾಜದಲ್ಲಿ ಗುರುತಿಸುವಂತೆ ಸರ್ಕಾರ ಮಾಡಬೇಕಾಗಿದೆ ಎಂದರು. ಹಾಗೆ ಪ್ರಧಾನಿ ನರೇಂದ್ರ ಮೋದಿ ಅವರು ವಿಶೇಷ ಕಾಳಜಿ ವಹಿಸಿ ಪೌರಕಾರ್ಮಿಕರಿಗೆ ಗೌರವಿಸಿ, ಸಮಾಜದಲ್ಲಿ ಇವರನ್ನು ಪ್ರೀತಿ ವಿಶ್ವಾಸದಿಂದ ಕಾಣಬೇಕೆಂದು ಮಾರ್ಗದರ್ಶನ ನೀಡಿದ್ದಾರೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಮುಖ್ಯಾಧಿಕಾರಿ ವೀಣಾ, ಪುರಸಭೆ ಮಾಜಿ ಅಧ್ಯಕ್ಷೆ ಅರ್ಚನಚಂದ್ರು, ಮಾಜಿ ಉಪಾಧ್ಯಕ್ಷೆ ಶ್ವೇತಉಮೇಶ, ಸದಸ್ಯರಾದ ಸರಸ್ವತಿ ಜಯರಾಮ್, ಸುನೀತಾ, ಖಮರುನ್ನೀಸಾ, ಗೀತಾ, ಜಯಲಕ್ಷ್ಮಮ್ಮ, ಬಂಕ್‌ಶ್ರೀನಿವಾಸ್, ಅಶೋಕ್, ಉಮಶಂಕರ, ಇಂಜಿನಿಯರ್, ಚೌಡಪ್ಪ ಹಾಗೂ ಸಿಬ್ಬಂದಿವರ್ಗ ಉಪಸ್ಥಿತರಿದ್ದರು.

### ರಾಜಶೇಖರ್ ನಿಧನ

ಕೆ.ಆರ್.ಪೇಟೆ, ಅ.4– ತಾಲೂಕಿನ ಸಂತೇಬಾಚಹಳ್ಳಿ ಹೋಬಳಿಯ ಅಘಲಯ ಗ್ರಾಮದ ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಶ್ರೀಧರ್ ಹಾಗೂ ಜಿಲ್ಲಾ ಪಂಚಾಯತ್‌ನ ಮಂಜುನಾಥ್ ಅವರ ಸೋದರ ಮಾವರಾದ ಎ.ಎಂ. ರಾಜಶೇಖರ್ (ರಾಜ್ಯ ಮಟ್ಟದ ವಾಲಿಬಾಲ್ ಆಟಗಾರ) ಮಂಗಳವಾರ ನಿಧನರಾಗಿದ್ದಾರೆ. ಅವರಿಗೆ 75 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ ವಸಂತಮ್ಮ, ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಅಘಲಯ ಗ್ರಾಮದಲ್ಲಿ 1 ಗಂಟೆಗೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



# ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜಿನಿಂದ ಸಾತಿಗ್ರಾಮದ ಸರ್ಕಾರಿ ಶಾಲೆ ದತ್ತು



ಮೈಸೂರು, ಅ. 4–ಮೈಸೂರು ಡಯೋಸೀಸನ್ ಎಜುಕೇಷನಲ್ ಸೊಸೈಟಿಯ ಅಂಗಸಂಸ್ಥೆಯಾದ ಜಯಲಕ್ಷ್ಮಿಪುರಂನ ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜು ರಾಷ್ಟ್ರೀಯ ಸೇವಾ ಯೋಜನಾ ಘಟಕವು ಸಾತಿಗ್ರಾಮದ ಸರ್ಕಾರಿ ಉನ್ನತ ದರ್ಜೆಯ ಪ್ರಾಥಮಿಕ ಶಾಲೆಯ ದತ್ತು ಸ್ವೀಕಾರ ಕಾರ್ಯಕ್ರಮವನ್ನು ಸಾತಿಗ್ರಾಮದ ಶಾಲಾ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಎಂಡಿಇಎಸ್ ಕಾರ್ಯದರ್ಶಿ ರೆ.ಫಾ. ವಿಜಯ್‌ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ದತ್ತು ಸ್ವೀಕಾರದ ನಾಮಫಲಕವನ್ನು ಅನಾವರಣಗೊಳಿಸಿ, ಮೂವತ್ತು ಪ್ಲಾಸ್ಟಿಕ್ ಛೇರುಗಳು, ಒಂದು ನೀರಿನ ಶುದ್ಧೀಕರಣ ಘಟಕ, ಒಂದು ಪ್ರಿಂಟರ್, ಆರು ಗೋಡೆ ಗಡಿಯಾರಗಳು, ಮಕ್ಕಳು ಕುಳಿತುಕೊಳ್ಳುವ ನಲವತ್ತು ಟೇಬಲ್‌ಗಳು, ಒಂದು ಗ್ರೀನ್ ಬೋರ್ಡ್ ಮತ್ತು ಒಂದು ಟೇಬಲನ್ನು ಶಾಲೆಗೆ ಕೊಡುಗೆಯಾಗಿ ಸಂಸ್ಥೆಯ ಕಡೆಯಿಂದ ಹಸ್ತಾಂತರಿಸಿದರು.

ಕಾರ್ಯಕ್ರಮದಲ್ಲಿ ಸಾತಿಗ್ರಾಮ ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು, ಗ್ರಾಮದ ಮುಖಂಡರು, ಗ್ರಾಮಸ್ಥರು, ಎನ್‌ಎಸ್‌ಎಸ್ ಘಟಕದ ಸದಸ್ಯರಾದ ಮಹೇಶ್ ಎ. ಎಸ್, ಸಹ ಕಾರ್ಯಕ್ರಮಾಧಿಕಾರಿ, ನಾಗರಾಜ್ ಎಂ, ಸಹಾಯಕ ಪ್ರಾಧ್ಯಾಪಕರು, ಹರೀಶ್ ದೈಹಿಕ ಶಿಕ್ಷಣ ನಿರ್ದೇಶಕರು, ಶ್ರೀಮತಿ ಸ್ವಾತಿ ಸಹಾಯಕ ಪ್ರಾಧ್ಯಾಪಕರು, ಕುಮಾರಿ ನವ್ಯ, ಸಹಾಯಕ ಪ್ರಾಧ್ಯಾಪಕರು, ಕುಮಾರಿ ವಾಣಿ, ಸಹಾಯಕ ಪ್ರಾಧ್ಯಾಪಕರು ಮತ್ತು ಸ್ವಯಂ ಸೇವಕರು ಭಾಗವಹಿಸಿದ್ದರು.

# ಕುಟುಂಬ ಸದೃಢವಾದರೆ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ

## ಅಡಿಷನಲ್ ಎಸ್ಪಿ ಡಾ.ಬಿ.ಎನ್.ನಂದಿನಿ ಅಭಿಮತ




ಮೈಸೂರು, ಅ. 4–ಒಂದು ಕುಟುಂಬ ಸಮಾಜದಲ್ಲಿ ಸದೃಢವಾಗಿ ನಿಲ್ಲಲು ಆರ್ಥಿಕ ಸ್ವಾವಲಂಬನೆ ಮುಖ್ಯವಾಗಿದ್ದು, ಕುಟುಂಬಗಳು ಸದೃಢವಾದರೆ ಮಾತ್ರ ದೇಶ ಅಭಿವೃದ್ಧಿಯಾಗುತ್ತದೆ ಎಂದು ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಡಾ.ಬಿ.ಎನ್.ನಂದಿನಿ ಹೇಳಿದರು.

ಮೈಸೂರಿನ ಜ್ಯೋತಿನಗರ ಪೊಲೀಸ್ ಕ್ವಾಟ್ರಸ್ ಬಳಿಯ ಪೊಲೀಸ್ ಕ್ರೀಡಾ ಮತ್ತು ಸಾಂಸ್ಕೃತಿಕ ಭವನದಲ್ಲಿ ಮಂಗಳವಾರ ಸಂಜೆ ಗಾನವಿ ಫೌಂಡೇಷನ್ ಸಹಯೋಗದೊಂದಿಗೆ ಪೊಲೀಸ್ ಸಿಬ್ಬಂದಿಗಳ ಕುಟುಂಬದವರಿಗೆ ಏರ್ಪಡಿಸಿದ್ದ ಉಚಿತ ಟೈಲರಿಂಗ್ ತರಬೇತಿ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ದೇಶ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿದ್ದರೂ ನಾವಿಂದು ಮಹಿಳೆಯರ ಆರ್ಥಿಕ ಸ್ವಾವಲಂಬನೆ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ಮಹಿಳೆಗೆ ಧೈರ್ಯ, ವಿಶ್ವಾಸ, ಭರವಸೆ ತುಂಬುವ ಕೆಲಸವಾಗಬೇಕಿದೆ. ಇದರಿಂದ ಮಹಿಳೆ ಮತ್ತಷ್ಟು ಚೇತರಿಕೆ ಕಾಣಬಹುದು. ಈ ನಿಟ್ಟಿನಲ್ಲಿ ಇಂತಹ ತರಬೇತಿಗಳು ಅಗತ್ಯವಾಗಿದ್ದು, ಮಹಿಳೆಯರು ಇದರ ಸದುಪಯೋಗಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಪ್ರಸ್ತುತ ದೇಶದಲ್ಲಿ ಸೈಬರ್ ಕ್ರೈಂ ಹೆಚ್ಚಾಗುತ್ತಿದೆ. ಮೊಬೈಲ್‌ಗಳಲ್ಲಿ ಬರುವ ಯಾವುದೇ ಅವಿಶ್ವಾಸನೀಯ ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡಬಾರದು. ಅಥವಾ ಅಪರಿಚಿತ ವ್ಯಕ್ತಿಗಳಿಗೆ ತಮ್ಮ ವೈಯಕ್ತಿಕ ವಿವರಗಳನ್ನು ನೀಡಬಾರದು. ವಿಶೇಷವಾಗಿ ನೀವು ಮನೆಗೆ ಬೀಗ ಹಾಕಿ ಎಲ್ಲೆ ಹೋದರೂ ಸ್ಟೇಟಸ್ ಹಾಕಬೇಡಿ. ನಿಮ್ಮ ಸ್ಟೇಟಸ್ ನೋಡಿಕೊಂಡು ಕಳ್ಳರು ನಿಮ್ಮ ಮನೆಗೆ ನುಗ್ಗಬಹುದು ಎಂಬ ಎಚ್ಚರಿಕೆ ಅವರು ನೀಡಿದರು. ಗಾನವಿ ಫೌಂಡೇಷನ್ ಅತ್ಯಂತ ತಾಳ್ಮೆ ಮತ್ತು ಶ್ರದ್ಧೆಯಿಂದ ಪೊಲೀಸ್ ಸಿಬ್ಬಂದಿಗಳ ಕುಟುಂಬದವರಿಗೆ ಸುಮಾರು 10 ದಿನಗಳ ಕಾಲ ತರಬೇತಿ ನೀಡಿದೆ. ಇಷ್ಟೊಂದು ಕಡಿಮೆ ಅವಧಿಯಲ್ಲಿ ಮಹಿಳೆಯರು ಹೊಲಿಗೆ ಕಲಿತಿರುವುದು ಅತ್ಯಂತ ಸಂತೋಷಕರ ವಿಷಯ. ಇದರ ಸಂಪೂರ್ಣ ಶ್ರೇಯಸ್ಸು ಗಾನವಿ ಫೌಂಡೇಷನ್ ಅವರ ಸಿಬ್ಬಂದಿಗಳಿಗೆ ಸಲ್ಲುತ್ತದೆ ಎಂದರು.

ಇದೇ ಸಂದರ್ಭದಲ್ಲಿ ತರಬೇತಿ ಕುರಿತು ರಾಣಿಕಿಶೋರ್, ಶೋಭಾ ಧನಂಜಯ್ಯ, ದೀಪಾ ಕಿರಣ್, ಆರ್. ಪಾರ್ವತಿ ಮಾತನಾಡಿ, ಸಿಬ್ಬಂದಿಗಳ ಮಕ್ಕಳಿಗೆ ಕಂಪ್ಯೂಟರ್ ಮತ್ತು ಡ್ರೈವಿಂಗ್ ತರಬೇತಿ ಕೊಡಿಸುವಂತೆ ಮನವಿ ಮಾಡಿದರು.

ತರಬೇತಿ ಪಡೆದ ಸುಮಾರು 243 ಮಹಿಳೆಯರಿಗೆ ಪ್ರಮಾಣ ಪತ್ರವನ್ನು ಗಣ್ಯರು ವಿತರಿಸಿದರು. ಗಾನವಿ ಫೌಂಡೇಷನ್ ಮುಖ್ಯಸ್ಥರಾದ ರಾಮೇಗೌಡ ಹಾಗೂ ಅಶ್ವಿನಿಯವರನ್ನು ಸನ್ಮಾನಿಸಲಾಯಿತು.

ಉಪ ಪೊಲೀಸ್ ಆಯುಕ್ತರಾದ ಎ.ಮಾರುತಿ (ಸಿಎಆರ್) ಎ.ಜಿ.ಅಶೋಕ್ ಕುಮಾರ್(ಸಿಎಆರ್), ಅಶ್ವದಳದ ಕಮಾಂಡೆಂಟ್ ಶೈಲೇಂದ್ರ, ಸಿಎಆರ್ ಆರ್‌ಪಿಐ ಕೆ.ಎಂ.ಮೂರ್ತಿ, ಗಾನವಿ ಫೌಂಡೇಷನ್ ಮುಖ್ಯಸ್ಥರಾದ ರಾಮೇಗೌಡ, ಅಶ್ವಿನಿ ರಾಮೇಗೌಡ ಮುಂತಾದವರು ವೇದಿಕೆಯಲ್ಲಿದ್ದರು.

# ಬೆಟ್ಟಿಂಗ್ ಆ್ಯಪ್ ಪ್ರಕರಣ: ಬಾಲಿವುಡ್ ನಟ ರಣಬೀರ್ ಕಪೂರ್‌ಗೆ ಇಡಿ ಸಮನ್ಸ್




ನವದೆಹಲಿ, ಅ.4– ಛತ್ತೀಸ್‌ಗಢದ ಮಹದೇವ್ ಬೆಟ್ಟಿಂಗ್ ಆ್ಯಪ್ ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಲಿವುಡ್ ನಟ ರಣಬೀರ್ ಕಪೂರ್ ಅವರಿಗೆ ಜಾರಿ ನಿರ್ದೇಶನಾಲಯ ನೋಟಿಸ್ ಜಾರಿ ಮಾಡಿದ್ದು, ಶುಕ್ರವಾರ ವಿಚಾರಣೆಗೆ ಕರೆಸಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.


ಕಳೆದ ತಿಂಗಳು ಮಹದೇವ್ ಆನ್‌ಲೈನ್ ಬೆಟ್ಟಿಂಗ್ ಪ್ರಕರಣ ಸಂಬಂಧಪಟ್ಟಂತೆ 417 ಕೋಟಿ ರೂಪಾಯಿ ವಶಕ್ಕೆ ಪಡೆಯಲಾಗಿದೆ ಎಂದು ಏಜೆನ್ಸಿಯೊಂದು ತನಿಖೆ ಮಾಡಿ ಹೇಳಿತ್ತು. ಈಗ ಈ ವಿಚಾರವಾಗಿ ನಟ ಬಾಲಿವುಡ್ ನಟ ರಣಬೀರ್ ಕಪೂರ್‌ಗೆ ಸಮನ್ಸ್ ಜಾರಿಗೊಳಿಸಲಾಗಿದೆ.


ಅಕ್ಟೋಬರ್ 6ರಂದು ತನಿಖಾ ಸಂಸ್ಥೆಯ ರಾಯ್‌ಪುರ ಕಚೇರಿಯಲ್ಲಿ ವಿಚಾರಣೆಗೆ ಹಾಜರಾಗುವಂತೆ ಇಡಿ ರಣಬೀರ್ ಕಪೂರ್‌ಗೆ ಸೂಚಿಸಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಈ ಪ್ರಕರಣದಲ್ಲಿ ಸುಮಾರು 14–15 ಸೆಲೆಬ್ರಿಟಿಗಳು ಮತ್ತು ನಟರನ್ನು ಸಹ ವಿಚಾರಣೆಗೆ ಒಳಪಡಿಸಲು ಜಾರಿ ನಿರ್ದೇಶನಾಲಯ ಶೀಘ್ರದಲ್ಲೇ ಸಮನ್ಸ್ ನೀಡುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಹೊಸ ಬಳಕೆದಾರರನ್ನು ನೋಂದಾಯಿಸಲು, ಐಡಿಗಳನ್ನು ರಚಿಸಲು ಮತ್ತು ಬೇನಾಮಿ ಬ್ಯಾಂಕ್ ಖಾತೆಗಳ ಲೇಯರ್ಡ್ ವೆಬ್ ಮೂಲಕ ಹಣ ವ್ಯವಹಾರ ನಡೆಸಲು ಈ ಆನ್‌ಲೈನ್ ಬುಕ್ ಬೆಟ್ಟಿಂಗ್ ಅಪ್ಲಿಕೇಶನ್ ಅನ್ನು ಬಳಸಲಾಗುತ್ತಿದೆ ಎಂದು ಏಜೆನ್ಸಿ ಆರೋಪಿಸಿದೆ. ಈ ಆ್ಯಪ್‌ನ ಅನೇಕ ಜಾಹೀರಾತುಗಳಲ್ಲಿ ರಣಬೀರ್ ಕಪೂರ್ ಅವರು ಕಾಣಿಸಿಕೊಂಡಿದ್ದು, ಈ ಸಂಬಂಧ ಅವರಿಗೆ ಸಿಕ್ಕಾಪಟ್ಟೆ ಹಣ ವರ್ಗಾವಣೆ ಆಗಿದೆ ಎಂದು ಹೇಳಲಾಗಿದೆ. ಹಾಗಾಗಿ ರಣಬೀರ್ ಕಪೂರ್ ಅವರನ್ನು ಅಕ್ಟೋಬರ್ 6 ರಂದು ವಿಚಾರಣೆ ಮಾಡೋದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

# Quantum Dots ಶೋಧ: ಅಮೆರಿಕದ ಮೂವರು ರಸಾಯನ ವಿಜ್ಞಾನಿಗಳಿಗೆ ನೊಬೆಲ್ ಪ್ರಶಸ್ತಿ


ಮೌಂಗಿ ಬಾವೆಂಡಿ


ಲೂಯಿಸ್ ಬ್ರುಸ್


ಅಲೆಕ್ಸಿ ಎಕಿಮೊವ್

ಸ್ಟಾಕ್‌ಹೋಮ್ಸ್, ಅ.4– 'ಕ್ವಾಂಟಮ್ ಡಾಟ್ಸ್' ಎಂದು ಕರೆಯಲಾಗುವ ಅತ್ಯಂತ ಚಿಕ್ಕ ಕಣಗಳ ಕುರಿತು ನಡೆಸಿದ ಸಂಶೋಧನೆಗಾಗಿ ಅಮೆರಿಕದ ಮೂವರು ರಸಾಯನ ವಿಜ್ಞಾನಿಗಳಿಗೆ 2023ರ ನೊಬೆಲ್ ಪ್ರಶಸ್ತಿ ಘೋಷಣೆಯಾಗಿದೆ. ಪ್ರಶಸ್ತಿಗೆ ಭಾಜನರಾದ ಎಂಐಟಿಯ ಮೌಂಗಿ ಬಾವೆಂಡಿ, ಕೊಲಂಬಿಯಾ ವಿಶ್ವವಿದ್ಯಾಲಯದ ಲೂಯಿಸ್ ಬ್ರುಸ್ ಹಾಗೂ ನ್ಯಾನೊ ಕ್ರಿಸ್ಟಲ್ ಟೆಕ್ನಾಲಜಿಯ ಅಲೆಕ್ಸಿ ಎಕಿಮೊವ್ ಅವರು ಎಲೆಕ್ಟ್ರಾನಿಕ್ಸ್ ಹಾಗೂ ವೈದ್ಯಕೀಯ ಕ್ಷೇತ್ರದಲ್ಲಿ ಬಳಸಲಾಗುವ ಅತ್ಯಂತ ಪ್ರಖರ ಬೆಳಕು ಉತ್ಪಾದಿಸುವ ಕ್ವಾಂಟಮ್ ಡಾಟ್ಸ್ ಅಭಿವೃದ್ಧಿಯಲ್ಲಿ ಸಂಶೋಧನೆ ನಡೆಸಿದ್ದರು.

**ಪುಟ್ಟದಾದ ಕ್ವಾಂಟಮ್ ಚುಕ್ಕಿ ಶೋಧ:** ಕೆಲವೇ ಕೆಲವು ಅಣುಗಳಷ್ಟು ವ್ಯಾಸ ಹೊಂದಿರುವ ಈ ಕ್ವಾಂಟಮ್ ಡಾಟ್ಸ್, ಟೆಲಿವಿಷನ್ ಪರದೆ ಹಾಗೂ ಎಲ್‌ಇಡಿ ದೀಪಗಳಲ್ಲೂ ಬಳಕೆಯಾಗುತ್ತಿದೆ ಎಂದು ರಾಯಲ್ ಸ್ವೀಡಿಶ್ ಅಕಾಡೆಮಿ ಆಫ್ ಸೈನ್ಸ್‌ನ ಪ್ರಕಟಣೆಯಲ್ಲಿ ಹೇಳಲಾಗಿದೆ.

ಇಷ್ಟು ಮಾತ್ರವಲ್ಲ ಈ ಪ್ರಖರ ಬೆಳಕಿನಿಂದ ಕ್ಯಾನ್ಸರ್ ಕೋಶಗಳೂ ವೈದ್ಯರಿಗೆ ಸ್ಪಷ್ಟವಾಗಿ ಗೋಚರಿಸುತ್ತವೆ. ಈ ಚುಕ್ಕಿಗಳಲ್ಲಿರುವ ಎಲೆಕ್ಟ್ರಾನ್‌ಗಳು ಅತ್ಯಂತ ನಿರ್ಬಂಧಿತ ಚಲನೆ ಹೊಂದಿರುತ್ತವೆ. ಇದರಿಂದಾಗಿ ಲಭ್ಯವಿರುವ ಬೆಳಕನ್ನೇ ಬಳಸಿಕೊಂಡು ಅತ್ಯಂತ ಪ್ರಖರ ಬಣ್ಣದ ಬೆಳಕನ್ನು ಇವು ಹೊರಸೂಸುತ್ತವೆ ಎಂದೆನ್ನಲಾಗಿದೆ.

78 ವರ್ಷದ ಎಕಿಮೊವ್, 80 ವರ್ಷದ ಬ್ರುಸ್ ಅವರು ಈ ತಂತ್ರಜ್ಞಾನದಲ್ಲಿ ಹೆಚ್ಚಿನ ಕೆಲಸ ಮಾಡಿದ್ದಾರೆ. 62 ವರ್ಷದ ಬಾವೆಂಡಿ ಅವರು ಈ ಕ್ವಾಂಟಮ್ ಡಾಟ್ಸ್ ಬಳಕೆಯೋಗ್ಯವಾಗಿಸುವ ಕಾರ್ಯದಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಿರುವುದನ್ನು ಗುರುತಿಸಿ ಪ್ರಶಸ್ತಿಗೆ ಪರಿಗಣಿಸಲಾಗಿದೆ ಎಂದು ಅಕಾಡೆಮಿ ಹೇಳಿದೆ.

ಪ್ರಶಸ್ತಿ ಘೋಷಣೆಯಾಗಿರುವುದಕ್ಕೆ ಪ್ರತಿಕ್ರಿಯಿಸಿರುವ ಬಾವೆಂಡಿ, 'ಅಚ್ಚರಿ, ಆಘಾತ, ಅನಿರೀಕ್ಷಿತ ಮತ್ತು ಅತ್ಯಂತ ಸನ್ಮಾನಿತ' ಎಂದು ಹೇಳಿದ್ದಾರೆ. 2023ರ ನೊಬೆಲ್ ಪ್ರಶಸ್ತಿಯಲ್ಲಿ ಸಾಹಿತ್ಯ, ಶಾಂತಿ ಮತ್ತು ಅರ್ಥಶಾಸ್ತ್ರ ವಿಭಾಗದ ಪ್ರಶಸ್ತಿಗಳು ಇನ್ನಷ್ಟೇ ಘೋಷಣೆಯಾಗಬೇಕಿದೆ. ಈ ಬಾರಿಯ ಪ್ರಶಸ್ತಿ ಮೊತ್ತ ಶೇ 10ರಷ್ಟು ಹೆಚ್ಚಿಸಲಾಗಿದೆ. ಇದರಿಂದ ಪ್ರತಿ ಭಾಗದ ಪ್ರಶಸ್ತಿಗಳು ರೂ. 8.28 ಕೋಟಿಯಷ್ಟಾಗಿದೆ. ವಿಜೇತರಿಗೆ 18 ಕ್ಯಾರೆಟ್ ಚಿನ್ನದ ಪದಕ ಸಿಗಲಿದೆ. ಪ್ರಶಸ್ತಿ ಪ್ರದಾನ ಸಮಾರಂಭ ಡಿಸೆಂಬರ್‌ನಲ್ಲಿ ನಡೆಯಲಿದೆ. ಇತ್ತೀಚೆಗೆ ವೈದ್ಯಕೀಯ ಕ್ಷೇತ್ರದ ನೊಬೆಲ್ ಪ್ರಶಸ್ತಿ ಘೋಷಣೆಯಾಗಿತ್ತು. ಕೋವಿಡ್–19 ಸೋಂಕು ನಿವಾರಣೆಗೆ ಲಸಿಕೆ ಅಭಿವೃದ್ಧಿಪಡಿಸಿದ ವಿಜ್ಞಾನಿಗಳಾದ ಕ್ಯಾಟಲಿನ್ ಕಾರಿಕೊ ಹಾಗೂ ಡ್ರ್ಯೂ ವೈಸ್‌ಮನ್ ಅವರಿಗೆ 2023ನೇ ಸಾಲಿನ ವೈದ್ಯಕೀಯ ವಿಭಾಗದ ನೊಬೆಲ್ ಪುರಸ್ಕಾರ ದೊರೆತಿದೆ.

# ನಿತೀಶ್‌ಕುಮಾರ್ ಆಹ್ವಾನಿಸಿದ್ರು; ನನಗೀಗ 91 ವರ್ಷ, ಈ ವಯಸ್ಸಿನಲ್ಲಿ ಪ್ರಯೋಗ ಮಾಡಲು ಬಯಸುವುದಿಲ್ಲ



ಬೆಂಗಳೂರು, ಅ.4– ಜಾತ್ಯತೀತ ಜನತಾದಳ (ಜೆಡಿಎಸ್) ಪಕ್ಷವನ್ನು ತಮ್ಮ ಜನತಾದಳ ಸಂಯುಕ್ತದ (ಜೆಡಿಯು) ಜತೆ ವಿಲೀನಗೊಳಿಸುವಂತೆ ಹಾಗೂ ವಿರೋಧ ಪಕ್ಷಗಳ ಐಎನ್‌ಡಿಐಎ ಬಣ ಸೇರುವಂತೆ ಬಿಹಾರ ಸಿಎಂ ನಿತೀಶ್ ಕುಮಾರ್ ಪ್ರಸ್ತಾಪಿಸಿದ್ದರು. ಆದರೆ ಅದನ್ನು ನಿರಾಕರಿಸಿದ್ದಾಗಿ ಜೆಡಿಎಸ್ ವರಿಷ್ಠರೂ ಆದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ತಿಳಿಸಿದ್ದಾರೆ.

ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ದೇವೇಗೌಡ, ಹಿಂದಿನ ಜನತಾದಳದ ವಿವಿಧ ಗುಂಪುಗಳಾದ ಜೆಡಿಯು– ಜೆಡಿಎಸ್ ಹಾಗೂ ಸಮಾಜವಾದಿ ಪಕ್ಷವನ್ನೂ ಒಳಗೊಂಡಂತೆ ಜನತಾ ಫ್ರೀಡಂ ಫ್ರಂಟ್ ರಚಿಸುವ ಬಯಕೆಯೊಂದಿಗೆ ಸುಮಾರು ಮೂರು ನಾಲ್ಕು ತಿಂಗಳ ಹಿಂದೆ ನಿತೀಶ್ ಕುಮಾರ್ ನನ್ನನ್ನು ಸಂಪರ್ಕಿಸಿದರು ಎಂದು ಹೇಳಿದರು. ಜೆಡಿಯು ಜೊತೆಗೆ ಜೆಡಿಎಸ್ ವಿಲೀನವಾಗಿ ಇಂಡಿಯಾ ಒಕ್ಕೂಟ ಸೇರುವ ಕುರಿತು ನಿತೀಶ್ ಕುಮಾರ್ ಆಹ್ವಾನ ನೀಡಿದ್ದರು. ಇದನ್ನು ಜೆಡಿಎಸ್ ನಿರಾಕರಿಸಿತ್ತು ಎಂದು ಹೆಚ್.ಡಿ.ದೇವೇಗೌಡರು ಹೇಳಿದ್ದಾರೆ. ನಾಲ್ಕು ತಿಂಗಳ ಹಿಂದೆ ಜನತಾ ಫ್ರೀಡಂ ಫ್ರಂಟ್ ಪ್ರಸ್ತಾವನೆಯೊಂದಿಗೆ ಸಂಪರ್ಕಿಸಲಾಯಿತು. ಆದರೆ, ನಾನು ಒಪ್ಪುವುದಿಲ್ಲ ಎಂದು ಹೇಳಲಾಯಿತು ಎಂದ ದೇವೇಗೌಡರು, ನನಗೆ ರಾಷ್ಟ್ರೀಯ ಹುದ್ದೆಗಳಲ್ಲಿ ಆಸಕ್ತಿ ಇಲ್ಲ. ಈಗಾಗಲೇ ನನಗೆ 91 ವರ್ಷ ಮತ್ತು ಕಾಂಗ್ರೆಸ್ ನನ್ನನ್ನು ಹೇಗೆ ಕೈಬಿಟ್ಟಿದೆ ಎಂಬುದನ್ನು ನೋಡಿದ್ದೇನೆ. ಈ ವಯಸ್ಸಿನಲ್ಲಿ ನನಗೆ ಯಾವುದೇ ಪ್ರಯೋಗಗಳು ಬೇಡ ಎಂದು ಹೇಳಿದರು. ನನ್ನ ಮನವೊಲಿಸಲು ನಿತೀಶ್ ತಮ್ಮ ಪಕ್ಷದ ಅಧ್ಯಕ್ಷರು ಮತ್ತು ಹಿರಿಯ ನಾಯಕರನ್ನು ಕಳುಹಿಸಿದರು. ಆದರೆ, ನಾನು ಒಪ್ಪಲಿಲ್ಲ. ನಾನು ಮತ್ತಷ್ಟು ಚರ್ಚೆ ನಡೆಸಲು ಬಯಸುವುದಿಲ್ಲ. ನಾನು ಸಾಕಷ್ಟು ಅನುಭವಿಸಿದ್ದೇನೆ ಎಂದು ಜೆಡಿಎಸ್, ಬಿಜೆಪಿಯ 'ಬಿ' ಟೀಂ ಎಂದು 2018ರಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಟೀಕಿಸಿದ್ದರ ಕುರಿತು ಪ್ರತಿಕ್ರಿಯಿಸಿದರು.

ರಾಹುಲ್ ಗಾಂಧಿ ಅವರು ಜೆಡಿಎಸ್ ಪಕ್ಷಕ್ಕೆ ಬಿಜೆಪಿಯ 'ಬಿ' ಟೀಮ್ ಪ್ರಮಾಣ ಪತ್ರ ನೀಡಿದ್ದರು. ಕಳೆದ ಚುನಾವಣೆಯಲ್ಲಿ ಮಾತ್ರವಲ್ಲ, ಅದರ ಹಿಂದಿನ ಚುನಾವಣೆಯಲ್ಲಿ ಕೂಡ ಎಂದು ಹೆಚ್.ಡಿ.ದೇವೇಗೌಡ ಅಸಮಾಧಾನ ವ್ಯಕ್ತಪಡಿಸಿದರು.

# ಬರಪೀಡಿತ ಪಟ್ಟಿಯಿಂದ ಪೊನ್ನಂಪೇಟೆ ಕೈಬಿಟ್ಟಿರುವ ಬಗ್ಗೆ ಚರ್ಚೆ

## ತಹಶೀಲ್ದಾರ್ ಸಭೆಯಲ್ಲಿ ರೈತರ ಆಕ್ರೋಶ



### 10 ದಿನದಲ್ಲಿ ಬರಪೀಡಿತ ಪ್ರದೇಶವೆಂದು ಘೋಷಿಸದಿದ್ದರೆ ಪೊನ್ನಂಪೇಟೆ ಬಂದ್

ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಕಾಡ್ಯಮಾಡ ಮನು ಸೋಮಯ್ಯ, ಪೊನ್ನಂಪೇಟೆ ತಾಲೂಕಿನಲ್ಲಿ ಮಳೆ ಇಲ್ಲದೆ ಭತ್ತದ ಗದ್ದೆಗಳೆಲ್ಲವೂ ಒಣಗುತ್ತಿವೆ. ಕಾಫಿ, ಕರಿಮೆಣಸು ಸಂಪೂರ್ಣ ನಾಶವಾಗುವ ಹಂತದಲ್ಲಿದೆ. ತಾಲೂಕು ವ್ಯಾಪ್ತಿಯಲ್ಲಿ ಶೇಕಡ 50ರಷ್ಟು ಮಳೆ ಕೊರತೆಯಾಗಿದೆ. ರಾಜ್ಯ ಸರಕಾರ ಬರಪೀಡಿತ ತಾಲೂಕುಗಳ ಪಟ್ಟಿಯಿಂದ ಪೊನ್ನಂಪೇಟೆ ತಾಲೂಕನ್ನು ಕೈಬಿಟ್ಟಿರುವುದು ರೈತರಿಗೆ ತೀವ್ರ ಆಘಾತ ಮೂಡಿಸಿದೆ. ಈ ಹಿನ್ನೆಲೆಯಲ್ಲಿ ಕೂಡಲೇ ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಹಾಗೂ ಜಿಲ್ಲಾಡಳಿತ ಸಭೆ ನಡೆಸಿ, ಈ ಬಗ್ಗೆ ಕ್ರಮಕೈಗೊಳ್ಳಬೇಕು. 10 ದಿನದೊಳಗೆ ಬರಪೀಡಿತ ಪ್ರದೇಶವೆಂದು ಘೋಷಿಸದಿದ್ದಲ್ಲಿ ಪೊನ್ನಂಪೇಟೆ ತಾಲೂಕು ಬಂದ್ ನಡೆಸುವುದಾಗಿ ಎಚ್ಚರಿಸಿದರು.

ಮಡಿಕೇರಿ/ಪೊನ್ನಂಪೇಟೆ, ಅ.4– ಬರ ಪೀಡಿತ ತಾಲೂಕುಗಳ ಪಟ್ಟಿಯಿಂದ ಪೊನ್ನಂಪೇಟೆ ತಾಲೂಕನ್ನು ಕೈಬಿಟ್ಟಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಪ್ರಮುಖರೊಂದಿಗೆ ಪೊನ್ನಂಪೇಟೆ ತಾಲೂಕು ತಹಶೀಲ್ದಾರ್ ಎನ್.ಎಸ್. ಪ್ರಶಾಂತ್ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಸಭೆ ನಡೆಸಿದರು.

ಪೊನ್ನಂಪೇಟೆ ತಾಲೂಕು ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಕಾಡ್ಯಮಾಡ ಮನು ಸೋಮಯ್ಯ, ಪೊನ್ನಂಪೇಟೆ ತಾಲೂಕನ್ನು ಬರಪೀಡಿತ ಪ್ರದೇಶವೆಂದು ಸರ್ಕಾರ ಇದುವರೆಗೆ ಘೋಷಣೆ ಮಾಡಿಲ್ಲ. ಪ್ರಸಕ್ತ ಸಾಲಿನಲ್ಲಿ ಶೇಕಡ 60ರಷ್ಟು ಮಳೆ ಪ್ರಮಾಣ ಕಡಿಮೆಯಾಗಿದೆ. ಶೇಕಡ 50ರಷ್ಟು ಮಳೆ ಇಲ್ಲದಿದ್ದಾಗ ಅದು ಬರ ಪೀಡಿತ ಪ್ರದೇಶವೆಂದು ಸರ್ಕಾರ ಘೋಷಣೆ ಮಾಡುತ್ತದೆ. ಆದರೆ ಪೊನ್ನಂಪೇಟೆ ತಾಲೂಕನ್ನು ಬರಪೀಡಿತ ಪ್ರದೇಶವೆಂದು ಇದುವರೆಗೆ ಘೋಷಣೆ ಮಾಡಿಲ್ಲ. ಇದರಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆಂದು ಅಧಿಕಾರಿಗಳ ಗಮನಕ್ಕೆ ತಂದರು.

ತಹಶೀಲ್ದಾರ್ ಎನ್.ಎಸ್.ಪ್ರಶಾಂತ್ ಮಾತನಾಡಿ, ಸರ್ಕಾರ ನಮ್ಮಿಂದ ವರದಿಯನ್ನು ಪಡೆದಿಲ್ಲ. ಕೊಡಗಿನ ಮೂರು ತಾಲೂಕನ್ನು ಮಾತ್ರ ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಿದೆ. ನಾವು ಯಾವುದೇ ವರದಿಯನ್ನು ನೀಡಿಲ್ಲ. ಇದೀಗ ಸಂಪೂರ್ಣ ವರದಿಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಕಳುಹಿಸಲಾಗುವುದು ಎಂದು ಮಾಹಿತಿ ನೀಡಿದರು. ಸಭೆಯಲ್ಲಿ ಕಾಫಿ ಮಂಡಳಿಯ ಉಪ ನಿರ್ದೇಶಕಿ ಶ್ರೀದೇವಿ ಮಾತನಾಡಿ, ಮಳೆಯ ಕೊರತೆ ಪ್ರಮಾಣದ ಅಂಕಿ ಅಂಶಗಳನ್ನು ಸಭೆಯ ಮುಂದಿಟ್ಟರು. ಕೃಷಿ ಇಲಾಖೆಯ ಶಿವಮೂರ್ತಿ, ಕೃಷಿ ಇಲಾಖಾಧಿಕಾರಿ ರೀನಾ ಹಾಗೂ ತೋಟಗಾರಿಕೆ ಇಲಾಖೆ ಅಧಿಕಾರಿ ದೀನಾ, ಪೊನ್ನಂಪೇಟೆ ಕಂದಾಯ ಅಧಿಕಾರಿಗಳಾದ ಸುಧೀಂದ್ರ ಅವರುಗಳು ಸಭೆಯಲ್ಲಿ ಮಾತನಾಡಿ, ಪ್ರಸಕ್ತ ಸಾಲಿನಲ್ಲಿ ಮಳೆ ಕೊರತೆಯಿಂದ ಕೃಷಿ ಫಸಲುಗಳು ನಷ್ಟವಾಗಿರುವ ಬಗ್ಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಪೊನ್ನಂಪೇಟೆ ತಾಲೂಕು ಶಿರಸ್ತೆದಾರ್ ಜನಾರ್ಧನ್, ತಾಲೂಕು ವ್ಯಾಪ್ತಿಯ ನಾಲ್ಕು ಹೋಬಳಿಗಳ ಕಂದಾಯ ಪರಿವೀಕ್ಷಕರು, ಗ್ರಾಮ ಲೆಕ್ಕಿಗರು ಹಾಗೂ ರೈತ ಸಂಘದ ಪ್ರಧಾನ ಸಂಚಾಲಕ ಪುಚ್ಚಿಮಾಡ ಸುಭಾಷ್ ಸುಬ್ಬಯ್ಯ, ಪ್ರಧಾನ ಕಾರ್ಯದರ್ಶಿ ಚಟ್ರುಮಾಡ ಸುಜಯ್ ಬೋಪಯ್ಯ, ಜಿಲ್ಲಾ ಕಾರ್ಯದರ್ಶಿ ಅಜ್ಜಮಾಡ ಚಂಗಪ್ಪ, ವಿರಾಜಪೇಟೆ ತಾಲೂಕು ಅಧ್ಯಕ್ಷ ಬಾಚಮಾಡ ಭವಿ ಕುಮಾರ್, ಪೊನ್ನಂಪೇಟೆ ತಾಲೂಕು ಅಧ್ಯಕ್ಷ ಅಲೆಮಾಡ ಮಂಜುನಾಥ್, ಹೋಬಳಿ ಅಧ್ಯಕ್ಷರುಗಳಾದ ಮೇಚಂಡ ಕಿಸ ಮಾಚಯ್ಯ, ಚೊಟ್ಟೆಕಾಳಪಂಡ ಮನು, ಕಂಬ ಕಾರ್ಯಪ್ಪ, ಮಂಡೇಪಂಡ ಪ್ರವೀಣ್, ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಪರಂಪರೆ ಉಳಿಸಲು ಕೊಡವತನ ಮೆರೆಯಬೇಕು

## ಒತ್ತೋರ್ಮೆ ಕೂಟದಲ್ಲಿ ಡಾ. ಉಳ್ಳಿಯಡ ಎಂ. ಪೂವಯ್ಯ ಕರೆ



ವಿರಾಜಪೇಟೆ, ಅ.4– ಕೊಡವರು ತಮ್ಮ ಪದ್ಧತಿ, ಪರಂಪರೆ ಆಚಾರ–ವಿಚಾರಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಬದುಕಿನ ಪ್ರತಿ ಹೆಜ್ಜೆಯಲ್ಲೂ ಕೊಡವತನವನ್ನು ಮೆರೆಯಬೇಕು, ಮರೆಯಬಾರದು ಎಂದು ಕೊಡವ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷ ಬ್ರಹ್ಮಗಿರಿ ಕೊಡವ ವಾರ ಪತ್ರಿಕೆಯ ಸಂಪಾದಕರಾದ ಡಾ, ಉಳ್ಳಿಯಡ ಎಂ.ಪೂವಯ್ಯ ಕರೆ ನೀಡಿದರು.

ವಿರಾಜಪೇಟೆ ಕೊಡವ ಸಮಾಜದ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಕೊಡವ ಪೊಮ್ಮಕ್ಕಡ ಒಕ್ಕೂಟದ ವತಿಯಿಂದ ಕೈಲ್ ಪೋಳ್ದ್ ಹಬ್ಬದ ಪ್ರಯುಕ್ತ ಏರ್ಪಡಿಸಲಾಗಿದ್ದ ಒತ್ತೋರ್ಮೆ ಕೂಟ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ಸರಕಾರದ ಯಾವುದೇ ಮೀಸಲಾತಿ, ಸವಲತ್ತುಗಳು ಸಿಗಬೇಕಾದರೂ ರಾಜಕೀಯ ರಹಿತವಾಗಿ ಎಲ್ಲಾ ಕೊಡವರು ಒಗ್ಗಟ್ಟಿನಿಂದ ಹೋರಾಡುವುದು ಅಗತ್ಯವಾಗಿದೆ ಎಂದರು.

ಕೊಡಗು ಗ್ರೀನ್ ಸಿಟಿ ಫೋರಂ ಅಧ್ಯಕ್ಷ, ಸಮಾಜ ಸೇವಕರಾದ ಚೆಯ್ಯಂಡ ಸತ್ಯ ಅವರು ಕೊಡವ ಪೊಮ್ಮಕ್ಕಡ ಒಕ್ಕೂಟದ ವತಿಯಿಂದ ಸನ್ಮಾನ ಸ್ವೀಕರಿಸಿದ ಬಳಿಕ ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಮಾರಂಭದಲ್ಲಿ ಅಲ್ಲಪಂಡ ತಾರ ಅವರು ತಪ್ಪಡಕ ಕಟ್ಟುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕೊಡವ ಪೊಮ್ಮಕ್ಕಡ ಒಕ್ಕೂಟದ ಅಧ್ಯಕ್ಷರಾದ ಮನೆಯಪಂಡ ಕಾಂತಿ ಸತೀಶ್ ಅವರು ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಪೊಮ್ಮಕ್ಕಡ ಒಕ್ಕೂಟ ನಡೆದು ಬಂದ ಹಾದಿ ಹಾಗೂ ಒಕ್ಕೂಟದ ಉದ್ದೇಶವನ್ನು ಸವಿವರವಾಗಿ ಸಭೆಗೆ ತಿಳಿಸಿದರು.

ನೀಲಕ್ಕ ಗ್ರೂಪ್ ನಾಯಕಿ ಮಾಳೇಟ್ಟಿರ ಕವಿತ ಶ್ರೀನಿವಾಸ್ ಸಭೆಯಲ್ಲಿ ಮಾತನಾಡಿದರು. ವೇದಿಕೆಯಲ್ಲಿ ಒಕ್ಕೂಟದ ಉಪಾಧ್ಯಕ್ಷರಾದ ಅಮ್ಮಣಿಚಂಡ ಈಶ್ವರಿ ಗಂಗಮ್ಮ, ಸಲಹಾ ಸಮಿತಿ ಸದಸ್ಯರಾದ ಬಿದ್ದಂಡ ರಾಣಿ, ನಾಯಕಂಡ ಬೇಬಿ ಚಿಣ್ಣಪ್ಪ ಉಪಸ್ಥಿತರಿದ್ದರು. ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಗಣ್ಯರನ್ನು ಸನ್ಮಾನಿಸಿ ಗೌರವಿಸಲಾಯಿತು,

ಕ್ರೀಡಾ ಪೈಪೋಟಿಯನ್ನು ಹಿರಿಯ ಸದಸ್ಯರಾದ ನಾಯಡ ಪಾಲಿ ಅವರು ಉದ್ಘಾಟಿಸಿದರು. ಕೊಡವ ವಾಲಗತಾಟ್ ಹಾಗೂ ಇತರ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಕ್ರೀಡಾ ಪೈಪೋಟಿಯಲ್ಲಿ ವಿಜೇತರಿಗೆ ಅತಿಥಿಗಳು ಬಹುಮಾನ ವಿತರಿಸಿದರು. ಒಕ್ಕೂಟದ ಕಾರ್ಯದರ್ಶಿ ಬಯವಂಡ ಇಂದಿರಾ ಬೆಳ್ಳಿಯಪ್ಪ ಸ್ವಾಗತಿಸಿದರು, ಬಾಳೆಯಡ ಶೈಲಾ ಪ್ರಾರ್ಥಿಸಿದರೆ, ಖಜಾಂಚಿ ತಾತಂಡ ಯಶು ಕಭೀರ್ ವಂದಿಸಿದರು.

## ಬೈಕ್ ಕಳ್ಳನ ಬಂಧನ, ಬೈಕ್‌ಗಳ ವಶ

ಕುಶಾಲನಗರ, ಅ.4– ಎರಡು ಬೈಕ್‌ಗಳನ್ನು ಕಳ್ಳತನ ಮಾಡಿದ್ದ ಆರೋಪಿಯನ್ನು ಟೌನ್ ಪೊಲೀಸರು ಬಂಧಿಸಿದ್ದಾರೆ.



ಗೊಂದಿಬಸವನಹಳ್ಳಿ ಗ್ರಾಮದ ರಾಜು ಎಂಬುವರ ಪುತ್ರ ಸುಬ್ರಮಣಿ (26) ಬಂಧಿತ ಆರೋಪಿ. ಈತ 2018 ರಲ್ಲಿ ಗುಂಡೂರಾವ್ ಬಡಾವಣೆಯಲ್ಲಿ ಹೀರೋ ಹೋಂಡ ಸ್ಪ್ಲೆಂಡರ್ ಹಾಗೂ 2023 ರಲ್ಲಿ ಸರಕಾರಿ ಆಸ್ಪತ್ರೆಯ ಆವರಣದಲ್ಲಿದ್ದ ಫಿಯಾರೋ ಬೈಕ್ ಕಳ್ಳತನ ಮಾಡಿದ್ದ. ಈತನಿಂದ ಎರಡು ಬೈಕ್‌ಗಳನ್ನು ವಶ ಪಡಿಸಿಕೊಳ್ಳಲಾಗಿದೆ. ಕಾರ್ಯಾಚರಣೆಯಲ್ಲಿ ಟೌನ್ ಠಾಣಾಧಿಕಾರಿಗಳಾದ ಎಚ್.ವಿ. ಚಂದ್ರಶೇಖರ್, ಎಚ್.ಟಿ.ಗೀತಾ ನೇತೃತ್ವ ದಲ್ಲಿ ಕ್ರೈಂ ವಿಭಾಗದ ಎ.ಎಸ್.ಐ.ವೆಂಕಟೇಶ್, ಸಿಬ್ಬಂದಿಗಳಾದ ಸಂದೀಪ್ ರೈ, ರಂಜಿತ್, ಪ್ರಕಾಶ್, ಪ್ರವೀಣ್, ಪಾಲ್ಗೊಂಡಿದ್ದರು.

# ಅತ್ಯಾಚಾರ ಪ್ರಕರಣ ಮರುತನಿಖೆಗೆ ಆಗ್ರಹಿಸಿ ವಿದ್ಯಾರ್ಥಿಗಳ ಪ್ರತಿಭಟನೆ

ಮಡಿಕೇರಿ, ಅ.4– ಉಜಿರೆಯ ಪಾಂಗಾಳ ನಿವಾಸಿ ವಿದ್ಯಾರ್ಥಿನಿ ಕುಮಾರಿ ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಪ್ರಕರಣವನ್ನು ಮರು ತನಿಖೆ ನಡೆಸಬೇಕು ಮತ್ತು ನೈಜ ಆರೋಪಿಗಳನ್ನು ಬಂಧಿಸಬೇಕೆಂದು ಆಗ್ರಹಿಸಿ ವಾಯ್ಸ್ ಆಫ್ ಯೂತ್ ವಿದ್ಯಾರ್ಥಿ ಸಂಘಟನೆ ಮಡಿಕೇರಿಯಲ್ಲಿ ಪ್ರತಿಭಟನೆ ನಡೆಸಿತು.

ನಗರದ ಇಂದಿರಾ ಗಾಂಧಿ ವೃತ್ತದಲ್ಲಿ ಜಮಾಯಿಸಿದ ವಿದ್ಯಾರ್ಥಿಗಳು ಕುಮಾರಿ ಸೌಜನ್ಯ ಸಾವಿಗೆ ನ್ಯಾಯ ಒದಗಿಸಬೇಕು. ಅತ್ಯಾಚಾರಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸಿದರು. ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಪ್ರಕರಣ ನಡೆದು 11 ವರ್ಷ ಕಳೆದರೂ ಕೂಡ ನೈಜ ಆರೋಪಿಗಳು ಪತ್ತೆಯಾಗಿಲ್ಲ. ಈ ಹಿನ್ನೆಲೆಯಲ್ಲಿ ಪ್ರಕರಣವನ್ನು ಮರು ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.




ಪ್ರತಿಭಟನೆಯಲ್ಲಿ ಮಾತನಾಡಿದ ವಿದ್ಯಾರ್ಥಿ ಸಂಘಟನೆ ಮುಖಂಡ ಪ್ರತಾಪ್, ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಪ್ರಕರಣ ನಡೆದು 11 ವರ್ಷ ಕಳೆದಿದೆ. ಅಮಾಯಕ ವ್ಯಕ್ತಿಯೊಬ್ಬನನ್ನು ಅಪರಾಧಿ ಎಂದು ಬಿಂಬಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಪ್ರಕರಣವನ್ನು ಮರು ತನಿಖೆ ನಡೆಸಿ, ನಿಜವಾದ ಆರೋಪಿಗಳನ್ನು ಬಂಧಿಸಬೇಕೆಂದು ಹೇಳಿದರು. ಬಳಿಕ ಪ್ರತಿಭಟನೆಯ ಮನವಿ ಪತ್ರವನ್ನು ಜಿಲ್ಲಾಡಳಿತದ ಮೂಲಕ ಸರಕಾರಕ್ಕೆ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ವಿವಿಧ ಕಾಲೇಜು ವಿದ್ಯಾರ್ಥಿ ವಿದ್ಯಾರ್ಥಿನಿಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

### ಜನರಲ್ ತಿಮ್ಮಯ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮಡಿಕೇರಿ, ಅ.4– 2022–23 ನೇ ಸಾಲಿನಲ್ಲಿ ಹತ್ತನೇ ತರಗತಿ ಮತ್ತು ದ್ವಿತೀಯ ಪಿಯುಸಿ ಸಾರ್ವತ್ರಿಕ ಪರೀಕ್ಷೆಗಳಲ್ಲಿ ಗರಿಷ್ಠ ಅಂಕಗಳನ್ನು ಪಡೆದ ಕರ್ನಾಟಕ ಮೂಲ ನಿವಾಸಿ ಮಾಜಿ ಸೈನಿಕರ ಮಕ್ಕಳಿಗೆ 'ಜನರಲ್ ಕೆ.ಎಸ್.ತಿಮ್ಮಯ್ಯ' ನಗದು ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಅ.31 ಕೊನೆಯ ದಿನವಾಗಿದೆ ಎಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

## ಶೂಟಿಂಗ್ ಸ್ಪರ್ಧೆಯಲ್ಲಿ ಬೆಳ್ಳಿ ಗೆದ್ದ ಶೂಟರ್ಸ್

ಗೋಣಿಕೊಪ್ಪ, ಅ.4– ಬೆಂಗಳೂರು ಬಿ. ಎಂ. ಇಂಗ್ಲೀಷ್ ಶಾಲಾ ಆಡಳಿತ ವತಿಯಿಂದ ಪಡುಕೋಣೆ ದ್ರಾವಿಡ ಸೆಂಟರ್‌ನಲ್ಲಿರುವ ಎಲೈಟ್ ಶೂಟಿಂಗ್ ಕ್ಲಬ್‌ನಲ್ಲಿ ಆಯೋಜಿಸಿದ್ದ ಸಿಐಎಸ್‌ಸಿಇ ರಾಷ್ಟ್ರಮಟ್ಟದ ಶೂಟಿಂಗ್ ಸ್ಪರ್ಧೆಯಲ್ಲಿ ಗೋಣಿಕೊಪ್ಪದ ಕ್ಯಾಲ್ಸ್ ಹಾಗೂ ಅಶ್ವಿನಿ ಸ್ಪೋರ್ಟ್ಸ್ ಫೌಂಡೇಷನ್ ಶೂಟರ್‌ಗಳು ಬೆಳ್ಳಿ ಗೆದ್ದುಕೊಂಡಿದ್ದಾರೆ.

17 ವಯೋಮಿತಿಯ ವಿಭಾಗದಲ್ಲಿ ನಿಶಾಂತ್ ಪಿ. ಜಗದಾಗ್ನಿ ಬೆಳ್ಳಿ ಪದಕ ಪಡೆದುಕೊಂಡರು. ಇದರೊಂದಿಗೆ ಭೂಪಾಲ್‌ನಲ್ಲಿ ನಡೆಯಲಿರುವ ಸ್ಕೂಲ್ ಗೇಮ್ಸ್ ಫೆಡರೇಷನ್ ಆಫ್ ಇಂಡಿಯ ಶೂಟಿಂಗ್‌ಗೆ ಆಯ್ಕೆಯಾದರು. ಇವರೊಂದಿಗೆ ಶೂಟರ್‌ಗಳಾದ ನಿಶ್ಮಾ ನೀಲಮ್ಮ, ಆಂಚಲ್ ಗಂಗಾ, ವಿದ್ಯಾ ಅರುಣ್, ಎಸ್. ಗಿರಿಧರ, ತನೀಶ್ ತಮ್ಮಯ್ಯ, ಕುಶಾಲ್ ಮಹೇಶ್, ಪಿ. ಎಸ್. ಹೇಮಂತ್, ಆರ್. ಮನಸ್ವಿ, ವಂಶಿ, ಪ್ರಜ್ಞಾ ಗೋಪಿಕೃಷ್ಣ, ಅದಿತಿ ಮುತ್ತಮ್ಮ ಭಾಗವಹಿಸಿದ್ದರು.




## ಗಮನಸೆಳೆದ ಅಪರೂಪದ ನಾಣ್ಯಗಳ ಪ್ರದರ್ಶನ

ಚಾಮರಾಜನಗರ, ಅ.4– ಚಾಮರಾಜನಗರ ತಾಲೂಕಿನ ಕುದೇರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿಂದು ಆಯೋಜಿಸಲಾಗಿದ್ದ ಭಾರತದ ಅಪರೂಪದ ಹಾಗೂ ಪ್ರಾಚೀನ ಕಾಲದಿಂದ ಪ್ರಸ್ತುತ ಅವಧಿವರೆಗಿನ ನಾಣ್ಯಗಳ ಪ್ರದರ್ಶನ ಗಮನ ಸೆಳೆಯಿತು.



ಕಾಲೇಜು ಶಿಕ್ಷಣ ಇಲಾಖೆ, ಕುದೇರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಐ.ಕ್ಯೂಎ.ಸಿ ಸಹಯೋಗದೊಂದಿಗೆ ಅರ್ಥಶಾಸ್ತ್ರ ಮತ್ತು ಇತಿಹಾಸ ವಿಭಾಗಗಳ ವತಿಯಿಂದ ಏರ್ಪಾಡು ಮಾಡಲಾಗಿದ್ದ ಭಾರತದ ಪ್ರಾಚೀನ ಅಪೂರ್ವ, ಅಮೂಲ್ಯ, ಐತಿಹಾಸಿಕ ನಾಣ್ಯಗಳ 155ನೇ ಅಪರೂಪದ ಪ್ರದರ್ಶನವನ್ನು ವಿದ್ಯಾರ್ಥಿಗಳು, ಬೋಧಕ ವೃಂದ ಕುತೂಹಲ ಹಾಗೂ ಆಸಕ್ತಿಯಿಂದ ವೀಕ್ಷಣೆ ಮಾಡಿದರು.

ಬೆಂಗಳೂರಿನ ಪ್ರಾಚೀನ ನಾಣ್ಯ ಸಂಗ್ರಹಗಾರರು ಮತ್ತು ನಿವೃತ್ತ ಎಂಜಿನಿಯರ್‌ರಾದ ಹೆಚ್.ಕೆ. ರಾಮರಾವ್ ಅವರು ತಾವು ಸಂಗ್ರಹ ಮಾಡಿರುವ ನಾಣ್ಯಗಳ ಪ್ರದರ್ಶನಕ್ಕೆ ಗಿಡಕ್ಕೆ ನೀರೆರೆಯುವ ಮೂಲಕ ಚಾಲನೆ ನೀಡಿದರು. ಕುದೇರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಥಿಯೋಡರ್ ಲೂಥರ್ ಅವರು ಅಧ್ಯಕ್ಷತೆ ವಹಿಸಿದ್ದರು. ಸಹಾಯಕ ಪ್ರಾಧ್ಯಾಪಕರಾದ ಶಶಿಕಲಾ ವಾಣಿ, ಮಹೇಂದ್ರ, ಮಮತ, ಕವಿತಾ, ಮಧುಸೂಧನ್, ಶ್ರೀನಿವಾಸ್ ಇತರರು ಉಪಸ್ಥಿತರಿದ್ದರು.

# ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಎಚ್ಚರವಹಿಸಿ

## ವಾರದಲ್ಲಿ ಕ್ರಿಯಾಯೋಜನೆ ತಯಾರಿಸಿ ಸಲ್ಲಿಸಲು ಜಿಲ್ಲಾಧಿಕಾರಿ ಸೂಚನೆ



"ಜಿಲ್ಲೆಯಲ್ಲಿ ಮುಂಬರುವ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಬಹುದಾದ ಗ್ರಾಮಗಳನ್ನು ಪಟ್ಟಿ ಮಾಡಲಾಗಿದೆ. ಚಾಮರಾಜನಗರ 22, ಗುಂಡ್ಲುಪೇಟೆ 24, ಹನೂರು 19, ಕೊಳ್ಳೇಗಾಲ 5 ಹಾಗೂ ಯಳಂದೂರಿನ 9 ಗ್ರಾಮಗಳು ಸೇರಿದಂತೆ ಒಟ್ಟು 79 ಗ್ರಾಮಗಳನ್ನು ಈಗಾಗಲೇ ಗುರುತಿಸಲಾಗಿದೆ. ಆರ್.ಒ. ಪ್ಲಾಂಟ್‌ಗಳನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಬೇಕು. ಖಾಸಗಿ ಬೋರ್‌ವೆಲ್‌ಗಳಲ್ಲಿ ಅಂತರ್ಜಲ ಕುಸಿದಿದ್ದರೆ (ರೀಬೋರಿಂಗ್) ರೀಚಾರ್ಜ್ ಮಾಡಿಸಲು ಅಧಿಕಾರಿಗಳು ಮುಂದಾಗಬೇಕು. –ಶಿಲ್ಪಾನಾಗ್, ಜಿಲ್ಲಾಧಿಕಾರಿ

ಚಾಮರಾಜನಗರ, ಅ.4– ಜಿಲ್ಲೆಯಲ್ಲಿ ಮಾರ್ಚ್ ಅಂತ್ಯದವರೆಗೆ ಕುಡಿಯುವ ನೀರಿಗೆ ತೊಂದರೆಯಾಗದಂತೆ ಸಮಗ್ರ ಕುಡಿಯುವ ನೀರಿನ ಯೋಜನೆಗೆ ಕ್ರಿಯಾಯೋಜನೆ ತಯಾರಿಸಿ ಒಂದು ವಾರದೊಳಗೆ ಸಲ್ಲಿಸುವಂತೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಸೂಚನೆ ನೀಡಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ನಡೆದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮುಂಗಾರು ಹಂಗಾಮಿನಲ್ಲಿ ಮಳೆ ಪ್ರಮಾಣ ಕಡಿಮೆಯಾಗಿದ್ದು, ಬರ ಪರಿಸ್ಥಿತಿ ಎದುರಾಗಿರುವುದರಿಂದ ಬರ ನಿರ್ವಹಣೆ ಸಂದರ್ಭವನ್ನು ಅಚ್ಚುಕಟ್ಟಾಗಿ ನಿಭಾಯಿಸಬೇಕು. ಜಿಲ್ಲೆಯ ಯಾವುದೇ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವವಾಗದಂತೆ ನೋಡಿಕೊಳ್ಳಬೇಕು. ಕುಡಿಯುವ ನೀರು ಸಮರ್ಪಕವಾಗಿ ಜನರಿಗೆ ದೊರೆಯುವಂತೆ ಅಧಿಕಾರಿಗಳು ಗಮನ ಹರಿಸಬೇಕು ಎಂದರು. ಜಲಜೀವನ್ ಮಿಷನ್ ಯೋಜನೆ ಕಾಮಗಾರಿಯನ್ನು ಆದ್ಯತೆ ಮೇರೆಗೆ ವೇಗಗೊಳಿಸಬೇಕು. ಕಾಮಗಾರಿಯಲ್ಲಿ ದುಂದುವೆಚ್ಚಕ್ಕೆ ಅವಕಾಶವಾಗಬಾರದು. ಪೈಪ್‌ಲೈನ್ ಕಾಮಗಾರಿ ಗುಣಮಟ್ಟದಿಂದ ಕೂಡಿರಬೇಕು. ಕಲುಷಿತ ನೀರು ಕುಡಿಯುವ ನೀರಿನ ಪೈಪ್‌ಲೈನ್‌ಗೆ ಸೇರದಂತೆ ಎಚ್ಚರ ವಹಿಸಬೇಕು. 15ನೇ ಹಣಕಾಸು ಯೋಜನೆ ಹಾಗೂ ವಿಶೇಷ ಅನುದಾನ ಸೇರಿದಂತೆ ಇತರೆ ಅವಶ್ಯ ಅನುದಾನಗಳನ್ನು ಬಳಸಿಕೊಂಡು ಬಾಕಿ ಇರುವ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು. ಈ ನಿಟ್ಟಿನಲ್ಲಿ ಎಲ್ಲಾ ತಾಲೂಕುಗಳ ತಾ. ಪಂ. ಕಾರ್ಯನಿರ್ವಾಹಕ ಅಧಿಕಾರಿಗಳು ಕಾರ್ಯೋನ್ಮುಖರಾಗುವಂತೆ ನಿರ್ದೇಶನ ನೀಡಿದರು.

ನೀರಿನ ಲಭ್ಯತೆ ಕುರಿತು ಜಿಯಾಲಾಜಿಸ್ಟ್ (ಭೂಗರ್ಭ ಶಾಸ್ತ್ರಜ್ಞ) ರಿಂದ ಪಾಯಿಂಟ್ ಗುರುತಿಸಬೇಕು. ಖಾಸಗಿ ಬೋರ್‌ವೆಲ್‌ಗಳಿಗೆ ಜಿಯೋ ಟ್ಯಾಗ್ ಮಾಡಿಸಬೇಕು. ತಹಶೀಲ್ದಾರರು ಹಾಗೂ ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು. ಜಿಲ್ಲಾ ಹಾಗೂ ತಾಲೂಕುಮಟ್ಟದ ಅಧಿಕಾರಿಗಳು ಕ್ಷೇತ್ರ ಭೇಟಿ ಸಂದರ್ಭದಲ್ಲಿ ನೀರಿನ ಪರೀಕ್ಷೆ ಮಾಡಿಸಬೇಕು. ವಹಿ ನಿರ್ವಹಿಸಬೇಕು. ಈ ಬಗ್ಗೆ ತಾಲೂಕುವಾರು ವರದಿ ನೀಡುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಬೆಳೆ ಸಮೀಕ್ಷೆಗೆ ಸಂಬಂಧಿಸಿದಂತೆ ಸಮೀಕ್ಷೆಯನ್ನು ಯಾವುದೇ ಬಗೆಯ ವಿಳಂಬಕ್ಕೆ ಅವಕಾಶವಾಗದಂತೆ ಶೀಘ್ರವಾಗಿ ಕೆಲಸ ಆಗಬೇಕು. ಪಿ.ಆರ್. ಗಳಿಗೆ ಅವಶ್ಯವಾಗಿರುವ ಗುರುತಿನ ಚೀಟಿ ನೀಡಬೇಕು. ಸಮೀಕ್ಷೆ ಕಾರ್ಯವನ್ನು ಆದಷ್ಟು ಬೇಗನೆ ಮುಗಿಸುವಂತೆ ಅಧಿಕಾರಿಗಳಿಗೆ ತಿಳಿಸಿದರು.

ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆನಂದ್ ಪ್ರಕಾಶ್ ಮೀನಾ, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಉಪವಿಭಾಗಾಧಿಕಾರಿ ಮಹೇಶ್, ಎಲ್ಲಾ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

## ಕಲಾವಿದರಿಂದ ಅರ್ಜಿ ಆಹ್ವಾನ

ಚಾಮರಾಜನಗರ, ಅ.4– ಚಾಮರಾಜನಗರ ದಸರಾ ಮಹೋತ್ಸವ–2023 ಅಂಗವಾಗಿ ಸಾಂಸ್ಕೃತಿಕ ಸಮಿತಿಯ ಮೂಲಕ ಅ.17 ರಿಂದ 20 ರವರೆಗೆ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದು, ಈ ಕಾರ್ಯಕ್ರಮಗಳಿಗೆ ಮೆರವಣಿಗೆ ಕಲಾತಂಡ, ಪೌರಾಣಿಕ ನಾಟಕ, ಜನಪದ ಹಾಡುಗಾರಿಕೆ, ಸುಗಮ ಸಂಗೀತ ಸ್ಥಳೀಯ ಕಲಾವಿದರಿಂದ ಅರ್ಜಿ ಆಹ್ವಾನಿಸಲಾಗಿದೆ.

ಭರ್ತಿ ಮಾಡಿದ ಅರ್ಜಿಯನ್ನು ಅ.6ರೊಳಗೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ಚಾಮರಾಜನಗರ ದಸರಾ ಸಾಂಸ್ಕೃತಿಕ ಉಪ ಸಮಿತಿಯ ಕಾರ್ಯಾಧ್ಯಕ್ಷರು ಹಾಗೂ ಹೆಚ್ಚುವರಿ ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ಸಲ್ಲಿಸುವಂತೆ ಚಾಮರಾಜನಗರ ದಸರಾ ಮಹೋತ್ಸವ ಸಮಿತಿ ಕಾರ್ಯಾಧ್ಯಕ್ಷರು ಮನವಿ ಮಾಡಿದ್ದಾರೆ.

## ನಂಜುಂಡಸ್ವಾಮಿ ನಿಧನ

ಚಾಮರಾಜನಗರ, ಅ.4– ತಾಲೂಕಿನ ಉಮ್ಮತ್ತೂರು ಗ್ರಾಮದ ಬಂಡಿ ಬೀದಿಯ ನಿವಾಸಿ ಎಸ್. ನಂಜುಂಡಸ್ವಾಮಿ (66) ಬುಧವಾರ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.



ಮೃತರು ಪತ್ನಿ, ಓರ್ವ ಪುತ್ರಿ, ಓರ್ವ ಪುತ್ರ, ಹಾಗೂ ಸಹೋದರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಅವರ ಜಮೀನಿನಲ್ಲಿ ಜರುಗಿತು ಎಂದು ಕುಟುಂಬಸ್ಥರು ತಿಳಿಸಿದರು.

# ಅರಣ್ಯ, ವನ್ಯಜೀವಿ ಸಂರಕ್ಷಣೆಗೆ ಪ್ರತಿಯೊಬ್ಬರು ಶ್ರಮಿಸಿ



ಚಾಮರಾಜನಗರ, ಅ.4– ಭೂಮಿಯಲ್ಲಿರುವ ಎಲ್ಲಾ ಜೀವಸಂಕುಲಗಳಿಗೂ ಬದುಕುವ ಸಮಾನಾವಕಾಶ ಇರುವುದರಿಂದ ಅರಣ್ಯ ಸಂರಕ್ಷಣೆಗೆ ಪ್ರತಿಯೊಬ್ಬರು ತಮ್ಮದೇ ಆದ ಕೊಡುಗೆ ನೀಡುವಂತೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಸಲಹೆ ನೀಡಿದ್ದಾರೆ.

ನಗರದ ಜೆ.ಎಚ್. ಪಟೇಲ್ ಸಭಾಂಗಣದಲ್ಲಿಂದು ಬಿ.ಆರ್.ಟಿ. ಹುಲಿ ಸಂರಕ್ಷಿತ ಪ್ರದೇಶ ವತಿಯಿಂದ ಹಮ್ಮಿಕೊಳ್ಳಲಾಗಿದ್ದ 69ನೇ ವನ್ಯಜೀವಿ ಸಪ್ತಾಹ (ಅಕ್ಟೋಬರ್ 2ರಿಂದ 8ರವರೆಗೆ) ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವನ್ಯಜೀವಿ ಸಪ್ತಾಹ ಬಹಳ ಅರ್ಥಪೂರ್ಣ ಕಾರ್ಯಕ್ರಮವಾಗಿದೆ. ಚಾಮರಾಜನಗರ ಶೇ. 50ರಷ್ಟು ಅರಣ್ಯ ಪ್ರದೇಶ ಹೊಂದಿರುವ ನೈಸರ್ಗಿಕ ಸಂಪದ್ಭರಿತ ಜಿಲ್ಲೆಯಾಗಿದೆ. ಹೆಚ್ಚಿನ ಹುಲಿ, ಆನೆಗಳಿರುವ ಕಾಡುಗಳನ್ನು ಜಿಲ್ಲೆ ಹೊಂದಿದೆ. ಇದು ಹೆಮ್ಮೆಯ ವಿಷಯ. ದೇಶದ ಗಡಿಯನ್ನು ಯೋಧರು ಕಾಯುವಂತೆ ಕಾಡನ್ನು ಕಾಯುವಲ್ಲಿ ಅರಣ್ಯ ರಕ್ಷಕರ ಪಾತ್ರ ಪ್ರಮುಖವಾಗಿದೆ. ಕಾಡಿದ್ದರೆ ಮಳೆ, ಮಳೆಯಿದ್ದರೆ ಬೆಳೆ ಆಗಿರುವುದರಿಂದ ಅರಣ್ಯ ಸಂರಕ್ಷಣೆ ಎಲ್ಲರ ಕರ್ತವ್ಯವಾಗಿದೆ ಎಂದು ಜಿಲ್ಲಾಧಿಕಾರಿಯವರು ತಿಳಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆನಂದ್ ಪ್ರಕಾಶ್ ಮೀನಾ ಅವರು, ಮಾತನಾಡಿ ವನ್ಯಜೀವಿ ಸಪ್ತಾಹವನ್ನು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಜನ್ಮದಿನದಿಂದ ಹಮ್ಮಿಕೊಳ್ಳಲಾಗಿದೆ. ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಅರಣ್ಯ ಸಂರಕ್ಷಣೆಯ ಮಹತ್ವವನ್ನು ತಿಳಿಸಬೇಕು ಎಂದರು.

ವನ್ಯಜೀವಿ ಮಂಡಳಿಯ ಸದಸ್ಯರಾದ ಜಿ. ಮಲ್ಲೇಶಪ್ಪ ಅವರು ಮಾತನಾಡಿ, ಅಪಾರ ನೈಸರ್ಗಿಕವಾಗಿ ಸಂಪತ್ತನ್ನು ಜಿಲ್ಲೆ ಹೊಂದಿದೆ. 1972ರಲ್ಲಿ ಸರ್ಕಾರವು ಘೋಷಿಸಿದ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಬಿ.ಆರ್.ಟಿ ಕೂಡ ಒಂದಾಗಿದೆ. ಬಿ.ಆರ್.ಟಿ. ಅರಣ್ಯ ಪ್ರದೇಶದಲ್ಲಿ ಕುರುಚಲು, ನಿತ್ಯಹರಿದ್ವರ್ಣ, ಅರೆ ನಿತ್ಯಹರಿದ್ವರ್ಣ, ಶೋಲಾ ಸೇರಿದಂತೆ 7 ಬಗೆಯ ಕಾಡುಗಳಿವೆ. ಅರಣ್ಯ ಸಂರಕ್ಷಣೆಯ ಅರಿವು ಮೂಡಿಸಲು ಮಕ್ಕಳಿಗೆ ಚಿಣ್ಣರ ವನದರ್ಶನ ಕಾರ್ಯಕ್ರಮವನ್ನು 2011ರಿಂದ ಹಮ್ಮಿಕೊಳ್ಳಲಾಗುತ್ತಿದೆ. ಅರಣ್ಯ ಸಂರಕ್ಷಣೆಗೆ ಇಲಾಖೆಗೆ ಎಲ್ಲರೂ ಸಹಕಾರ ನೀಡಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶದ ಅರಣ್ಯ ಸಂರಕ್ಷಣಾಧಿಕಾರಿ ದೀಪಾ ಜೆ. ಕಂಟ್ರಾಕ್ಟರ್ ಅವರು ಮಾತನಾಡಿ, ಹಸಿರೇ ಉಸಿರಾಗಿರುವುದರಿಂದ ಅರಣ್ಯ, ವನ್ಯಜೀವಿ ಸಂರಕ್ಷಣೆ ಇಂದು ಅನಿವಾರ್ಯವಾಗಿದೆ. ಪ್ರಾಣಿಗಳು ಆಹಾರ ಅರಸಿ ನಾಡಿಗೆ ಬರುತ್ತವೆ. ಮಾನವ–ಕಾಡುಪ್ರಾಣಿಗಳ ಸಂಘರ್ಷ ತಡೆಯಲು ಹೆಚ್ಚಾಗಿ ಅರಣ್ಯಗಳನ್ನು ಬೆಳೆಸಬೇಕು. ಅರಣ್ಯ ಒತ್ತುವರಿ ತಡೆಯಬೇಕು. ಮುಂದಿನ ಪೀಳಿಗೆಗೆ ಕಾಡುಗಳನ್ನು ಉಳಿಸುವ ಸಲುವಾಗಿ ಅರಣ್ಯ ಸಂರಕ್ಷಣೆ ಕುರಿತ ಹಲವಾರು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ ಎಂದು ತಿಳಿಸಿದರು.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸುರೇಶ್, ಇತರೆ ಅರಣ್ಯಾಧಿಕಾರಿಗಳು, ಸಿಬ್ಬಂದಿ, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ವೇದಿಕೆ ಕಾರ್ಯಕ್ರಮಕ್ಕೂ ಮೊದಲು ನಗರದ ಗುಂಡ್ಲುಪೇಟೆ ವೃತ್ತದಲ್ಲಿರುವ ಬಿ.ಆರ್.ಟಿ. ಹುಲಿ ಸಂರಕ್ಷಿತ ಪ್ರದೇಶ ಕಚೇರಿಯಲ್ಲಿ 69ನೇ ವನ್ಯಜೀವಿ ಸಪ್ತಾಹ ಜಾಥಾಗೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಚಾಲನೆ ನೀಡಿದರು.

ಬಿ.ಆರ್.ಟಿ. ಹುಲಿ ಸಂರಕ್ಷಿತ ಪ್ರದೇಶ ಕಚೇರಿಯಿಂದ ಆರಂಭವಾದ ಜಾಗೃತಿ ಜಾಥಾ ನಗರದ ಬಿ. ರಾಚಯ್ಯ ಜೋಡಿ ರಸ್ತೆಯಲ್ಲಿ ಸಾಗಿ ಜಿಲ್ಲಾಡಳಿತ ಭವನದಲ್ಲಿ ಅಂತ್ಯಗೊಂಡಿತು. ಜಾಥಾದಲ್ಲಿ ಅಧಿಕಾರಿಗಳು, ವಿವಿಧ ಶಾಲಾ ಮಕ್ಕಳು, ಕಾಲೇಜು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



## ತಮ್ಮಡಹಳ್ಳಿಯಲ್ಲಿ ಗುಂಪು–ಘರ್ಷಣೆ

- ಎರಡು ಗುಂಪಿನ 8 ಮಂದಿ ಬಂಧನ
- ಗ್ರಾಮದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್

ಚಾಮರಾಜನಗರ, ಅ.4– ತಾಲೂಕಿನ ತಮ್ಮಡಹಳ್ಳಿಯಲ್ಲಿ ಎರಡು ಗುಂಪುಗಳ ನಡುವೆ ಮಂಗಳವಾರ ರಾತ್ರಿ ಘರ್ಷಣೆ ಸಂಭವಿಸಿದೆ.

ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಎರಡೂ ಗುಂಪುಗಳ ತಲಾ ನಾಲ್ವರನ್ನು ಬಂಧಿಸಿದ್ದಾರೆ. ಬಂಧಿತರಲ್ಲಿ ಒಬ್ಬ ಬಾಲಕನಾಗಿರುವುದರಿಂದ ಆತನನ್ನು ಬಾಲಮಂದಿರಕ್ಕೆ ಕಳುಹಿಸಲಾಗಿದೆ. ಫ್ಲೆಕ್ಸ್ ವಿಚಾರಕ್ಕೆ ಸಂಬಂಧಿಸಿದಂತೆ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಒಂದು ಗುಂಪು ಚಿಕ್ಕತಾಯಮ್ಮ ಹಬ್ಬ ಆಚರಿಸುತ್ತಿದ್ದ ಸಂದರ್ಭದಲ್ಲಿ ಘಟನೆ ನಡೆದಿದೆ. ಅರ್ಧ ಗಂಟೆ ವಿದ್ಯುತ್ ಪೂರೈಕೆ ಸ್ಥಗಿತಗೊಂಡಿದ್ದ ಸಂದರ್ಭದಲ್ಲಿ ದುಷ್ಕರ್ಮಿಗಳು ಮನೆಗಳಿಗೆ ಕಲ್ಲು ತೂರಾಟ ನಡೆಸಿದ್ದಾರೆ.

**ಗ್ರಾಮದಲ್ಲಿ ಬಂದೋಬಸ್ತ್:** ಘಟನೆಗೆ ಸಂಬಂಧಿಸಿದಂತೆ ಚಾಮರಾಜನಗರ ಗ್ರಾಮಾಂತರ ಪೊಲೀಸರು ಹಲವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದು, ಎಂಟು ಮಂದಿಯನ್ನು ಬಂಧಿಸಿದ್ದಾರೆ. ಗ್ರಾಮದಲ್ಲಿ ಪೊಲೀಸರನ್ನು ನಿಯೋಜಿಸಿ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿದೆ.

## ಮರಕ್ಕೆ ಬೈಕ್ ಡಿಕ್ಕಿ: ಯುವಕ ಸಾವು

ಯಳಂದೂರು, ಅ.4– ಬೈಕ್‌ನಲ್ಲಿ ತೆರಳುತ್ತಿದ್ದ ಯುವಕ ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ಆತ ಸ್ಥಳದಲ್ಲಿಯೇ ಮೃತಪಟ್ಟಿರುವ ಘಟನೆ ತಾಲೂಕಿನ ಗುಂಬಳ್ಳಿ ಬಳಿ ನಡೆದಿದೆ. ತಾಲೂಕಿನ ಕೃಷ್ಣಾಪುರ ಗ್ರಾಮದ ಮಹೇಶ್(24) ಮೃತ ದುರ್ದೈವಿ. ಈತ ಗುಂಬಳ್ಳಿ ಬಳಿಯ ಬಿಳಿಗಿರಿರಂಗನಬೆಟ್ಟಕ್ಕೆ ಹೋಗುವ ರಸ್ತೆಯಲ್ಲಿ ತೆರಳುತ್ತಿದ್ದಾಗ ನಿಯಂತ್ರಣ ತಪ್ಪಿ ಬೈಕ್ ಮರವೊಂದಕ್ಕೆ ಡಿಕ್ಕಿ ಹೊಡೆದಿದೆ. ಇದರಿಂದ ಯುವಕ ಸ್ಥಳದಲ್ಲಿಯೇ ಅಸುನೀಗಿದ್ದಾನೆ.



ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಯಳಂದೂರು ಠಾಣೆ ಪೊಲೀಸರು ಮೃತದೇಹದ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಹಸ್ತಾಂತರಿಸಿದರು. ಈ ಸಂಬಂಧ ಯಳಂದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮಹೇಶ್ ಎಳನೀರು ಕೀಳುವ ಕೆಲಸ ಮಾಡುತ್ತಿದ್ದು ಇದರ ಜೊತೆಗೆ ರೀಲ್ಸ್ ಮಾಡುವ ಹವ್ಯಾಸ ಬೆಳೆಸಿಕೊಂಡಿದ್ದರು. ಡ್ಯಾನ್ಸ್, ಸ್ಟಂಟ್‌ಗಳನ್ನು ರೀಲ್ಸ್ ಮಾಡಿ ಗಮನ ಸೆಳೆಯುತ್ತಿದ್ದರು.

# ಎಲ್ಲಾ ಅಸ್ಪತ್ರೆಗಳಲ್ಲೂ ಚಿಕಿತ್ಸೆ ದರದ ಪಟ್ಟಿ ಪ್ರದರ್ಶನ ಮಾಡಬೇಕು



ಮೈಸೂರು, ಅ.4– ಜಿಲ್ಲೆಯ ಎಲ್ಲಾ ಆಸ್ಪತ್ರೆಗಳಲ್ಲಿ ಪ್ರತಿಯೊಂದು ಚಿಕಿತ್ಸೆಯ ದರದ ಪಟ್ಟಿಯನ್ನು ಪ್ರದರ್ಶಿಸಬೇಕು. ಕೆಪಿಎಂಇ ಕಾಯ್ದೆ ಅನ್ವಯ ಅಷ್ಟೇ ಹಣವನ್ನು ಮಾತ್ರ ಪಡೆಯಬೇಕು ಜಿಲ್ಲಾಧಿಕಾರಿ ಕೆ.ವಿ.ರಾಜೇಂದ್ರ ತಿಳಿಸಿದರು.

ಇಂದು ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಆರೋಗ್ಯ ಇಲಾಖೆಯ ಜಿಲ್ಲಾ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಖಾಸಗಿ ಆಸ್ಪತ್ರೆಗಳಲ್ಲಿ ಹೆಚ್ಚಿನ ದರ ವಿಧಿಸುವ ಕುರಿತು ದೂರುಗಳು ಬರುತ್ತಿವೆ. ಜನರು ಚಿಕಿತ್ಸಾ ವೆಚ್ಚದ ಅರಿವು ಇರದೆ ಚಿಕಿತ್ಸೆ ಪಡೆದು ನಂತರ ಹಣ ಭರಿಸಲು ಪರದಾಡುತ್ತಾರೆ ಎಂದರು.

ಕೆಪಿಎಂಇ ಅಕ್ಟ್ ಅಡಿ ವೈದ್ಯರ ನಿರ್ಲಕ್ಷದ ಕುರಿತು ಬಂದಿರುವ ದೂರುಗಳ ಕುರಿತು ದೂರುದಾರರು ಹಾಗೂ ವೈದ್ಯರಿಂದ ಜಿಲ್ಲಾಧಿಕಾರಿಗಳು ಮಾಹಿತಿ ಪಡೆದುಕೊಂಡರು. ದೂರುದಾರರ ಮನವಿಯ ಮೇರೆಗೆ ಈ ಪ್ರಕರಣಗಳನ್ನು ಕರ್ನಾಟಕ ಮೆಡಿಕಲ್ ಕೌನ್ಸಿಲ್‌ಗೆ ಶಿಫಾರಸ್ಸು ಮಾಡುವುದಾಗಿ ತಿಳಿಸಿದರು. ಕನ್ಸಲ್ಟ್ ಫಾರಂಗಳು ರೋಗಿಗಳಿಗೆ ಹಾಗೂ ಸಂಬಂಧಿಸಿದವರಿಗೆ ಅರ್ಥವಾಗುವ ಭಾಷೆಯಲ್ಲಿ ಸರಳವಾಗಿ ಇರಬೇಕು ಸೂಚನೆ ನೀಡಿದರು.

ಖಾಸಗಿ ಆಸ್ಪತ್ರೆಗಳ ನೋಂದಣಿಗೆ ಕೆಪಿಎಂಇ ಆನ್‌ಲೈನ್ ಪೋರ್ಟಲ್ ನಲ್ಲಿ ಬಂದಿರುವ ಅರ್ಜಿ ಗಳನ್ನು ಅ.10 ರೊಳಗೆ ವಿಲೇವಾರಿ ಮಾಡಬೇಕು. ಜಿಲ್ಲೆಯಲ್ಲಿ ಮಕ್ಕಳ ಲಿಂಗಾನುಪಾತ ಕಡಿಮೆ ಆಗುತ್ತಿದೆ. ಸ್ಕ್ಯಾನಿಂಗ್ ಸೆಂಟರ್‌ಗಳಲ್ಲಿ ಭ್ರೂಣ ಲಿಂಗ ಪತ್ತೆ ನಡೆಯುವ ಸಾಧ್ಯತೆ ಇರುತ್ತದೆ. ಆದ್ದರಿಂದ ಟಿಹೆಚ್‌ಓಗಳು ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು ಎಂದು ಸೂಚನೆ ನೀಡಿದರು.

ಇಂದ್ರ ಧನುಷ್ 5.0 ಚಿಕಿತ್ಸೆಯನ್ನು 0–5 ವರ್ಷದ ಮಕ್ಕಳಿಗೆ ಶೇಕಡಾ 100 ರಷ್ಟು ಮಕ್ಕಳಿಗೆ ನೀಡಬೇಕು. ತಾಯಿ ಮಕ್ಕಳ ಮರಣ ದರವನ್ನು ಕಡಿಮೆ ಮಾಡಬೇಕು ಎಂದು ಸೂಚನೆ ನೀಡಿದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆಎಂ.ಗಾಯತ್ರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಕುಮಾರಸ್ವಾಮಿ, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಜಯಂತ್ ಸೇರಿದಂತೆ ಆರೋಗ್ಯ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

## ಜಾತಿಗಣತಿ ವರದಿ ಬಿಡುಗಡೆ

ವೀರಶೈವ ಮತ್ತು ಒಕ್ಕಲಿಗ ಸಮುದಾಯಗಳು ಕ್ರಮವಾಗಿ 4–5ನೇ ಸ್ಥಾನಗಳನ್ನು ಹಂಚಿಕೊಂಡಿವೆ ಎಂಬ ಮಾಹಿತಿ ಇತ್ತು. ಸೋರಿಕೆಯಾದ ಬಳಿಕ ವರದಿಯ ಬಗ್ಗೆ ಅಪಸ್ವರಗಳು ಕೇಳಿಬಂದವು. ವರದಿ ಸಿದ್ದಗೊಂಡ ನಂತರ ಸಿದ್ದರಾಮಯ್ಯ, ಕುಮಾರಸ್ವಾಮಿ, ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಸೇರಿದಂತೆ ನಾಲ್ವರು ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದ್ದಾರೆ. ಆದರೆ, ಇವರ್‍ಯಾರು ವರದಿ ಸ್ವೀಕರಿಸಿ ಜನರ ಮುಂದಿಡಲಿಲ್ಲ.

ಕುಮಾರಸ್ವಾಮಿ ಆಡಳಿತದಲ್ಲಿ ವರದಿ ತಲುಪಿಸಲು ಅಂದಿನ ಅಯೋಗದ ಅಧ್ಯಕ್ಷರು ಮುಂದಾಗಿದ್ದರು. ಆದರೆ, ವರದಿಗೆ ಕಾರ್ಯದರ್ಶಿ ಸಹಿ ಹಾಕಿರಲಿಲ್ಲ. ಅಂತಹ ವರದಿಯನ್ನು ಸ್ವೀಕರಿಸಲು ಮುಂದಾಗಲಿಲ್ಲ. ಇದೀಗ ಸಿದ್ದರಾಮಯ್ಯ ಅವರು ತಮ್ಮ ಮೊದಲ ಆಡಳಿತಾವಧಿಯಲ್ಲಿ ನಡೆಸಿದ ಸಮೀಕ್ಷಾ ವರದಿಯನ್ನು ಈತ ಮತ್ತೆ ತಮ್ಮ ಸರ್ಕಾರದಿಂದ ಪಡೆದು ವರದಿಯನ್ನು ಜನರ ಮುಂದಿಡಲು ತೀರ್ಮಾನಿಸಿದ್ದಾರೆ. ವರದಿ ಬಹಿರಂಗಗೊಂಡರೆ, ಕಾಂಗ್ರೆಸ್ ಪಕ್ಷಕ್ಕೆ ಲಾಭವಾಗಲಿದೆ ಎಂಬ ವಿಚಾರ ಆ ಪಕ್ಷದ ಪಡಸಾಲೆಯಲ್ಲಿ ಕೇಳಿಬರುತ್ತಿದೆ.

ಈಗಾಗಲೇ ಗ್ಯಾರಂಟಿ ಅನುಷ್ಠಾನದ ಮೂಲಕ ಲೋಕಸಭೆಯಲ್ಲಿ ಭರ್ಜರಿ ವಿಜಯ ಸಾಧಿಸಬಹುದು ಎಂಬ ಲೆಕ್ಕಾಚಾರ ಇಟ್ಟುಕೊಂಡಿರುವ ಆ ಪಕ್ಷದ ಮುಖಂಡರು ಕಾಂತರಾಜ್ ವರದಿ ಬಹಿರಂಗಗೊಂಡರೆ ನಮಗೆ ಹಿಂದುಳಿದ ವರ್ಗಗಳ ಮತ ಗಟ್ಟಿಯಾಗಲಿದೆ ಎಂಬ ಲೆಕ್ಕಾಚಾರದಲ್ಲಿದ್ದಾರೆ. ಪ್ರಚಂಡ ಬಹುಮತ ಗಳಿಸಿರುವ ಕಾಂಗ್ರೆಸ್ ಸರ್ಕಾರ ವರದಿಯನ್ನು ಸ್ವೀಕರಿಸಿ ನಂತರ ಸಂಪುಟ ಸಭೆಯ ಮುಂದಿಟ್ಟು ಬಹಿರಂಗ ಪಡಿಸುವ ಆಲೋಚನೆಯಲ್ಲಿದೆ. ಸಾಧ್ಯವಾದರೆ ಬೆಳಗಾವಿಯಲ್ಲಿ ಜರುಗಲಿರುವ ವಿಧಾನಮಂಡಲದ ಅಧಿವೇಶನದಲ್ಲಿ ವರದಿ ಮಂಡಿಸಿ ಚರ್ಚೆಗೆ ಅವಕಾಶ ಕಲ್ಪಿಸಲು ಮುಖ್ಯಮಂತ್ರಿ ಚಿಂತಿಸಿದ್ದಾರೆ ಎನ್ನಲಾಗಿದೆ.

ಈ ವರದಿಯಿಂದ ಬಿಜೆಪಿ–ಜೆಡಿಎಸ್‌ಗೆ ಲಾಭದಾಯಕವಾಗುವುದಿಲ್ಲ. ಕಾಂಗ್ರೆಸ್‌ಗೆ ದೊಡ್ಡ ತಿರುವು ದೊರೆಯಲಿದೆ ಎಂಬ ಲೆಕ್ಕಾಚಾರದಲ್ಲಿ ವರದಿಯನ್ನು ಸ್ವೀಕರಿಸಿ ಬಹಿರಂಗಪಡಿಸಲು ಕಾತುರವಾಗಿದೆ. ಜಾತಿಗಣತಿಯನ್ನು ಕೇಂದ್ರ ಸರ್ಕಾರವೇ ಮಾಡಬೇಕು. ರಾಜ್ಯ ಸರ್ಕಾರಗಳಿಗೆ ಅಧಿಕಾರವಿಲ್ಲ. ಒಂದು ವೇಳೆ ಜಾತಿಗಣತಿ ಮಾಡಿದರೂ ಅಂತಹ ವರದಿಗಳಿಗೆ ಕಾನೂನು ಬದ್ಧ ಮನ್ನಣೆ ಸಿಗುವುದಿಲ್ಲ.

ಬಿಹಾರದಲ್ಲಿ ಬಿಡುಗಡೆಯಾಗಿರುವ ಜಾತಿ ಗಣತಿಯನ್ನು ವಿರೋಧ ಮಾಡಿರುವ ಪ್ರಧಾನಿ ನರೇಂದ್ರ ಮೋದಿ ಆ ಸರ್ಕಾರದ ವಿರುದ್ಧ ಕಿಡಿ ಕಾರಿದ್ದಾರೆ. ಕಾಂಗ್ರೆಸ್ ಜಾತಿಗಣತಿ ಮಾಡಿ ಹಿಂದು ಹಾಗೂ ಅಲ್ಪ ಸಂಖ್ಯಾತರನ್ನು ಪ್ರತ್ಯೇಕ ಮಾಡಿದ್ದರು. ಇದೀಗ ಹಿಂದೂಗಳನ್ನೇ ವಿಭಜಿಸಲು ಹುನ್ನಾರ ನಡೆಸಿದ್ದಾರೆ ಟೀಕಿಸಿದ್ದಾರೆ.

## ರಾಜ್ಯಕ್ಕೆ ಕೇಂದ್ರ ತಂಡ

ನಾಳೆ ಬೆಂಗಳೂರಿನಿಂದ ಹುಬ್ಬಳಿಗೆ ತೆರಳಲಿದ್ದು, ಅಕ್ಟೋಬರ್ 6 ರಂದು ಗದಗ ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ, ಅಕ್ಟೋಬರ್ 7ರಂದು ವಿಜಯನಗರ, ಬಳ್ಳಾರಿ ಜಿಲ್ಲೆಗಳ ಬರ ಅಧ್ಯಯನ ಕೈಗೊಂಡು ಅಕ್ಟೋಬರ್ 8 ರಂದು ಬೆಂಗಳೂರಿಗೆ ವಾಪಾಸ್ಸಾಗಲಿದೆ.

ಕೇಂದ್ರ ಜಲ ಆಯೋಗದ ನಿರ್ದೇಶಕರಾದ ಅಶೋಕ್ ಕುಮಾರ್ .ವಿ ಇವರ ನೇತೃತ್ವದ ಮೂರನೇ ತಂಡದಲ್ಲಿ ಎಂ.ಎನ್ ಸಿ.ಎಫ್ ಸಿ ಯ ಉಪ ನಿರ್ದೇಶಕರಾದ ಕರಣ್ ಚೌಧರಿ, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಉಪ ಕಾರ್ಯದರ್ಶಿ ಸಂಗೀತ್ ಕುಮಾರ್ ಹಾಗೂ ರಾಜ್ಯದ ಪ್ರಕೃತಿ ವಿಕೋಪ ನಿರ್ವಹಣಾ ಕೇಂದ್ರದ ಹಿರಿಯ ಸಲಹೆಗಾರ ಡಾ. ಶ್ರೀನಿವಾಸ ರೆಡ್ಡಿ ಇರಲಿದ್ದಾರೆ. ಈ ತಂಡವು ಅಕ್ಟೋಬರ್ 6 ರಂದು ಚಿಕ್ಕಬಳ್ಳಾಪುರ, ತುಮಕೂರು ಜಿಲ್ಲೆಗಳ ಪ್ರವಾಸ ನಡೆಸಿ ಚಿತ್ರದುರ್ಗ ವಾಸ್ತವ್ಯ ಹೂಡಲಿದೆ. ಅಕ್ಟೋಬರ್ 7ರಂದು ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆ ಪ್ರವಾಸ ನಡೆಸಿ ಬೆಂಗಳೂರಿಗೆ ಮರಳಲಿದೆ. ಅಕ್ಟೋಬರ್ 8 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬರ ಪರಿಸ್ಥಿತಿ ಅಧ್ಯಯನ ಕೈಗೊಳ್ಳಲಿದೆ. ಮೂರು ತಂಡಗಳು ಅಕ್ಟೋಬರ್ 8 ರಂದು ಬೆಂಗಳೂರು ಆಗಮಿಸಿ ಅಕ್ಟೋಬರ್ 9 ರಂದು ಬೆಂಗಳೂರಿನಲ್ಲಿ ಮತ್ತೊಮ್ಮೆ ಸ್ಥಳೀಯ ಅಧಿಕಾರಿಗಳಿಂದ ಸಂಕ್ಷಿಪ್ತ ವಿವರಣೆ ಪಡೆದು ದೆಹಲಿಗೆ ಮರಳಲಿವೆ.

## ಹೊಸ ಶಿಕ್ಷಣ ನೀತಿಗಾಗಿ ಸಮಿತಿ ರಚನೆ

ಕಾಲೇಜುಗಳಲ್ಲಿ ಮನಸೋ ಇಚ್ಚೆ ಸೀಟುಗಳನ್ನು ಹೆಚ್ಚಳ ಮಾಡುವುದಕ್ಕೆ ಕಡಿವಾಣ ಹಾಕಲಾಗುವುದು. ಇಲ್ಲದಿದ್ದರೆ ಗ್ರಾಮೀಣ ಭಾಗದಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಶಿಕ್ಷಣ ದೊರೆಯುವುದಿಲ್ಲ. ಹಳೆಯ ಎಂಜಿನಿಯರ್ ಕಾಲೇಜುಗಳು ಸೀಟುಗಳ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುತ್ತಿವೆ. ಆದರೆ ಅದಕ್ಕೆ ತಕ್ಕಂತೆ ಪ್ರಯೋಗಾಲಯ, ಬೋಧಕ ಸಿಬ್ಬಂದಿ ನೇಮಕ ಇರುವುದಿಲ್ಲ. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ ಆನ್‌ಲೈನ್ ಮೂಲಕ ಪರಿಶೀಲನೆ ನಡೆಸಿ ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳುವ ಷರತ್ತಿನೊಂದಿಗೆ ಅನುಮೋದನೆ ನೀಡುತ್ತದೆ. ಆ ನ್ಯೂನ್ಯತೆಗಳ ಬಗ್ಗೆ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್‌ಗೂ ಪತ್ರ ಬರೆಯಲಾಗಿದೆ. ಯುಜಿಸಿಗೂ ಪತ್ರ ಬರೆಯಲಾಗುವುದು. ತಾಂತ್ರಿಕ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಕಾನೂನು ತಿದ್ದುಪಡಿ ತರಲು ಪರಿಶೀಲಿಸಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

## ಬಿಜೆಪಿ ಸತ್ಯಶೋಧನಾ ತಂಡ ಭೇಟಿ

ರಚಿಸಿದ್ದು, ಇದು ಗುರುವಾರ ಬೆಳಿಗ್ಗೆ 11.00 ಗಂಟೆಗೆ ಪೀಡಿತ ಪ್ರದೇಶಕ್ಕೆ ಭೇಟಿ ನೀಡಲಿದೆ ಎಂದು ಕರ್ನಾಟಕ ಎಂದು ಬಿಜೆಪಿ ಪ್ರಕಟಣೆಯಲ್ಲಿ ತಿಳಿಸಿದೆ.

ಕಟೀಲ್ ನೇತೃತ್ವದ ಸತ್ಯಶೋಧನಾ ತಂಡದಲ್ಲಿ ಮಾಜಿ ಉಪಮುಖ್ಯಮಂತ್ರಿಗಳಾದ ಕೆ.ಎಸ್.ಈಶ್ವರಪ್ಪ, ಸಿ.ಎನ್.ಅಶ್ವಥ್ ನಾರಾಯಣ್, ಮಾಜಿ ಸಚಿವ ಆರಗ ಜನೇಂದ್ರ, ಶಿವಮೊಗ್ಗ ಸಂಸದ ಬಿ.ವೈ.ರಾಘವೇಂದ್ರ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಎಂ.ಎಲ್.ಸಿ ಎನ್. ರವಿಕುಮಾರ್, ಶಾಸಕ ಚನ್ನಬಸಪ್ಪ, ಎಂಎಲ್‌ಸಿಗಳಾದ ಎಸ್.ರುದ್ರೇಗೌಡ, ಡಿ.ಎಸ್. ಅರುಣ್ ಮತ್ತು ಭಾರತಿ ಶೆಟ್ಟಿ ತಂಡದಲ್ಲಿದ್ದಾರೆ.

## ನಂಬರ್ ಪ್ಲೇಟ್ ವಿರುದ್ಧ ಕಾರ್ಯಾಚರಣೆ

ಕರೆದೊಯ್ದು ಪ್ರಕರಣ ದಾಖಲಿಸಿದ ಪೊಲೀಸರು ಬೈಕ್ ಅನ್ನು ವಶಪಡಿಸಿಕೊಂಡರು. 1989ರ ಕೇಂದ್ರ ಮೋಟಾರು ವಾಹನಗಳ ಕಾಯ್ದೆ 50 ಮತ್ತು ಎಸ್1 ರನ್ವಯ ವಾಹನಗಳ ನಂಬರ್ ಪ್ಲೇಟ್‌ನಲ್ಲಿ ನೋಂದಣಿ ಸಂಖ್ಯೆ ಹೊರತುಪಡಿಸಿ ಬೇರೆ ಯಾವುದೇ ಸಂಖ್ಯೆ, ಚಿತ್ರ ಇರಬಾರದು. ಕಾಯ್ದೆಯಡಿ ಸೂಚಿಸಿರುವ ನಿಯಮದಂತೆ ನಂಬರ್ ಪ್ಲೇಟ್‌ಗಳನ್ನು ಅಳವಡಿಸಬೇಕು. ತಪ್ಪಿದಲ್ಲಿ ಅಂತಹವರ ವಿರುದ್ಧ ಪ್ರಕರಣ ದಾಖಲು ಮಾಡಬಹುದಾಗಿದೆ. ಅದೇ ರೀತಿ ಸೈಲೆನ್ಸರ್ ಬದಲಿಸಿಕೊಂಡು ಅತೀ ಹೆಚ್ಚು ಶಬ್ದ ಹೊರಹಾಕಿ ಓಡಾಡುತ್ತರುವ ದ್ವಿಚಕ್ರ ವಾಹನ ಹಾಗೂ ಕಾರುಗಳನ್ನು ಓಡಿಸುತ್ತಿರುವವರ ವಿರುದ್ಧವೂ ಪೊಲೀಸರು ಕಾರ್ಯಾಚರಣೆ ನಡೆಸುತ್ತಿದ್ದಾರೆ.

# ಮೈಸೂರಿನ ಎಲ್ಗಿನ್ ಫೌಂಟೇನ್ ಸರ್ಕಲ್ ಸೌಂದರ್ಯೀಕರಣ ಕಾಮಗಾರಿ ಆರಂಭ




ಮೈಸೂರು, ಅ.4 (ಆರ್‌ಕೆ)– ಮೈಸೂರಿನ ಅಶೋಕ ರಸ್ತೆಯಲ್ಲಿರುವ ಐತಿಹಾಸಿಕ ಎಲ್ಗಿನ್ ಫೌಂಟೇನ್ ಸರ್ಕಲ್ ಸೌಂದರ್ಯೀಕರಣ ಕಾಮಗಾರಿ ಕಡೆಗೂ ಆರಂಭವಾಗಿದೆ.

ಮೈಸೂರು ಮಹಾನಗರ ಪಾಲಿಕೆಯು ಎಲ್ಗಿನ್ ಫೌಂಟೇನ್ ಸರ್ಕಲ್ ಅನ್ನು ಅಭಿವೃದ್ಧಿಗೊಳಿಸಿ ಸೌಂದರ್ಯೀಕರಣದೊಂದಿಗೆ ನಿರ್ವಹಣೆ ಮಾಡಲು 3 ವರ್ಷಗಳ ಅವಧಿಗೆ ಝಡ್ ಮಾರ್ಕ್ (Z MARK) ಎಂಬ ಡೆವಲಪರ್ಸ್ ಕಂಪನಿಯೊಂದಿಗೆ ಒಡಂಬಡಿಕೆ ಮಾಡಿಕೊಂಡು ಕಾರ್ಯಾದೇಶವನ್ನೂ ನೀಡಿದೆ. ಆ ಭಾಗದ ವಾರ್ಡ್ ನಂ.27ರ ಕಾರ್ಪೊರೇಟರ್ ಮಹಮದ್ ರಫೀಕ್ ಅವರು ಆಸಕ್ತಿ ವಹಿಸಿ ಫೌಂಟನ್ ಸರ್ಕಲ್ ಅಭಿವೃದ್ಧಿ ಕುರಿತಂತೆ ಪಾಲಿಕೆಯೊಂದಿಗೆ ಚರ್ಚಿಸಿ, ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಹೊರಗಿನಿಂದ ಮೈಸೂರಿಗೆ ಬರುವ ಪ್ರವಾಸಿಗರಿಗೆ ಇಲ್ಲಿನ ಐತಿಹಾಸಿಕ, ಪಾರಂಪರಿಕ ಸ್ಮಾರಕಗಳು ಸುಂದರವಾಗಿ ಕಾಣಬೇಕೆಂಬ ಉದ್ದೇಶದಿಂದ ಕಂಪನಿಯು ಫೌಂಟೇನ್ ಸರ್ಕಲ್ ಅನ್ನು ಅಭಿವೃದ್ಧಿಗೊಳಿಸಲು ಪ್ರಾಯೋಜಕತ್ವ ವಹಿಸಿಕೊಂಡಿದ್ದು, ಈಗಾಗಲೇ ಕೆಲಸ ಪ್ರಗತಿಯಲ್ಲಿದೆ. ಇನ್ನೊಂದು ವಾರದೊಳಗಾಗಿ ಪೂರ್ಣಗೊಳಿಸಲಾಗುವುದು ಎಂದು ಝಡ್ ಮಾರ್ಕ್‌ನ ಜುಬೇರ್ ತಿಳಿಸಿದ್ದಾರೆ.


ಅದೇ ರೀತಿ ಫೈವ್‌ಲೈಟ್ ಸರ್ಕಲ್ ಹಾಗೂ ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ಗಳನ್ನು ಅಭಿವೃದ್ಧಿಗೊಳಿಸುವ ಪ್ರಸ್ತಾವನೆ ಇದೆ. ಪಾಲಿಕೆ ಕಾರ್ಯಾದೇಶ ನೀಡಿದ ತಕ್ಷಣ ಕಾಮಗಾರಿ ಆರಂಭಿಸುತ್ತೇವೆ ಎಂದರು.

## ಥ್ಯಾಂಕ್ಸ್ ಟು ಡಿಸಿ



ಮೈಸೂರು ಮಹಾನಗರ ಪಾಲಿಕೆಯು ಈ ಫೌಂಟೇನ್ ಸರ್ಕಲ್ ಅನ್ನು ನೆಲಸಮಗೊಳಿಸಿ ಅದೇ ವಿನ್ಯಾಸದಲ್ಲಿ ಹೊಸ ಫೌಂಟೇನ್ ನಿರ್ಮಿಸುವ ಪ್ರಸ್ತಾವನೆ ಇಟ್ಟಿತ್ತು. ಆದರೆ ಫೆಬ್ರವರಿಯಲ್ಲಿ ನಡೆದ ಪಾರಂಪರಿಕ ಸಂರಕ್ಷಣಾ ಉಪಸಮಿತಿ ಸಭೆಯಲ್ಲಿ ಸಮಿತಿ ಸದಸ್ಯರು ಫೌಂಟೇನ್ ಸರ್ಕಲ್ ನೆಲಸಮಗೊಳಿಸಬಾರದು. ಏಕೆಂದರೆ ಮೈಸೂರಿಗೆ ಜಯ ತಂದ ವೇಳೆ 1895ರ ನವೆಂಬರ್ 20ರಂದು ಲಾರ್ಡ್ ಎಲ್ಗಿನ್ ಭೇಟಿ ನೀಡಿದ್ದಾಗ ಎಲ್ಗಿನ್ ಫೌಂಟೇನ್ ಅನ್ನು ಅಳವಡಿಸಲಾಗಿತ್ತು ಎಂಬ ಐತಿಹಾಸಿಕ ಹಿನ್ನೆಲೆಯನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದಿದ್ದರು. ಅದಕ್ಕೆ ಸ್ಪಂದಿಸಿದ್ದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಫೌಂಟೇನ್ ನೆಲಸಮಗೊಳಿಸುವುದನ್ನು ಕೈಬಿಟ್ಟು ಈಗಿರುವ ಸ್ಥಿತಿಯಲ್ಲೇ ಅಭಿವೃದ್ಧಿ ಮಾಡಿ ಅದರ ಪಾರಂಪರಿಕ ಮೌಲ್ಯವನ್ನು ಉಳಿಸಿ ಎಂದು ಮೈಸೂರು ಮಹಾನಗರಪಾಲಿಕೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದರು. ಇದೀಗ ಝಡ್ ಮಾರ್ಕ್ ಸರ್ಕಲ್ ಅನ್ನು ಅಭಿವೃದ್ಧಿಗೊಳಿಸಿ ನಿರ್ವಹಿಸುವ ಕಾರ್ಯವನ್ನು ಕೈಗೆತ್ತಿಕೊಂಡಿದೆ.

## ನಾವು ಯಾವ ಪಾರ್ಟಿಗೆ ಹೋದರೆ ಇವರಿಗೇನು ಹೊಟ್ಟೆ ಉರಿ



**ಹಾಸನ:** ನಾವು ಯಾವ ಪಾರ್ಟಿ ಜೊತೆ ಹೊಂದಾಣಿಕೆ ಮಾಡಿಕೊಂಡರೆ ಇವರಿಗೇನು ಹೊಟ್ಟೆ ಉರಿ ಎಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಕಾಂಗ್ರೆಸ್ ಮುಖಂಡರ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ನವರು ಜಾತ್ಯಾತೀತ ನಿಲುವಿನ ಬಗ್ಗೆ ಏಷ್ಟೆಲ್ಲಾ ಮಾತನಾಡುತ್ತಾರೆ. ಆದರೆ ಮುಸಲ್ಮಾನರಿಗೆ ಅವರು ನೀಡಿರುವ ಕೊಡುಗೆ ಏನು ಎಂದು ಹೇಳಲಿ? ಮುಸಲ್ಮಾನರಿಗೆ ಮೀಸಲಾತಿ, ರಾಜಕೀಯ ಅಧಿಕಾರ, ಎಲ್ಲಾ ರೀತಿಯ ಸವಲತ್ತು ಕೊಟ್ಟಿರುವುದು ಮಾಜಿ ಪ್ರಧಾನಿ ದೇವೇಗೌಡರು. ಅಲ್ಲದೇ ರಾಜ್ಯದಲ್ಲಿ ಮಹಿಳೆಯರಿಗೆ ಮೀಸಲಾತಿ ಕೊಟ್ಟವರು ಅವರು. ಈ ರಾಷ್ಟ್ರದಲ್ಲಿ ಪ್ರಧಾನಿ ಹುದ್ದೆಯನ್ನೇ ತೊರೆದು ಬಂದ ಯಾವುದಾದರೂ ನಾಯಕ ಇದ್ದರೆ ಅದು ದೇವೇಗೌಡರು ಎಂದರು.

ಕಾಂಗ್ರೆಸ್‌ನವರಿಗೆ ಭಯ ಶುರುವಾಗಿದೆ. ಜನಕ್ಕೆ ಎಷ್ಟು ದಿನ ಸುಳ್ಳು ಹೇಳಲು ಸಾಧ್ಯ. ಇವರಿಗೆ ಮುಸಲ್ಮಾನರ ಬಗ್ಗೆ ಮಾತನಾಡಲು ಯಾವ ನೈತಿಕತೆ ಇದೆ? ದೇಶದಲ್ಲಿ ಕಾಂಗ್ರೆಸ್ ಈ ಸ್ಥಿತಿಗೆ ಬರಲು ಹಲವಾರು ಕಾರಣಗಳಿವೆ. ಗಾಂಧೀಜಿ ಅವರು ಕಟ್ಟಿದ ಕಾಂಗ್ರೆಸ್ ಆಗಿ ಈಗ ಉಳಿದಿಲ್ಲ. ಒಂದಲ್ಲ ಒಂದು ದಿನ ಮುಸಲ್ಮಾನರು ಕಾಂಗ್ರೆಸ್‌ನ್ನು ತಿರಸ್ಕಾರ ಮಾಡುವ ದಿನ ಬರುತ್ತದೆ ಎಂದಿದ್ದಾರೆ.

ನಾನು ಬದುಕಿರುವವರೆಗೂ ಹಾಸನ ಜಿಲ್ಲೆಯ ಅಲ್ಪಸಂಖ್ಯಾತರ ಜೊತೆ ಇರುತ್ತೇನೆ. ಈ ಜಿಲ್ಲೆಯೊಳಗೆ ಕಾಂಗ್ರೆಸ್ ನವರು ವೀರಶೈವ ಸಮಾಜಕ್ಕೆ ಒಂದು ಸೀಟ್ ಕೊಡಲಿಲ್ಲ. ಶಾಮನೂರು ಶಿವಶಂಕರಪ್ಪ ಅವರು ಸುಮ್ಮನೆ ಏನೂ ಇಲ್ಲದೇ ಹೇಳ್ತಾರಾ? ಅವರು ಎಷ್ಟು ನೋವನ್ನು ನುಂಗಿಕೊಂಡಿದ್ದಾರೆ. ಅವರು ಮನಸ್ಸು ಮಾಡಿದ್ದರೆ ಇಷ್ಟರೊಳಗೆ ಕೇಂದ್ರ ಸಚಿವರಾಗುತ್ತಿದ್ದರು ಎಂದಿದ್ದಾರೆ.

## ಜೆಡಿಎಸ್‌ನ ಬಹುತೇಕ ಶಾಸಕರು ಬಿಜೆಪಿ ಜತೆಗಿನ ಮೈತ್ರಿಗೆ ಒಪ್ಪಿಲ್ಲ



**ಬೆಂಗಳೂರು:** ಜೆಡಿಎಸ್‌ನ ಬಹುತೇಕ ಶಾಸಕರು ಬಿಜೆಪಿ ಜತೆಗಿನ ಮೈತ್ರಿ ಒಪ್ಪಿಲ್ಲ. ನಮ್ಮ ಶಾಸಕರಲ್ಲಿ ಬಹುಪಾಲು ಮಂದಿ ಈ ವಿಚಾರದಲ್ಲಿ ನೋವಿನಲ್ಲಿದ್ದಾರೆ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಹೇಳಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ಯಾವ ಷರತ್ತುಗಳ ಆಧಾರದಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿ ನಡೆದಿದೆ ಎಂಬುದು ಯಾರಿಗೂ ಗೊತ್ತಿಲ್ಲ. ಬಹುತೇಕ ಶಾಸಕರು ಮೈತ್ರಿಯ ಪ್ರಸ್ತಾವವನ್ನು ವಿರೋಧಿಸಿದ್ದರು ಎಂದರು.

ನಿಖರವಾಗಿ ಎಷ್ಟು ಮಂದಿ ಶಾಸಕರು ಮೈತ್ರಿಯನ್ನು ವಿರೋಧಿಸಿದ್ದಾರೆ ಎಂಬುದನ್ನು ಬಹಿರಂಗಪಡಿಸಲು ನಿರಾಕರಿಸಿದ ಇಬ್ರಾಹಿಂ, 'ಬಹುತೇಕ ಶಾಸಕರು' ಎಂದಷ್ಟೇ ಉತ್ತರಿಸಿದರು. ಮೈತ್ರಿಯ ಕುರಿತು ಈವರೆಗೆ ನನ್ನ ಜತೆ ಯಾರೂ ಚರ್ಚಿಸಿಲ್ಲ. ಬಿಜೆಪಿಯ ನಾಯಕರ ಜತೆ ಸಭೆ ನಡೆಸಿ ಬಂದವರು ಯಾವ ಮಾಹಿತಿಯನ್ನೂ ನೀಡಿಲ್ಲ. ಈ ಮೈತ್ರಿ ಜೆಡಿಎಸ್‌ಗೆ ಬೇಕಾಗಿತ್ತೋ? ಅಥವಾ ಬಿಜೆಪಿಗೆ ಬೇಕಾಗಿತ್ತೋ? ಎಂಬ ಪ್ರಶ್ನೆಗೆ ಉತ್ತರವೇ ಸಿಕ್ಕಿಲ್ಲ ಎಂದರು.

ಜೆಡಿಎಸ್ ಜಾತ್ಯತೀತ ಸಿದ್ಧಾಂತ ಬಿಡುವುದಿಲ್ಲ ಎಂದು ಪಕ್ಷ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಹೇಳಿದ್ದರು. ಅದನ್ನು ಬಿಜೆಪಿ ಒಪ್ಪಿದೆಯೆ? ಸಂವಿಧಾನದ ಮೂಲ ಸ್ವರೂಪಕ್ಕೆ ಧಕ್ಕೆ ತರದಿರುವುದು, ರಾಷ್ಟ್ರೀಯ ಪೌರತ್ವ ನೋಂದಣಿ ವಿಚಾರದಲ್ಲಿ ಜೆಡಿಎಸ್ ನಿಲುವನ್ನು ಆ ಪಕ್ಷ ಒಪ್ಪಿಕೊಂಡಿದೆಯೆ? ಎಂಬ ಪ್ರಶ್ನೆಗಳು ರಾಜ್ಯದ ಜನರ ಮುಂದಿವೆ. ಆ ಬಗ್ಗೆಯೂ ಉತ್ತರಿಸಬೇಕಿದೆ ಎಂದು ಹೇಳಿದರು.

ಬಿಜೆಪಿ ಜತೆಗಿನ ಮೈತ್ರಿಯನ್ನು ಜೆಡಿಎಸ್‌ನ ಮಹಾರಾಷ್ಟ್ರ, ಕೇರಳ, ರಾಜಸ್ಥಾನ, ಗುಜರಾತ್ ರಾಜ್ಯ ಘಟಕಗಳು ವಿರೋಧಿಸಿವೆ. ಎಲ್ಲ ರಾಜ್ಯದವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಮೈತ್ರಿ ನಿರ್ಧಾರ ಕೈಗೊಳ್ಳಲಾಗಿದೆ. ಈಗ ಪಕ್ಷದ ಚಿಹ್ನೆ ಉಳಿದೀತೆ ಎಂಬ ಪ್ರಶ್ನೆಯೂ ಎದುರಾಗಿದೆ ಎಂದರು.

## 103 ಪೊಲೀಸ್ ಇನ್‌ಸ್ಪೆಕ್ಟರ್‌ಗಳ ವರ್ಗಾವರ್ಗಿ

ಮೈಸೂರು,ಅ.4(ಆರ್‌ಕೆ)–ರಾಜ್ಯಾದ್ಯಂತ ಒಂದೇ ದಿನ 103 ಪೊಲೀಸ್ ಇನ್ಸ್‌ಪೆಕ್ಟರ್‌ಗಳನ್ನು ವರ್ಗಾವಣೆ ಮಾಡಿ ಸರ್ಕಾರ ಮಂಗಳವಾರ ಆದೇಶ ಹೊರಡಿಸಿದೆ.

ಮೈಸೂರಿನ ದೇವರಾಜ ಸಂಚಾರ ಠಾಣೆಗೆ ವಿ.ಡಿ.ಮಮತಾ, ವಿಜಯನಗರ ಠಾಣೆಗೆ ಎಸ್.ಡಿ.ಸುರೇಶ್‌ಕುಮಾರ್, ಹೆಬ್ಬಾಳು ಠಾಣೆಗೆ ಎ.ಮಲ್ಲೇಶ್, ಮಹಿಳಾ ಠಾಣೆಗೆ ಜೆ.ಹೆಚ್.ಗಣೇಶ್, ಲಕ್ಷ್ಮೀಪುರಂಗೆ ಬಿ.ಎಸ್. ರವಿಶಂಕರ್, ಡಿಸಿಆರ್‌ಇಗೆ ರಾಮ್ ಕುಮಾರ್ ಸುಣಗಾರ್, ಸಿಸಿಆರ್‌ಬಿಗೆ ಮುಸ್ತಾಕ್ ಪಾಷಾ, ಸಿಸಿಬಿಗೆ ಎನ್.ಎಂ. ಪೂಣಚ್ಚ, ಕೆ.ಆರ್.ನಗರಕ್ಕೆ ಪಿ.ಪಿ. ಸಂತೋಷ್, ತಿ.ನರಸೀಪುರಕ್ಕೆ ಧನಂಜಯ, ನಂಜನಗೂಡು ಗ್ರಾಮಾಂತರಕ್ಕೆ ಎಂ.ಸುನಿಲ್‌ಕುಮಾರ್, ಬೈಲಕುಪ್ಪೆ ಸರ್ಕಲ್‌ಗೆ ಎಂ.ಕೆ.ದೀಪಕ್ ಅವರನ್ನು ವರ್ಗಾವಣೆ ಮಾಡಲಾಗಿದೆ.

ಮದ್ದೂರು ಠಾಣೆಗೆ ಎಂ.ಶಿವಕುಮಾರ್, ಮದ್ದೂರು ವೃತ್ತಕ್ಕೆ ವೆಂಕಟೇಗೌಡ, ಅರಕಲಗೂಡು ವೃತ್ತಕ್ಕೆ ಲಕ್ಕಪ್ಪ ಆರ್.ಮಸಗುಪ್ಪಿ ಸೇರಿದಂತೆ ಮಂಗಳವಾರ ಎರಡು ಆದೇಶಗಳಲ್ಲಿ 103 ಪೊಲೀಸ್ ಇನ್ಸ್‌ಪೆಕ್ಟರ್‌ಗಳನ್ನು ವರ್ಗಾವಣೆ ಮಾಡಲಾಗಿದೆ.

## ಪಿಎಂ ಸ್ವನಿಧಿ ಸಮ್ಮಾನ್ ಯೋಜನೆಗೆ ಪತ್ರಿಕಾ ವಿತರಕರ ನೋಂದಣಿ



ಮೈಸೂರು,ಅ.4–ಕೇಂದ್ರ ಸರ್ಕಾರದ ಪಿಎಂ ಸ್ವನಿಧಿ ಸಮ್ಮಾನ್ ಯೋಜನೆಯಡಿ ಪತ್ರಿಕಾ ವಿತರಕರ ನೋಂದಣಿ ಕಾರ್ಯಕ್ರಮಕ್ಕೆ ಮಾಜಿ ಶಾಸಕ ಎಸ್.ಎ. ರಾಮದಾಸ್ ಚಾಲನೆ ನೀಡಿದರು.

ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಿಎಂ ಸ್ವನಿಧಿ ಸಮ್ಮಾನ್ ಯೋಜನೆಗೆ ಸಂಬಂಧಿಸಿದಂತೆ ಪಾಲಿಕೆ ಅಭಿಯಾನದ ವ್ಯವಸ್ಥಾಪಕ ಬೋರಲಿಂಗಯ್ಯ, ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಜೆ.ಎಸ್.ಹೋಮದೇವ, ಪತ್ರಿಕಾ ವಿತರಕರ ಸಂಘದ ಕಾರ್ಯದರ್ಶಿ ಎ.ರವಿ, ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳಾದ ಶ್ರೀಕಾಂತ್, ಸಿ.ಡಿ.ಹರೀಶ್, ಸಿ. ಶಿವಣ್ಣ, ಹರಿರಾವ್, ನಂಜುಂಡಯ್ಯ, ವಿ.ವಿ. ಮಂಜು, ಸಿ.ಆರ್.ದತ್ತ ಇತರರಿದ್ದರು.

## ಕಾವೇರಿ ಹೋರಾಟಕ್ಕೆ ಜನಪರ ವೇದಿಕೆ ಬೆಂಬಲ



ಮೈಸೂರು,ಅ.4(ಜಿಎ)–ತಮಿಳುನಾಡಿಗೆ ಕಾವೇರಿ ನೀರನ್ನು ಹರಿಸುತ್ತಿರುವುದನ್ನು ಖಂಡಿಸಿ, ಮೈಸೂರಿನ ಪುರಭವನದ ಬಳಿ ಕಾವೇರಿ ಕ್ರಿಯಾ ಸಮಿತಿ ವತಿಯಿಂದ ನಡೆಯುತ್ತಿರುವ ಧರಣಿಗೆ ಕರ್ನಾಟಕ ಜನಪರ ವೇದಿಕೆ ಸಾಥ್ ನೀಡಿ ಪ್ರತಿಭಟಿಸಿದರು.

ಈ ವೇಳೆ ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಜಯಪ್ರಕಾಶ್ ಮಾತನಾಡಿ, ಕಾವೇರಿ ಸಮಸ್ಯೆ ಬಗೆಹರಿಯುವವರೆಗೂ ಸಮಿತಿ ವತಿಯಿಂದ ನಿರಂತರ ಹೋರಾಟ ನಡೆಯುತ್ತಿರುತ್ತದೆ. ಇದರೊಟ್ಟಿಗೆ ಕಾವೇರಿ ಕ್ರಿಯಾ ಸಮಿತಿ ವತಿಯಿಂದ ಪ್ರಧಾನಿ ಭೇಟಿಗೆ ಪ್ರಯತ್ನ ಮಾಡೋಣ. ಅವರ ಭೇಟಿಗೆ ಅವಕಾಶ ಸಿಕ್ಕದಿದ್ದರೆ, ಅವರ ಕಾರ್ಯದರ್ಶಿಗೆ ಮನವಿ ಸಲ್ಲಿಸಬಹುದು. ನಮ್ಮ ಹೋರಾಟಕ್ಕೆ ಪಕ್ಷಭೇದ ಮರೆತು ಎಲ್ಲರೂ ಕೈಜೋಡಿಸುತ್ತಿದ್ದಾರೆ. ಇದು ಉತ್ತಮ ಬೆಳವಣಿಗೆ ಇವರ ಸಹಕಾರದೊಂದಿಗೆ ಹೋರಾಟವನ್ನು ಬಲಪಡಿಸೋಣ ಎಂದರು. ಪ್ರತಿಭಟನೆಯಲ್ಲಿ ಸಮಿತಿಯ ಮೂಗೂರು ನಂಜುಂಡಸ್ವಾಮಿ, ಮೋಹನ್‌ಕುಮಾರ್ ಗೌಡ, ಬಾಲಕೃಷ್ಣ, ಮಹದೇವಸ್ವಾಮಿ, ಕರ್ನಾಟಕ ಜನಪದ ವೇದಿಕೆ ರಾಜ್ಯಾಧ್ಯಕ್ಷ ಸೋಮೇಗೌಡ, ಗೌರವಾಧ್ಯಕ್ಷ ಹೊನ್ನೇಗೌಡ, ನಗರಾಧ್ಯಕ್ಷ ಶ್ರೀನಿವಾಸ್ ಇದ್ದರು.



ಇಂದಿರಾ ಗಾಂಧಿ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಪಕ್ಷದ ನಿಷ್ಠಾವಂತ ಕಾರ್ಯಕರ್ತರಿಗೆ ಮುಂದಿನ ಪಾಲಿಕೆ ಚುನಾವಣೆಯಲ್ಲಿ ಹಾಗೂ ನಿಗಮ–ಮಂಡಳಿಗಳಲ್ಲಿ ಸೂಕ್ತ ಸ್ಥಾನ–ಮಾನ ನೀಡುವಂತೆ ಕೋರಲಾಯಿತು. ಈ ವೇಳೆ ಮಾಜಿ ಮೇಯರ್‌ಗಳಾದ ಬಿ.ಕೆ.ಪ್ರಕಾಶ್, ಮೋದಾಮಣಿ, ಮಾಜಿ ಉಪಮೇಯರ್ ಮಹದೇವಪ್ಪ, ನಗರ ಕಾಂಗ್ರೆಸ್ ಆಧ್ಯಕ್ಷ ಆರ್.ಮೂರ್ತಿ, ಮಾಜಿ ಕಾರ್ಪೊರೇಟರ್ ಶಿವಮಾದು, ಮುಖಂಡರಾದ ಮಂಚೇಗೌಡನಕೊಪ್ಪಲು ರವಿ, ವಿಷಕಂಠೇಗೌಡ, ರವಿ (ಡೆಲ್ಲಿ), ರಮೇಶ್ ಇನ್ನಿತರರಿದ್ದರು.

# ಹಸ್ತಪ್ರತಿಗಳ ಪತ್ತೆಗೆ ಸಂಶೋಧನೆ ಅನಿವಾರ್ಯ

### ಹಸ್ತಪ್ರತಿ ತರಬೇತಿ ಮತ್ತು ಜಾಗೃತಿ ಶಿಬಿರ ಉದ್ಘಾಟನೆಯಲ್ಲಿ ಪ್ರೊ.ಶೈಲೇಂದ್ರ ಮೋಹನ್ ಅಭಿಮತ

ಮೈಸೂರು, ಅ.4(ಎಂಟಿವೈ)–ಹಸ್ತಪ್ರತಿ ಸಂಗ್ರಹ–ಸಂರಕ್ಷಣೆ ಮತ್ತು ಅಧ್ಯಯನಕ್ಕೆ ಪ್ರಸ್ತುತ ಸಂದರ್ಭದಲ್ಲಿ ಮಹತ್ವ ನೀಡುವ ಅನಿವಾರ್ಯತೆ ಇದ್ದು, ವಿವಿಧೆಡೆ ಹುದುಗಿ ಹೋಗಿರುವ ಹಸ್ತಪ್ರತಿಗಳ ಪತ್ತೆಗೆ ಸಂಶೋಧನೆ ಕೈಗೊಳ್ಳುವ ಅಗತ್ಯವಿದೆ ಎಂದು ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕ ಪ್ರೊ. ಶೈಲೇಂದ್ರ ಮೋಹನ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು–ಹುಣಸೂರು ಮುಖ್ಯರಸ್ತೆಯಲ್ಲಿರುವ ಭಾರತೀಯ ಭಾಷಾ ಸಂಸ್ಥಾನ (ಸಿಐಐಎಲ್)ದಲ್ಲಿ ಬುಧವಾರ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ ಹಾಗೂ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಶಾಸ್ತ್ರ ವಿಭಾಗದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿರುವ ನಾಲ್ಕು ದಿನಗಳ '23ನೇ ಹಸ್ತಪ್ರತಿ ತರಬೇತಿ ಮತ್ತು ಜಾಗೃತಿ ಶಿಬಿರ'ವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ಸಂದರ್ಭದಲ್ಲಿ ಹಸ್ತಪ್ರತಿಗಳ ಸಂರಕ್ಷಣೆಗೆ ಇನ್ನಷ್ಟು ಮಹತ್ವ ನೀಡಬೇಕಾಗಿದೆ. ಸಂಶೋಧನೆ ನಡೆಸಿ, ವಿವಿಧೆಡೆ ಹುದುಗಿ ಹೋಗಿರುವ ಹಸ್ತಪ್ರತಿಗಳನ್ನು ಪತ್ತೆ ಮಾಡಿ ಸಂರಕ್ಷಿಸಬೇಕಾಗಿದೆ. ಅದಕ್ಕಾಗಿ ಸಂಶೋಧನೆ ಮಾಡುವ ಗುರುತರ ಜವಾಬ್ದಾರಿ ನಮ್ಮ ಮುಂದೆ ಇದೆ ಎಂದರು.



ಮೈಸೂರಿನ ಭಾರತೀಯ ಭಾಷಾ ಸಂಸ್ಥಾನ (ಸಿಐಐಎಲ್)ದಲ್ಲಿ ಬುಧವಾರ ಆಯೋಜಿಸಿದ್ದ ನಾಲ್ಕು ದಿನಗಳ '23ನೇ ಹಸ್ತಪ್ರತಿ ತರಬೇತಿ ಮತ್ತು ಜಾಗೃತಿ ಶಿಬಿರ'ವನ್ನು ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್ ಉದ್ಘಾಟಿಸಿದರು.

ಇದುವರೆಗೆ ಬೆಳಕಿಗೆ ಬಾರದೆ ಇರುವ ಹಸ್ತಪ್ರತಿಗಳನ್ನು ಹುಡುಕಿ ಅದರಲ್ಲಿರುವ ಜ್ಞಾನವನ್ನು ಎಲ್ಲರಿಗೂ ಪಸರಿಸಲು ಸೂಕ್ತ ಅಧ್ಯಯನ ಮತ್ತು ಸಂಶೋಧನೆಯನ್ನು ಶಾಸ್ತ್ರೀಯ ಕನ್ನಡದ ಅತ್ಯುನ್ನತ ಅಧ್ಯಯನ ಕೇಂದ್ರದ ಮೂಲಕ ಕೈಗೊಳ್ಳುವ ಅಗತ್ಯವಿದೆ. ಕನ್ನಡ ಶಾಸ್ತ್ರೀಯ ಭಾಷೆಯಾಗಿದ್ದು, 2 ಸಾವಿರ ವರ್ಷಕ್ಕಿಂತಲೂ ಹಳೆಯದಾದ ಹಸ್ತಪ್ರತಿಗಳನ್ನು ಸಂರಕ್ಷಿಸಲು ತಂತ್ರಜ್ಞಾನದ ನೆರವು ಪಡೆದುಕೊಳ್ಳುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಪ್ರೊ. ವೀರೇಶ ಬಡಿಗೇರ ಮಾತನಾಡಿ, ಜ್ಞಾನ ವಿಜ್ಞಾನ ಹಾಗೂ ಶ್ರಮ ಸಮುದಾಯಗಳ ದೊಡ್ಡ ಉತ್ಪನ್ನಗಳೇ ಹಸ್ತಪ್ರತಿಗಳಾಗಿವೆ. ಭೌತಿಕವಾಗಿ ಹಸ್ತಪ್ರತಿಗಳು ನಾಶವಾಗುವುದರಿಂದ ಅವುಗಳಲ್ಲಿರುವ ಜ್ಞಾನವನ್ನು ಉಳಿಸಿಕೊಳ್ಳುವ ಅಗತ್ಯವಿದೆ. ನಾವು ಕವಿ ಹಾಗೂ ಲಿಪಿಕಾರರನ್ನು ಅಭ್ಯಸಿಸಿದ್ದೇವೆ, ಈಗ ಹಸ್ತಪ್ರತಿಕಾರರನ್ನು ಮತ್ತು ಅವರ ಬರಹಗಳನ್ನು ಅಭ್ಯಸಿಸುವ ಅಗತ್ಯವಿದೆ. ಹಸ್ತಪ್ರತಿಗಳು ಜನಸಂಸ್ಕೃತಿಯ ದಾಖಲೆ ಮಾತ್ರವಲ್ಲದೆ, ಇತಿಹಾಸ, ಸಾಹಿತ್ಯ, ಪರಂಪರೆಯ ಜ್ಞಾನ ಭಂಡಾರವೂ ಆಗಿದೆ. ಇವುಗಳನ್ನು ನಾಶವಾಗದಂತೆ ನೋಡಿಕೊಳ್ಳಬೇಕು. ತಂತ್ರಜ್ಞಾನದ ಮೂಲಕ ಹಸ್ತಪ್ರತಿಗಳನ್ನು ಸಂರಕ್ಷಿಸಬೇಕು. ಹಸ್ತಪ್ರತಿಗಳ ಬರಹಪೂರ್ವದಲ್ಲಿ ಅವುಗಳ ತಯಾರಿ ಹೇಗಿತ್ತು ಎಂಬುದರ ಬಗ್ಗೆಯೂ ಅಧ್ಯಯನಗಳು ನಡೆಯಬೇಕು. ಹಸ್ತಪ್ರತಿಗಳಲ್ಲಿ ಅಂತರ್‌ಪಠ್ಯಗಳು ಅಡಕವಾಗಿವೆ. ಅವುಗಳ ಬಗ್ಗೆಯೂ ಸಂಶೋಧನೆಗಳು ಹೆಚ್ಚು ನಡೆಯಬೇಕು. ಕನ್ನಡದ ಸಾಧ್ಯತೆಗಳ ಬಗ್ಗೆಯೂ ಸಂವಾದ ನಡೆಯಬೇಕು. ಜ್ಞಾನವನ್ನು ಹಂಚಿಕೊಳ್ಳಬೇಕು. ಹಸ್ತಪ್ರತಿಗಳಲ್ಲಿ ಹುದುಗಿರುವ ಸತ್ಯಗಳನ್ನು ಹೊರತೆಗೆಯಲು ಈ ತರಬೇತಿ ಶಿಬಿರಗಳು ಸಹಕಾರಿಯಾಗುವುದರೊಂದಿಗೆ ಕನ್ನಡ ಭಾಷೆಯ ಹೊಸ ಸಾಧ್ಯತೆಗಳನ್ನು ಗುರುತಿಸಲು ಈ ಕಾರ್ಯಕ್ರಮ ಅತ್ಯಂತ ಮಹತ್ವದ್ದಾಗಿದೆ ಎಂದು ತಿಳಿಸಿದರು.

ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ.ರವೀಂದ್ರ ನಾಥ ಮಾತನಾಡಿ, ಕನ್ನಡ ವಿಶ್ವವಿದ್ಯಾಲಯದಲ್ಲಿ ಈಗಾಗಲೇ 5 ಸಾವಿರ ಹಸ್ತಪ್ರತಿಗಳ ಸಂರಕ್ಷಣೆ ಮಾಡಲಾಗಿದೆ. ಸಾರ್ವಜನಿಕರ ಆಸ್ತಿ ಹಾಗೂ ದೇಶದ ಸಂಪತ್ತಾದ ಹಸ್ತಪ್ರತಿಗಳ ಸೂಚಿ ರಚಿಸಲಾಗಿದೆ. ಅವುಗಳಲ್ಲಿ 78 ಕೃತಿಗಳು ವಿಶ್ವವಿದ್ಯಾಲಯದಿಂದ ಪ್ರಕಟವಾಗಿವೆ ಎಂದರು.

ಕನ್ನಡ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ. ಸುಬ್ಬಣ್ಣ ರೈ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಭಾರತೀಯ ಭಾಷಾ ಸಂಸ್ಥಾನದ ಶಾಸ್ತ್ರೀಯ ಭಾಷೆಗಳ ಸಂಯೋಜಕ ಡಾ.ಪ್ರೇಮ್‌ಕುಮಾರ್, ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ. ಎನ್.ಎಂ.ತಳವಾರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ತರಬೇತಿ ಶಿಬಿರದಲ್ಲಿ ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳು ಹಾಗೂ ಕಾಲೇಜುಗಳಿಂದ 56 ಸಂಶೋಧಕರು ಶಿಬಿರಾರ್ಥಿಗಳಾಗಿ ಭಾಗವಹಿಸಿದ್ದಾರೆ. ಆಸಕ್ತರು ಹಸ್ತಪ್ರತಿಗಳ ಪ್ರದರ್ಶನವನ್ನು ವೀಕ್ಷಿಸಬಹುದಾಗಿದೆ.

'ಕಾವೇರಿ' ನೀರಿಗಾಗಿ ಹೋರಾಟ

# ಕಬಿನಿಗೆ ಮುತ್ತಿಗೆ ಹಾಕಲೆತ್ನಿಸಿದ ಬಿಜೆಪಿ ಕಾರ್ಯಕರ್ತರ ಬಂಧನ, ಬಿಡುಗಡೆ



ಹೆಚ್.ಡಿ.ಕೋಟೆ, ಅ.4– ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ವಿರೋಧಿಸಿ ಹೆಚ್.ಡಿ.ಕೋಟೆ ತಾಲೂಕಿನ ಬೀಚನಹಳ್ಳಿ ಗ್ರಾಮದಲ್ಲಿರುವ ಕಬಿನಿ ಜಲಾಶಯಕ್ಕೆ ಮುತ್ತಿಗೆ ಹಾಕಲೆತ್ನಿಸಿದ ಹೆಚ್.ಡಿ.ಕೋಟೆ ಬಿಜೆಪಿ ಮಂಡಲದ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿ, ಬಿಡುಗಡೆ ಮಾಡಿದರು.

ಬಿಜೆಪಿ ರೈತ ಮೋರ್ಚಾ ರಾಜ್ಯ ಕಾರ್ಯದರ್ಶಿ ಡಾ.ನವೀನ್, ಜಿಲ್ಲಾಧ್ಯಕ್ಷೆ ಮಂಗಳ ಸೋಮಶೇಖರ್, ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ರಮೇಶ್ ಹಾಗೂ ಕೋಟೆ ಬಿಜೆಪಿ ಮಂಡಲ ಅಧ್ಯಕ್ಷ ಗುರುಸ್ವಾಮಿ ಅವರ ನೇತೃತ್ವದಲ್ಲಿ, ಬಿಜೆಪಿ ಮುಖಂಡರುಗಳು ಕಬಿನಿ ಕಾರ್ಯಪಾಲಕ ಅಭಿಯಂತರ ಕಚೇರಿ ಬಳಿಯಿಂದ, ಮೆರವಣಿಗೆ ಮೂಲಕ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ಕಬಿನಿ ಜಲಾಶಯದ ಮುಖ್ಯದ್ವಾರದ ಬಳಿ ಇರುವ ಹುತಾತ್ಮ ರೈತ ಗುರುಸ್ವಾಮಿ ಅವರ ಮೂರ್ತಿಗೆ ಮಾಲಾರ್ಪಣೆ ಮಾಡಿ ಜಲಾಶಯಕ್ಕೆ ನಮ್ಮನ್ನು ಬಿಡಿ ಎಂದು, ನೀರಾವರಿ ಅಧಿಕಾರಿಗಳೊಡನೆ ಹಾಗೂ ಪೊಲೀಸರೊಡನೆ ವಾಗ್ವಾದ ನಡೆಸಿದರು.

ಈ ಸಂದರ್ಭದಲ್ಲಿ ಕಬಿನಿ ಕಾರ್ಯಪಾಲಕ ಅಭಿಯಂತರರಾದ ಚಂದ್ರಶೇಖರ್, ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಜನಾರ್ಧನ್, ಬಿಜೆಪಿ ಕಾರ್ಯಕರ್ತರುಗಳ ಮನವೊಲಿಸಲು ಯತ್ನಿಸಿದರು. ಆದರೆ ಬಿಜೆಪಿ ಕಾರ್ಯಕರ್ತರು ಇದಕ್ಕೆ ಒಪ್ಪದೆ ಜಲಾಶಯಕ್ಕೆ ಮುತ್ತಿಗೆ ಹಾಕಲು ಯತ್ನಿಸಿದರು. ಈ ವೇಳೆ ಸ್ಥಳದಲ್ಲಿದ್ದ ಪೊಲೀಸರು ಬಿಜೆಪಿ ಕಾರ್ಯಕರ್ತರನ್ನು ತಡೆದು ಬಂಧಿಸಿದರು. ನಂತರ ಬೀಚನಹಳ್ಳಿ ಅತಿಥಿ ಗೃಹಕ್ಕೆ ಕರೆದು ಕೊಂಡು ಹೋಗಿ ಬಿಡುಗಡೆ ಮಾಡಿದರು.

ಬಿಡುಗಡೆ ಬಳಿಕ ಬಿಜೆಪಿ ರಾಜ್ಯ ರೈತ ಮೋರ್ಚಾ ಕಾರ್ಯದರ್ಶಿ ಡಾ: ನವೀನ್ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವು ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಜಲಾಶಯಗಳಿಂದ ತಮಿಳುನಾಡಿಗೆ ಕದ್ದುಮುಚ್ಚಿ ನೀರನ್ನು ಬಿಡುತ್ತಿದೆ. ಬಿಜೆಪಿ ಸರ್ಕಾರವು ಹಿಂದೆ ಅಸ್ತಿತ್ವದಲ್ಲಿ ಇದ್ದಾಗ ಮೇಕೆದಾಟು ಯೋಜನೆಯ ಬಗ್ಗೆ ಕಾಲ್ನಡಿಗೆ ಜಾಥವನ್ನು ಮಾಡಿದ್ದರು. ಅದು ಕಾಲ್ನಡಿಗೆಯ ಜಾಥ ಒಂದು ವಾಕಿಂಗ್ ಆಗಿತ್ತು ಇಂದು ಅವರದೇ ಸರ್ಕಾರ ಅಸ್ತಿತ್ವದಲ್ಲಿದೆ, ಆದರೂ ಸಹ ಮೇಕೆದಾಟು ಯೋಜನೆಯ ಬಗ್ಗೆ ಬಾಯಿ ಬಿಡುತ್ತಿಲ್ಲದಿರುವುದು ಹಾಸ್ಯಾಸ್ಪದ ಸಂಗತಿ ಎಂದು ಲೇವಡಿ ಮಾಡಿದರು. ಮೇಕೆದಾಟು ಜಾಥ ವೇಳೆ ರಾಜ್ಯ ಸರ್ಕಾರದ ಅನುಮತಿ ಇದ್ದರೆ ಸಾಕು, ಅನುಷ್ಠಾನ ತರಬಹುದು ಎಂದು ಹೇಳಿದ್ದ ಕಾಂಗ್ರೆಸ್ ಇಂದು ಅಧಿಕಾರದಲ್ಲಿದ್ದರೂ ಸಹ ಕಣ್ಮುಚ್ಚಿ ಕುಳಿತಿದೆ ಎಂದರು.

ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್ ಮಾತನಾಡಿ, ರಾಜ್ಯ ರೈತರನ್ನು ಎದುರಾಕಿಕೊಂಡು ನೀರನ್ನು ಇದೇ ರೀತಿ ಬಿಡುವುದನ್ನು ಮುಂದುವರಿಸಿದರೆ ಯಾವುದೇ ಕಾರಣಕ್ಕೂ ರೈತ ಕ್ಷಮಿಸಲಾರ, ರೈತ ದಂಗೆ ಏಳುವ ದಿನಗಳು ದೂರ ಇಲ್ಲ ಎಂದರು. ನಂತರ ಕಬಿನಿ ಕಾರ್ಯಪಾಲಕ ಚಂದ್ರಶೇಖರ್ ಅವರ ಮೂಲಕ ಕಬಿನಿಯಿಂದ ನೀರು ಬಿಡದಂತೆ ಮುಖ್ಯಮಂತ್ರಿಗಳಿಗೆ ಮನವಿಯನ್ನು ಸಲ್ಲಿಸಲಾಯಿತು.

ಪ್ರತಿಭಟನೆಯಲ್ಲಿ ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ರಮೇಶ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ವೆಂಕಟಸ್ವಾಮಿ, ಬಿಜೆಪಿ ಮಂಡಲ ಮಾಜಿ ಅಧ್ಯಕ್ಷ ಗಿರೀಶ್, ಶಿವರಾಜಪ್ಪ, ಮೊತ್ತ ಬಸವರಾಜಪ್ಪ, ಸತೀಶ್ ಬಹದ್ದೂರ್, ಚೆನ್ನಪ್ಪ, ನಂದೀಶ್ ಕುಮಾರ್, ಮಾದೇವ್, ಕೆಂಡಗಣ್ಣಸ್ವಾಮಿ, ರಾಧಿಕಾ ಶ್ರೀನಾಥ್, ಲೋಕೇಶ್, ನಾಗೇಶ್, ಶಿವಕುಮಾರ್, ಶಿವರಾಜ್, ರೇಚಣ್ಣ, ಮುರುಳಿಧರ, ಗುರು, ಅನಿಲ್, ಕೃಷ್ಣ, ಬಸವರಾಜಚಾರಿ, ಗುರುಸ್ವಾಮಿ ಇನ್ನು ಮುಂತಾದವರು ಹಾಜರಿದ್ದರು.

ವೃತ್ತ ನಿರೀಕ್ಷಕರಾದ ಶಬೀರ್ ಹುಸೇನ್, ಲಕ್ಷ್ಮಿಕಾಂತ್, ಅಂತರಸಂತೆ ಎಸ್ಐ ರವಿಶಂಕರ್, ಸರಗೂರು ಎಸ್ಐ ನಂದೀಶ್ ಕುಮಾರ್, ಕೆಎಸ್ಆರ್‌ಪಿ ತುಕಡಿ, ಡಿಆರ್ ತುಕುಡಿಗಳು, ಕ್ಷಿಪ್ರ ಕಾರ್ಯ ಪಡೆ ಸೇರಿದಂತೆ ಜಲಾಶಯದ ಬಳಿ ಭಾರಿ ಪೊಲೀಸ್ ಬಂದೋಬಸ್ ನಿಯೋಜಿಸಲಾಗಿತ್ತು.

## ಕೇರಳಕ್ಕೆ ಅಕ್ರಮವಾಗಿ ರಸಗೊಬ್ಬರ ಸಾಗಣೆ

### ರೈತ ಸಂಘದ ಜಿಲ್ಲಾಧ್ಯಕ್ಷ ಆರೋಪ

ಹುಣಸೂರು.ಅ.4– ಕಳೆದ ಎರಡು ಮೂರು ವರ್ಷಗಳಿಂದ ಜಿಲ್ಲೆಗೆ ಬೇಕಾಗಿರುವಷ್ಟು ರಸಗೊಬ್ಬರ ಸರಬರಾಜಾದರೂ ರೈತರಿಗೆ ಸರ್ಕಾರ ನಿಗದಿಗೊಳಿಸಿರುವ ಬೆಲೆಗೆ ಮಾರಾಟ ಮಾಡುತ್ತಿಲ್ಲ ಎಂದು ಆಪಾದಿಸಿರುವ ಜಿಲ್ಲಾ ರೈತ ಸಂಘದ ಅಧ್ಯಕ್ಷ ಹೊಸೂರ್ ಕುಮಾರ್ ಗೊಬ್ಬರವನ್ನು ಕೇರಳಕ್ಕೆ ಅಕ್ರಮವಾಗಿ ಸಾಗಿಸಲಾಗುತ್ತಿದೆ ಎಂದು ದೂರಿದರು.

ಸಗಟು ರಸಗೊಬ್ಬರ ಮಾರಾಟ ಲೈಸೆನ್ಸ್ ಪಡೆದಿರುವ ಪ್ರಭಾವಿ ವ್ಯಾಪಾರಿಗಳು ಚಿಲ್ಲರೆ ವ್ಯಾಪಾರ ಮಾಡುವ ಅಂಗಡಿ ಮಾಲೀಕರಿಗೆ ರಸಗೊಬ್ಬರವನ್ನು ಸರಿಯಾಗಿ ವಿತರಣೆ ಮಾಡದೆ. ಅಕ್ರಮವಾಗಿ ದಾಸ್ತಾನು ಮಾಡಿಕೊಂಡು ಶೋಷಣೆ ಮಾಡುತ್ತಿರುವುದೇ ಇದಕ್ಕೆ ಕಾರಣವಾಗಿದೆ ಎಂದರು.

ಪ್ರಭಾವಿ ವ್ಯಾಪಾರಿಗಳು ಕೊಡುವ ಗೊಬ್ಬರವನ್ನೇ ತೆಗೆದುಕೊಳ್ಳಬೇಕೆಂದು ತಾಕೀತು ಮಾಡುತ್ತಿರುವ ಡೀಲರ್‌ಗಳು ವಿತರಣೆ ಮಾಡುವ ನೆಪದಲ್ಲಿ ನಿಗದಿತ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. ಜೊತೆಗೆ ಅಕ್ರಮವಾಗಿ ರಸಗೊಬ್ಬರ, ಯೂರಿಯಾವನ್ನು ಕೇರಳಕ್ಕೆ ಸಾಗಿಸುತ್ತಿದ್ದಾರೆ ಎಂದರು.

ಈ ದಂಧೆಯು ನಿರಂತರವಾಗಿ ನಡೆಯುತ್ತಿದ್ದು, ಸಾರ್ವಜನಿಕವಾಗಿ ದೂರು ನೀಡಿದರೂ ಕೂಡ ಸರ್ಕಾರ ಗಮನ ಹರಿಸುತ್ತಿಲ್ಲ. ಪಿರಿಯಾಪಟ್ಟಣ ತಾಲೂಕಿನ ಪಂಚವಳ್ಳಿ ಗ್ರಾಮದ ಜಮೀನಿನಲ್ಲಿ ಅಕ್ರಮವಾಗಿ ಸಂಗ್ರಹಿಸಿದ್ದ ಯೂರಿಯಾ ರಸಗೊಬ್ಬರವನ್ನು, ತಾಲೂಕಿನ ಆಡಳಿತ ಕೃಷಿ ಇಲಾಖೆ ಹಾಗೂ ಪೊಲೀಸ್ ಇಲಾಖೆ ಜಂಟಿ ಕಾರ್ಯಾಚರಣೆ ನಡೆಸಿ ರಸಗೊಬ್ಬರವನ್ನು ವಶಪಡಿಸಿಕೊಂಡಿದೆ. ಜೊತೆಗೆ ಕೇರಳ ಮೂಲದ ಲಾರಿ ಚಾಲಕನನ್ನು ಬಂಧಿಸಿದ್ದಾರೆ ಎಂದು ಆಪಾದಿಸಿದರು.

## ರೈತರಿಗೆ ಶೀಘ್ರ ಸಹಕಾರ ಸಂಘದಿಂದ ಸಾಲ ಸೌಲಭ್ಯ



ಸರಗೂರು, ಅ.4– ಸಂಘದ ಸರ್ವಾಂಗೀಣ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗುವುದು ಎಂದು ತಿಳಿಸಿದ ಹಂಚಿಪುರ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಡಿ.ಪಿ. ನಟರಾಜು, ಶೀಘ್ರದಲ್ಲೇ ರೈತರಿಗೆ ಸಾಲ ಸೌಲಭ್ಯ ಕಲ್ಪಿಸಿಕೊಡಲಾಗುವುದು ಎಂದರು.

ತಾಲೂಕಿನ ಹಂಚೀಪುರ ಕೃಷಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಂಘವು 2000ನೇ ಇಸವಿಯಲ್ಲಿ ನನೆಗುದಿಗೆ ಬಿದ್ದಿದ್ದರಿಂದ 2023ನೇ ಫೆಬ್ರವರಿಯಲ್ಲಿ ಮತ್ತೆ ಪ್ರಾರಂಭಗೊಂಡು ಅಧಿಕೃತವಾಗಿ ಕಾರ್ಯನಿರ್ವಹಿಸಿ ಸಂಘಕ್ಕೆ ನೂತನ ಪದಾಧಿಕಾರಿಗಳನ್ನು ನೇಮಕ ಮಾಡಲಾಗಿದೆ ಎಂದರು.

ಈ ವರ್ಷದ ಆಯವ್ಯಯ ನಡೆಯದ ಕಾರಣ ಹಾಗೂ ಮಹಿವಾಟು ನಡೆಸುವ ಅವಧಿ ಮುಂದಕ್ಕೆ ಹೋಗಿ ರೈತರಿಗೆ ತೊಂದರೆ ಆಗಿದೆ, ಮುಂದೆ ನಮ್ಮ ತಾಲೂಕಿನ ಶಾಸಕರ ವಿಶೇಷ ಕಾಳಜಿಯಿಂದ ಸಂಘದ ಕೆಲಸಗಳಿಗೆ ಹೆಚ್ಚಿನ ಸಹಾಯ ಮಾಡುವ ಭರವಸೆ ನೀಡಿದ ಕಾರಣ ಸಂಘದ ಅಭಿವೃದ್ಧಿಯನ್ನು ಮಾಡುತ್ತೇವೆ, ಸಂಘದ ಸರ್ವಾಂಗೀಣ ಅಭಿವೃದ್ಧಿಗೆ ವಿಶೇಷ ಕಾಳಜಿಯಿಂದ ಕೆಲಸ ಮಾಡಲಾಗುವುದು, ರೈತರಿಗೆ ಬೇಗ ಸಾಲ ಸೌಲಭ್ಯ ಕಲ್ಪಿಸಲಾಗುತ್ತದೆ. ಸದಸ್ಯರು ಸಹಕರಿಸಬೇಕೆಂದು ಮನವಿ ಮಾಡಿದರು. ಹಂಚೀಪುರ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರಾದ ಶಾಸಕ ಜಿ.ಡಿ. ಹರೀಶ್ ಗೌಡರು, ವಿಶೇಷ ಆದ್ಯತೆ ಕೊಡುವುದಾಗಿ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ಸಂಘದ ಕಾರ್ಯನಿರ್ವಾಣಾಧಿಕಾರಿ ಸಂಘದ ಪ್ರಕ್ರಿಯೆ ಓದಿ ಅಂಗೀಕಾರ ಪಡೆದುಕೊಂಡರು. ಉಪಾಧ್ಯಕ್ಷ ಚೆನ್ನಯ್ಯ, ಮಾಸಹಳ್ಳಿ ದೇವರಾಜು ಎಸ್.ಕೆ., ಹೆಚ್.ಕೆ. ಗುರುಸ್ವಾಮಿ, ಚಿನ್ನಪ್ಪ ಡಿಜಿ ಶಿವರಾಜು, ಕಮಲಮ್ಮ, ಚಿಕ್ಕದೇವನಾಯಕ, ಗುರುಮಲ್ಲಮ್ಮ, ಚನ್ನಯ್ಯ ದೇವಲಾಪುರ, ಹಾಗೂ ಸಂಘದ ಸದಸ್ಯರು ಹಾಜರಿದ್ದು ಸಭೆಯನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.

## ಅನುಮಾನಾಸ್ಪದವಾಗಿ ರೈತ ಸಾವು

ಮಲ್ಕುಂಡಿ, ಅ.4– ರೈತರೊಬ್ಬರು ಅನುಮಾನಾಸ್ಪದವಾಗಿ ಸಾವನ್ನಪ್ಪಿರುವ ಘಟನೆ ನಂಜನಗೂಡು ತಾಲೂಕಿನ ಈರೇಗೌಡನಹುಂಡಿ ಗ್ರಾಮದಲ್ಲಿ ಸಂಭವಿಸಿದೆ.

ಗ್ರಾಮದ ವಾಸಿ ಮಣಿಕಂಠ (17) ಎಂಬುವರೇ ಸಂಶಯಾಸ್ಪದ ರೀತಿಯಲ್ಲಿ ಸಾವನ್ನಪ್ಪಿದ್ದು, ನೇಣು ಬಿಗಿದ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿದೆ. ಸುಮಾರು ವರ್ಷಗಳಿಂದ ಹೆಡಿಯಾಲ ಗ್ರಾಮದ ತಮ್ಮ ತಾತನ ಮನೆಯಲ್ಲಿಯೇ ವಾಸ ಮಾಡುತ್ತಿದ್ದ. ಈತನ ಸಾವಿನ ಬಗ್ಗೆ ಅನುಮಾನಗಳು ವ್ಯಕ್ತವಾಗಿವೆ.

ತಮ್ಮ ಜಮೀನಿನಲ್ಲಿ ಟೊಮೆಟೊ, ಬಾಳೆ ಇನ್ನಿತರ ಬೆಳೆಗಳನ್ನು ಬೆಳೆದು ಪ್ರಾಣಿಗಳಿಂದ ರಕ್ಷಿಸಲು ರಾತ್ರಿ ವೇಳೆ ಜಮೀನಿನಲ್ಲೇ ಮರದ ಅಟ್ಟನಿಯಲ್ಲಿ ಕಾವಲು ಕಾಯುತ್ತಿದ್ದರು. ತಾಯಿ ಸಣ್ಣದೇವಮ್ಮ ಮಗನನ್ನು ಕಳೆದುಕೊಂಡು ದುಃಖಿತರಾಗಿದ್ದಾರೆ. ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ.

ವಿಷಯ ತಿಳಿದು ಸ್ಥಳಕ್ಕೆ ನಂಜನಗೂಡು ವೃತ್ತ ನಿರೀಕ್ಷಕ ಚಂದ್ರಶೇಖರ್, ಪಿಎಸ್ಐ ರಮೇಶ್ ಕರಕಿಕಟ್ಟಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಪೊಲೀಸರು ಪ್ರಕರಣವನ್ನು ದಾಖಲು ಮಾಡಿಕೊಂಡು ತನಿಖೆ ಕೈಗೊಂಡಿದ್ದಾರೆ. ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ರವಾನೆ ಮಾಡಿದ್ದಾರೆ. ಈ ಸಂಬಂಧ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಮೈಸೂರು ತಾಲೂಕು ದೊಡ್ಡಮಾರಗೌಡನಹಳ್ಳಿ ಗ್ರಾಮ ಪಂಚಾಯಿತಿ ವತಿಯಿಂದ ಗಾಂಧಿ ಜಯಂತಿ ಆಚರಿಸಲಾಯಿತು. ಈ ವೇಳೆ ಗ್ರಾಪಂ ಅಧ್ಯಕ್ಷೆ ಸುಮಿತ್ರ, ಪಿಡಿಓ ರುಕ್ಮಾಂಗದ, ಕಾರ್ಯದರ್ಶಿ, ಗ್ರಾಪಂ ಸದಸ್ಯರು ಹಾಗೂ ಸಿಬ್ಬಂದಿವರ್ಗ ಹಾಜರಿದ್ದರು.

## ಸಂಶಯಾಸ್ಪದ ರೀತಿಯಲ್ಲಿ ಗಂಡು ಚಿರತೆ ಸಾವು



ಮಲ್ಕುಂಡಿ, ಅ.4– 5 ವರ್ಷ ಗಂಡು ಚಿರತೆಯೊಂದು ಸಂಶಯಾಸ್ಪದ ರೀತಿಯಲ್ಲಿ ಸಾವನ್ನಪ್ಪಿರುವ ಘಟನೆ ಸಮೀಪದ ಕಡಜಟ್ಟಿ ಗ್ರಾಮದ ನುಗು ಕಾಲುವೆ ಬಳಿ ಸಂಭವಿಸಿದೆ.

ಚಿರತೆಯು ನುಗು ಕಾಲುವೆಯ ರಸ್ತೆ ಬದಿ ಸತ್ತು ಬಿದ್ದಿದ್ದು, ಕಾರಣಗಳು ತಿಳಿದು ಬಂದಿಲ್ಲ. ವಿಷಯ ತಿಳಿದು ಅರಣ್ಯಾಧಿಕಾರಿ ನಿತಿನ್‌ಕುಮಾರ್, ಜನಾರ್ಧನ್ ಸ್ಥಳಕ್ಕೆ ಭೇಟಿ ನೀಡಿ ಚಿರತೆಯ ಮರಣೋತ್ತರ ಪರೀಕ್ಷೆ ನಡೆಸಿದರು.

## ಅನುಮಾನಾಸ್ಪದವಾಗಿ ವ್ಯಕ್ತಿ ಸಾವು

ತಿ.ನರಸೀಪುರ, ಅ.4– ವ್ಯಕ್ತಿಯೊಬ್ಬರು ಅನುಮಾನಾಸ್ಪದವಾಗಿ ಮೃತಪಟ್ಟಿರುವ ಘಟನೆ ತಾಲೂಕಿನ ಕರೋಹಟ್ಟಿ ಗ್ರಾಮದಲ್ಲಿ ಸಂಭವಿಸಿದೆ.

ಗ್ರಾಮದ ಮರಿಮಲ್ಲಪ್ಪ ಎಂಬುವರ ಪುತ್ರ ನಟರಾಜು(46) ಎಂಬುವರೇ ಅನುಮಾನಾಸ್ಪದವಾಗಿ ಮೃತಪಟ್ಟ ವ್ಯಕ್ತಿ.

ನಟರಾಜು ಮೃತದೇಹ ಕರೋಹಟ್ಟಿ ಗ್ರಾಮದ ಬಸ್ ನಿಲ್ದಾಣದಲ್ಲಿ ದೊರಕಿದ್ದು, ಅಂಗಾತವಾಗಿ ಮಲಗಿಸಿದ ಸ್ಥಿತಿಯಲ್ಲಿ ಪತ್ತೆಯಾಗಿದೆ.ಮೃತನ ಎಡಗಾಲು ಕಂದು ಬಣ್ಣವಾಗಿದ್ದು, ಕಟ್ಟೆಯ ಮೇಲೆ ರಕ್ತ ಸವರಿದ ರೀತಿ ಅಂಟಿಕೊಂಡಿದೆ. ಎಡಗೈಯಲ್ಲೂ ರಕ್ತ ಅಂಟಿರುವ ರೀತಿ ಇದೆ. ಹಾಗಾಗಿ ತಮ್ಮ ಸಹೋದರನ ಸಾವಿನ ಬಗ್ಗೆ ಅನುಮಾನವಿದ್ದು ತನಿಖೆ ನಡೆಸುವಂತೆ ಮೃತನ ಅಣ್ಣ ನಾಗೇಶ್ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಪಟ್ಟಣ ಠಾಣೆಯ ಪಿಎಸ್ಐ ಜಗದೀಶ್ ದೂಳ್‌ಶೆಟ್ಟಿ ಪ್ರಕರಣ ದಾಖಲಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

## ಪಿಪಿಟಿ ಮೂಲಕ ಮಕ್ಕಳ ಬೆಳವಣಿಗೆ ಬಗ್ಗೆ ಅರಿವು



ಸರಗೂರು, ಅ.4– ಪೋಷಕರು ಮಕ್ಕಳಿಗೆ ಆರೋಗ್ಯಕರ ಆಹಾರ ನೀಡುವಲ್ಲಿ ಬಹಳ ಎಚ್ಚರ ವಹಿಸಬೇಕು ಎಂದು ವಿವೇಕಾನಂದ ಅಸ್ಪತ್ರೆ ಮಕ್ಕಳ ತಜ್ಞರಾದ ಡಾ.ಅರುಣ್ ಕುಮಾರ್ ಸಲಹೆ ನೀಡಿದರು.

ಪಟ್ಟಣದ ಆರ್ಯ ಈಡಿಗರ ಸಮುದಾಯ ಭವನದಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷದ್‌ನ ಸರಗೂರು ಘಟಕದ ವತಿಯಿಂದ PPT ಮೂಲಕ ಮಕ್ಕಳ ಬೆಳವಣಿಗೆಗೆ ಪೂರಕ ಹಾಗೂ ಮಾರಕ ವಾಗಿರುವ ಅಂಶಗಳ ಬಗ್ಗೆ ವಿವರಿಸಿದರು.

ಮಗುವಿನ ವ್ಯಕ್ತಿತ್ವ ಮತ್ತು ದೈಹಿಕ ಬೆಳವಣಿಗೆಯು ಗರ್ಭದಲ್ಲೇ ಮಗು ಬೆಳವಣಿಗೆಗೆ ಮಗು ಮತ್ತು ಅವನ ತಾಯಿಯ ನಡುವಿನ ಸಂಬಂಧವು ನಿರ್ಣಾಯಕವಾಗಿದೆ. ತಾಯಂದಿರು ತಮ್ಮ ಮಕ್ಕಳಿಗೆ ಸಾಮಾಜಿಕ–ಭಾವನಾತ್ಮಕ, ದೈಹಿಕ, ಬೌದ್ಧಿಕ ಮತ್ತು ಸ್ವತಂತ್ರ ಬೆಳವಣಿಗೆಯನ್ನು ಕಲಿಸುವ ಮೂಲಕ ಅವರ ಬೆಳವಣಿಗೆಯಲ್ಲಿ ಅನೇಕ ಪಾತ್ರಗಳನ್ನು ವಹಿಸುತ್ತಾರೆ ಎಂದರು.

ಪ್ರಸ್ತುತ ದಿನಗಳಲ್ಲಿ ಪೋಷಕರು ಮಕ್ಕಳಿಗೆ ಆರೋಗ್ಯಕರ ಆಹಾರ ನೀಡುವಲ್ಲಿಯೂ ಬಹಳ ಎಚ್ಚರ ವಹಿಸಬೇಕು, ಇಲ್ಲವಾದಲ್ಲಿ ಸಾಕಷ್ಟು ತೊಂದರೆ ಎದುರಿಸಬೇಕಾಗುತ್ತದೆ, ಮೊಬೈಲ್ ಬಂದಾಗಿನಿಂದ ಮಕ್ಕಳು ಆಟವಾಡುವುದನ್ನೇ ಮರೆತಿದ್ದಾರೆ. ದೈಹಿಕ ವ್ಯಾಯಾಮ ಇಲ್ಲದೆ ಮಕ್ಕಳ ಮಾನಸಿಕ ಆರೋಗ್ಯವೂ ಸಹ ಕುಂಠಿತಗೊಳ್ಳುತ್ತಿದೆ. ಆದ್ದರಿಂದ ಬಾಲ್ಯದಿಂದಲೇ ಮಕ್ಕಳಿಗೆ ಆಟ ಆಡುವುದನ್ನು ಮತ್ತು ವ್ಯಾಯಾಮ ಮಾಡುವುದನ್ನು ಕಲಿಸಬೇಕು ಎಂದು ಮಾಹಿತಿ ನೀಡಿದರು,

ಅಖಿಲ ಭಾರತೀಯ ಸಾಹಿತ್ಯ ಪರಿಷತ್‌ನ ವಲಯ ಪ್ರಮುಖರಾದ ಡಾ.ವಿ.ರಂಗನಾಥ್ ಅವರು ಕಾರ್ಯಕ್ರಮ ಕುರಿತು ಮಾತನಾಡಿದರು, ಅಖಿಲ ಭಾರತೀಯ ಸಾಹಿತ್ಯ ಪರಿಷದ್‌ನ ಸರಗೂರು ಘಟಕದ ಅಧ್ಯಕ್ಷ ಶಾಂತವೀರಮೂರ್ತಿ, ಉಪಾಧ್ಯಕ್ಷ ಎಸ್.ಎಂ. ಶ್ರೀನಿವಾಸ್, ಶ್ರೀವತ್ಸ, ರಾಜು, ಮಾಧು, ಚನ್ನಪ್ಪ, ಅನೀತಾ, ಸಾರ್ವಜನಿಕರು, ಮಹಿಳೆಯರು, ಮಕ್ಕಳು ಉಪಸ್ಥಿತರಿದ್ದರು,

## ಮೊದಲು ನಮಗೆ ನೀರು, ನಂತರ ತಮಿಳುನಾಡಿಗೆ

### ರಾಜಕೀಯೇತರ ನಿರ್ಣಯ ಕೈಗೊಂಡು ಕೋರ್ಟಿಗೆ ಮನವರಿಕೆ ಮಾಡಿಕೊಡಲು ಮನವಿ ಸಲ್ಲಿಸಲು ಕೃಷ್ಣಪ್ಪಗೌಡ ಕೋರಿಕೆ



ನಂಜನಗೂಡು, ಅ.4– ತಮಿಳುನಾಡಿಗೆ ಕಾವೇರಿ ನೀರು ಹಂಚಿಕೆ ವಿಚಾರವಾಗಿ ರಾಜ್ಯದ ಕಾವೇರಿ ಅಚ್ಚುಕಟ್ಟು ಪ್ರದೇಶದ ಕೃಷಿ ಚಟುವಟಿಕೆ ಹಾಗೂ ಕುಡಿಯುವ ನೀರಿಗೆ ಅವಶ್ಯಕವಾಗಿರುವ ನೀರಿನ ಬಳಕೆಗೆ ಮೊದಲ ಆದ್ಯತೆ ನೀಡಿ ನಂತರ ತಮಿಳುನಾಡಿಗೆ ನೀರು ಬಿಡುಗಡೆ ಮಾಡುವ ಕುರಿತು ಎಲ್ಲಾ ಪಕ್ಷಗಳು ರಾಜಕೀಯೇತರ ನಿಲುವು ಕೈಗೊಂಡು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡಬೇಕು ಎಂದು ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಮಾಜಿ ಅಧ್ಯಕ್ಷ ಎನ್.ಆರ್. ಕೃಷ್ಣಪ್ಪಗೌಡ ಆಗ್ರಹಿಸಿದ್ದಾರೆ.

ಈ ಕುರಿತು ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರಿಗೆ ಪತ್ರ ಬರೆದಿರುವ ಇವರು, ಕೆಆರ್‌ಎಸ್ ಜಲಾಶಯದಲ್ಲಿ ನೀರಿನ ಸಂಗ್ರಹದ ಪ್ರಮಾಣ ಹಾಗೂ ರಾಜ್ಯಕ್ಕೆ ಬೇಕಿರುವ ನೀರಿನ ಪ್ರಮಾಣಕ್ಕೆ ಅನುಗುಣವಾಗಿ ಜಲಾಶಯದ ನೀರನ್ನು ಬಳಕೆ ಮಾಡಿಕೊಂಡು ನಂತರ ತಮಿಳುನಾಡಿಗೆ ನೀರು ಹರಿಸುವ ಸಂಬಂಧ ಎಲ್ಲಾ ಪಕ್ಷಗಳು ರಾಜಕೀಯ ಮರೆತು ಒಗ್ಗಟ್ಟು ಪ್ರದರ್ಶಿಸುವ ಮೂಲಕ ರಾಜ್ಯದ ಹಿತ ಕಾಯಬೇಕಾದ ಅಗತ್ಯವಿದ್ದು, ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ದಿಟ್ಟ ನಿಲುವು ಕೈಗೊಳ್ಳಬೇಕಿದೆ ಎಂದು ಒತ್ತಾಯಿಸಿದ್ದಾರೆ. ಇನ್ನು ಕೆಆರ್‌ಎಸ್ ಜಲಾಶಯದ ನಿರ್ವಹಣಾ ವೆಚ್ಚವನ್ನು ಕೂಡ ರಾಜ್ಯ ಸರ್ಕಾರ ಭರಿಸುತ್ತಿದ್ದು, ತಮಿಳುನಾಡಿಗೆ ನೀರು ಹಂಚಿಕೆ ಮಾಡುತ್ತಿರುವುದರಿಂದ ತಮಿಳುನಾಡು ಸರ್ಕಾರವೂ ಕೂಡ ಶೇ.50ರಷ್ಟು ನಿರ್ವಹಣಾ ವೆಚ್ಚವನ್ನು ಭರಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡಲಿ ಎಂದು ಆಗ್ರಹಿಸಿದ್ದಾರೆ.

## ತಿ.ನರಸೀಪುರ ಸಾರ್ವಜನಿಕ ಆಸ್ಪತ್ರೆ ಮೇಲ್ದರ್ಜೆಗೆ

### ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದಾಗಿ ಪ್ರತಿಭಟನಾಕಾರರಿಗೆ ಭರವಸೆ ನೀಡಿದ ಡಿಹೆಚ್‌ಓ



ತಿ.ನರಸೀಪುರ, ಅ.4– ಸಾರ್ವಜನಿಕರ ಬೇಡಿಕೆಯಂತೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಜಿಲ್ಲಾ ಆರೋಗ್ಯಾಧಿಕಾರಿ ಪಿ.ಸಿ. ಕುಮಾರಸ್ವಾಮಿ ತಿಳಿಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಮುಂಭಾಗದಲ್ಲಿ ದಸಂಸ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಹಮ್ಮಿಕೊಂಡಿದ್ದ ಧರಣಿ ಸ್ಥಳಕ್ಕೆ ಭೇಟಿ ನೀಡಿದ ಅವರು ಮೊದಲಿಗೆ ಪ್ರತಿಭಟನಾಕಾರರ ಅಹವಾಲುಗಳನ್ನು ಆಲಿಸಿ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

ಸಮಿತಿ ನೀಡಿರುವ ಎಲ್ಲಾ ಬೇಡಿಕೆಗಳನ್ನು ಜಿಲ್ಲಾ ಹಂತದಲ್ಲಿ ನನ್ನ ಕೈಲಾದಷ್ಟು ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ನನ್ನ ಹಂತದ ಬಿಟ್ಟು ಸರ್ಕಾರದ ಹಂತದಲ್ಲಿ ಆಗುವಂತದ್ದಕ್ಕೆ ಮೇಲಾಧಿಕಾರಿಗಳ ಗಮನಕ್ಕೆ ತಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು ಎಂದರು. ಸರ್ಕಾರಿ ಆಸ್ಪತ್ರೆಯಲ್ಲಿದ್ದು ಖಾಸಗಿ ಕ್ಲಿನಿಕ್ ನಡೆಸುತ್ತಿರುವ ವೈದ್ಯರ ಬಗ್ಗೆ ತಾಲೂಕು ಆರೋಗ್ಯಾಧಿಕಾರಿ ಹಾಗೂ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿಗಳ ಮೂಲಕ ಪರಿಶೀಲಿಸಿ ವರದಿ ತರಿಸಿಕೊಂಡು ಅಗತ್ಯ ಕ್ರಮ ವಹಿಸುವುದಾಗಿ ಅವರು ಭರವಸೆ ನೀಡಿದರು.

ಈಗಾಗಲೇ ನಾನು ಸಾರ್ವಜನಿಕ ಆಸ್ಪತ್ರೆಗೆ ಭೇಟಿ ಕೊಟ್ಟಿದ್ದು ಆಸ್ಪತ್ರೆಯಲ್ಲಿ ಆಗಬೇಕಾಗಿರುವ ಕೆಲಸ ಕಾರ್ಯಗಳ ಬಗ್ಗೆ, ಸಮಸ್ಯೆಗಳ ಬಗ್ಗೆ ಮಾಹಿತಿ ಪಡೆದು ಅಗತ್ಯ ಸೂಚನೆಗಳನ್ನು ನೀಡಿ ಸುಧಾರಣೆಗೆ ಕ್ರಮವಹಿಸಿದ್ದೇನೆ.

ಇನ್ನು ಹೆಚ್ಚಿನ ರೀತಿಯಲ್ಲಿ ಜನರ ಬೇಡಿಕೆಗಳಿಗೆ ಪೂರಕವಾಗಿ ಬೇಕಿರುವ ಎಲ್ಲಾ ಅಗತ್ಯ ಕ್ರಮಗಳನ್ನು ವಹಿಸುವುದಾಗಿ ಅವರು ತಿಳಿಸಿದರು. ಇದಕ್ಕೂ ಮುನ್ನ ಮಾತನಾಡಿದ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಆಲಗೂಡು ಎಸ್.ಚಂದ್ರಶೇಖರ್, ಸರ್ಕಾರಿ ಆಸ್ಪತ್ರೆಯ ವೈದ್ಯರು ಖಾಸಗಿ ಕ್ಲಿನಿಕ್ ನಡೆಸುತ್ತಿದ್ದು, ಇಲ್ಲಿಗೆ ಬರುವ ರೋಗಿಗಳನ್ನು ತಮ್ಮ ಕ್ಲಿನಿಕ್‌ಗೆ ಬರುವಂತೆ ಹೇಳಿ ಹೆಚ್ಚಿನ ಹಣ ಸುಲಿಗೆ ಮಾಡುತ್ತಿದ್ದಾರೆ. ಶವಾಗಾರ ದುರಸ್ತಿಯಾಗಬೇಕಾಗಿದೆ. ಶವಾಗಾರದಲ್ಲಿ ಎರಡು ಮೂರು ಶವಗಳು ಒಟ್ಟಿಗೆ ಬಂದರೆ ಏಕಕಾಲದಲ್ಲಿ ಏನು ಮಾಡಲು ಸಾಧ್ಯವಾಗದಂತಹ ಸ್ಥಿತಿಯಿದೆ. ಬಡವರಿಗೆ ಸೂಕ್ತ ಚಿಕಿತ್ಸೆ ಸಿಗಲು ಅಗತ್ಯವಾದ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಬೇಕು. ತಾಯಿ ಮಗು ಆಸ್ಪತ್ರೆ, ಡಯಾಲಿಸಿಸ್ ಘಟಕಗಳಲ್ಲಿ ಹೆಚ್ಚುವರಿ ಉಪಕರಣಗಳ ಅಳವಡಿಕೆ ಮತ್ತು ಇತರ ಸೌಲಭ್ಯಗಳನ್ನು ಒದಗಿಸುವಂತೆ ಡಿಎಚ್‌ಓ ಅವರಿಗೆ ಮನವಿ ಮಾಡಿದರು.

ಪ್ರತಿಭಟನೆ ಅಂತ್ಯಕ್ಕೆ ಮನವಿ ಮಾಡಿದ ವೇಳೆ, ಜಿಲ್ಲಾ ಸಂಚಾಲಕರು, ನೀವು ಬರುವುದು ತಡ ಆದಕಾರಣ ಪ್ರತಿಭಟನಾಕಾರರೂ ಹೊರಟು ಹೋಗಿದ್ದಾರೆ. ನಾಳೆ ಪ್ರತಿಭಟನಾ ಧರಣಿ ಮುಂದುವರಿಯಲಿದ್ದು, ನಾಳೆ ಬಂದು ಮನವಿ ಸ್ವೀಕರಿಸುವಂತೆ ಮನವಿ ಮಾಡಿದ್ದರಿಂದ ಆರೋಗ್ಯಾಧಿಕಾರಿಗಳು ನಾಳೆ ಬರುವುದಾಗಿ ತಿಳಿಸಿದ್ದಾರೆ

ಈ ವೇಳೆ ತಾಲೂಕು ಆರೋಗ್ಯಾಧಿಕಾರಿ ಡಾ. ರವಿಕುಮಾರ್ ಸಾರ್ವಜನಿಕ ಆಸ್ಪತ್ರೆಯ ಆಡಳಿತಾಧಿಕಾರಿ ಡಾ. ಜಗನ್ನಾಥ್, ಮೂಳೆ ತಜ್ಞ ಡಾ. ದಯಾನಂದಬಾಬು ರಜಿನಿ ಕನ್ನಾಯಕನಹಳ್ಳಿ ಮರಿಸ್ವಾಮಿ ಮತ್ತಿತರರು ಇದ್ದರು.

## ಮೈಸೂರು ಚಿತ್ರಮಂದಿರಗಳಲ್ಲಿ



| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ಚಂದ್ರಮುಖಿ–2 (ತೆ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ಬಾನದಾರಿಯಲ್ಲಿ (ಕ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| ಫರ್ಕಿ 3 (ಹಿ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ಚಂದ್ರಮುಖಿ–2 (ತ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಸಪ್ತಸಾಗರದಾಚೆ ಎಲ್ಲೋ (ಕ) | 4 ಪ್ರದರ್ಶನಗಳು |
| **ರಾಜ್‌ಕಮಲ್** | |
| ಸ್ಕಂದ (ತೆ) | 4 ಪ್ರದರ್ಶನಗಳು |
| **ಸಂಗಂ** | |
| ಚಂದ್ರಮುಖಿ–2 (ತ) | 4 ಪ್ರದರ್ಶನಗಳು |
| **ಲಿಡೋ** | |
| ಟೋಬಿ (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ಇರೈವನ್(ತ) | 4 ಪ್ರದರ್ಶನಗಳು |
| **ಪ್ರಭಾ** | |
| ಸ್ಕಂದ (ಕ) | 4 ಪ್ರದರ್ಶನಗಳು |

### ಡಿಆರ್‌ಸಿ ಸಿನಿಮಾಸ್

ದೂ : 4240422/4241800

| | |
|---|---|
| ಸ್ಕ್ರೀನ್ 1 | ದಿಗ್ವಿಜಯ (ಕ): ಬೆ.10.40ಕ್ಕೆ, ಸಪ್ತಸಾಗರದಾಚೆ ಎಲ್ಲೋ (ಕ): ಮ.1.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಜವಾನ್ (ಹಿಂ): ಸಂ.4ಕ್ಕೆ. |
| ಸ್ಕ್ರೀನ್ 2 | ತತ್ಸಮ ತದ್ಭವ (ಕ): ಬೆ.11.30ಕ್ಕೆ, ಒಲವೇ ಮಂದಾರ 2 (ಕ): ಮ.2ಕ್ಕೆ, ಡೆಮಾನ್ (ತ): ಸಂ.4.30ಕ್ಕೆ, ಸುಖೀ (ಹಿಂ): ರಾ.7ಕ್ಕೆ, ರಾ.9.50ಕ್ಕೆ. |
| ಸ್ಕ್ರೀನ್ 3 | ಎಕ್ಸ್ಪೆಂಡಬಲ್ಸ್ (ಇಂ): ಬೆ.11.30ಕ್ಕೆ, ರಾ.9.40ಕ್ಕೆ, ದಿ ನನ್ 2 (ಇಂ): ಮ.1.45ಕ್ಕೆ, ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ): ಸಂ.4.30ಕ್ಕೆ, ರಾ.7ಕ್ಕೆ. |
| ಸ್ಕ್ರೀನ್ 4 | ಜವಾನ್ (ಹಿಂ): ಬೆ.9.50ಕ್ಕೆ, ಮ.1ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.4.15ಕ್ಕೆ. |

### ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

| | |
|---|---|
| ಸ್ಕ್ರೀನ್ 1 | ಜವಾನ್ (ಹಿಂ): ಬೆ.10.40ಕ್ಕೆ, ಸಂ.4.35ಕ್ಕೆ, ರಾ.10.30ಕ್ಕೆ, ದಿ ಎಕ್ಸ್ಪೆಂಡಬಲ್ಸ್ (ಇಂ): ಮ.2.10ಕ್ಕೆ, ರಾ.8.05ಕ್ಕೆ. |
| ಸ್ಕ್ರೀನ್ 2 | ಸಪ್ತ ಸಾಗರದಾಚೆ ಎಲ್ಲೋ (ಕ): ಬೆ.10.50ಕ್ಕೆ, ಜವಾನ್ (ಹಿಂ): ಮ.1.50ಕ್ಕೆ, ಸಂ.5.25ಕ್ಕೆ, ರಾ.9ಕ್ಕೆ. |
| ಸ್ಕ್ರೀನ್ 3 | ಜವಾನ್ (ಹಿಂ): ಬೆ.9.10ಕ್ಕೆ, ಮ.12.45ಕ್ಕೆ, ದಿ ಎಕ್ಸ್ಪೆಂಡಬಲ್ಸ್ (ಇಂ): ಸಂ.4.20ಕ್ಕೆ, ರಾ.9.50ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.6.50ಕ್ಕೆ. |
| ಸ್ಕ್ರೀನ್ 4 | ಜವಾನ್ (ಹಿಂ): ಬೆ.10ಕ್ಕೆ, ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ): ಮ.1.50ಕ್ಕೆ, ರಾ.7.30ಕ್ಕೆ, ರಾ.10ಕ್ಕೆ, ಮಾರ್ಕ್ ಆಂಟೋನಿ (ತ): ಸಂ.4.20ಕ್ಕೆ. |

### ಮೈಸೂರು ವಿಷನ್ ಸಿನಿಮಾ

ದೂ : 0821–2973519

| | |
|---|---|
| ಸ್ಕ್ರೀನ್ 1 | ಪರಿಶುದ್ಧಂ (ಕ): ಬೆ.10.30ಕ್ಕೆ, ಹನಿಮೂನ್ ಇನ್ ಬ್ಯಾಂಕಾಕ್(ಕ): ಮ.1.30ಕ್ಕೆ, ಧ್ವಂದ್ವ (ಕ): ಸಂ.4.20ಕ್ಕೆ, ಬನ್ ಟೀ (ಕ): ಸಂ.6.45ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ರಾ.9.15ಕ್ಕೆ. |
| ಸ್ಕ್ರೀನ್ 2 | ಜವಾನ್ (ಹಿಂ): ಸಂ.4.15ಕ್ಕೆ, ರಾ.9.15ಕ್ಕೆ. |
| ಸ್ಕ್ರೀನ್ 3 | ದಿ ನನ್ 2 (ಇಂ): ಸಂ.4.45ಕ್ಕೆ, ಜವಾನ್ (ಹಿಂ): ರಾ.7ಕ್ಕೆ. |
| ಸ್ಕ್ರೀನ್ 4 | ಜವಾನ್ (ಹಿಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ಸಂ.4.45ಕ್ಕೆ, ದಿ ನನ್ 2 (ಇಂ): ರಾ.7.35ಕ್ಕೆ. |

### ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, ಜೈಲರ್ (ಕ): ಬೆ.8.25ಕ್ಕೆ, ಮ.3.10ಕ್ಕೆ, ಓಎಂಜಿ 2 (ಹಿಂ): ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, ಗದರ್ 2 (ಹಿಂ): ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.9.45ಕ್ಕೆ, ಆಚಾರ್ & ಕೋ (ಕ): ಮ.3.55ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಮ.3.25ಕ್ಕೆ, ರಾ.10.30ಕ್ಕೆ, ನಮೋ ಭೂತಾತ್ಮ (ಕ): ಬೆ.11.55ಕ್ಕೆ, ರಾಖಿ ಔರ್ ರಾಣಿ (ಹಿಂ): ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, ಓಪನ್‌ಹೈಮರ್ (ಇಂ): ಸಂ.6.35ಕ್ಕೆ, ಭೋಳಾ ಶಂಕರ್ (ತೆ): ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, ಮೆಗ್ 2 (ಇಂ): ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

## ಮೈಸೂರು ರೇಸುಗಳು

9ನೇ ದಿನ, ಗುರುವಾರ 05-10-2023

### ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ಕೂರ್ಗ್ ಪ್ಲೇಟ್ ಡಿ2–1200 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1. ಚಿರಾಗ್ 2. ಯುನಿಟಿ 3. ರೊಮ್ಯಾಂಟಿಕ್ ಹಾರ್ಟ್

II. ಕೂರ್ಗ್ ಪ್ಲೇಟ್ ಡಿ1–1200 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1. ಮಿಸ್ಟಿಕ್ ಮರ್ಲಿನ್ 2. ಎಲಿವಾಡೋ 3. ಮೆಗಾನೆಸ್

III. ಜಗನ್ಮೋಹನ ಪ್ಯಾಲೇಸ್ ಪ್ಲೇಟ್ ಡಿ2– 1400 ಮೀ. ಮ.3.00ಕ್ಕೆ
1 ಅತುಲ್ಯಾ 2. ಎಕೊ ಫ್ರೆಂಡ್ಲಿ 3. ಕೂನಿಚಿವಾ

IV. ಹೋಟೆಲ್ RRR ಟ್ರೋಫಿ– 1400ಮೀ. ರೇಟೆಡ್ 40 ರಿಂದ 65. (ಮೈಸೂರ್ ಬೆಸ್ಟ್ ಹಾರ್ಸ್). ಸಂ.3.30ಕ್ಕೆ
1. ಫೆರೆರಿಟಿ 2. ಚೆಂಗೈಜ್ 3. ಗೈಡಿಂಗ್ ಪೂರ್ಸ್

V. ರಾಜಕುಮಾರಿ ಲೀಲಾವತಿ ದೇವಿ ಮೆಮೋರಿಯಲ್ ಟ್ರೋಫಿ–1600 ಮೀ. ರೇಟೆಡ್ 80 ಮತ್ತು ಮೇಲ್ವರ್ಗ. ಸಂ.4.00ಕ್ಕೆ
1. ಶಾಮ್‌ರಾಕ್ 2. ಫಾರ್ ಸೇಥಿ 3. ವಿನ್ ಮೈ ಲೂವಿ

VI. ಮೀರತ್ ಪ್ಲೇಟ್–1100 ಮೀ. ರೇಟೆಡ್ 40 ರಿಂದ 65 ಸಂ.4.30ಕ್ಕೆ
1 ದಿ ಕಿಂಗ್ಸ್ ಎನ್‌ಐ 2 ಗೋಲ್ಡ್ ಕ್ರೆಸ್ಟ್ 3. ಡೆವಿಲ್ಸ್ ಮ್ಯಾಜಿಕ್

VII. ಜಗನ್ಮೋಹನ ಪ್ಯಾಲೇಸ್ ಪ್ಲೇಟ್ ಡಿ1– 1400 ಮೀ. ಸಂ.5.00ಕ್ಕೆ
1 ದಿ ಪೆಲೂಚಿ 2 ಬ್ರೇಕ್ ಅವೇ 3. ಸ್ಟ್ರೈಕಿಂಗ್ ಮೆಮೋರಿ

| | |
|---|---|
| ದಿನದ ಅತ್ಯುತ್ತಮ | : ಶಾಮ್‌ರಾಕ್ |
| ಡಬ್ಬಲ್ | : ಫೆರೆರಿಟಿ, ದಿ ಪೆಲೂಚಿ |
| ಜಾಕ್‌ಪಾಟ್ | : 3, 4, 5, 6 ಮತ್ತು 7 |
| ಮಿನಿ ಜಾಕ್‌ಪಾಟ್ | : 4, 5, 6 ಮತ್ತು 7 |
| I ಟ್ರಿಬಲ್ | : 2, 3 ಮತ್ತು 4 |
| II ಟ್ರಿಬಲ್ | : 5, 6 ಮತ್ತು 7 |
| ಎಕ್ಸ್‌ಆಕ್ಟ್ | : 1 ರಿಂದ 7 |

ಟಿಪ್‌ಸ್ಟರ್ ಪಿಜಿಸಿ

## ಎಸ್.ಎಂ. ಪಾಷ ನಿಧನ



ಸರಗೂರು, ಅ.4– ಮುಸ್ಲಿಂ ಸಮಾಜದ ಯಜಮಾನರಾದ ಎಸ್.ಎಂ ಪಾಷ(90) ಮಂಗಳವಾರ ರಾತ್ರಿ ನಿಧನರಾಗಿದ್ದಾರೆ.

ಪಟ್ಟಣದ 2ನೇ ವಾರ್ಡಿನ ನಿವಾಸಿಯಾದ ದಿವಂಗತರು ಪತ್ನಿ, ನಾಲ್ವರು ಪುತ್ರರು, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಪಟ್ಟಣ ಮುಸ್ಲಿಂ ಸಮಾಜದ ಖಬರ್ ಸ್ಥಾನದಲ್ಲಿ ಬುಧವಾರ ನೆರವೇರಿಸಲಾಯಿತು.

# ಬಾಕ್ಸರ್ ಲೊವ್ಲಿನಾಗೆ ಬೆಳ್ಳಿ, ಕಂಚಿಗೆ ತೃಪ್ತಿಪಟ್ಟ ಪರ್ವೀನ್ ಹೂಡಾ



ಹ್ಯಾಂಗ್‌ಝೌ, ಅ.4– ಚೀನಾದ ಹ್ಯಾಂಗ್‌ಝೌನಲ್ಲಿ ನಡೆಯುತ್ತಿರುವ 2023ರ ಏಷ್ಯನ್ ಗೇಮ್ಸ್‌ನಲ್ಲಿ ಭಾರತದ ಪದಕ ಬೇಟೆ ಮುಂದುವರೆದಿದ್ದು, ಟೋಕಿಯೊ ಒಲಿಂಪಿಕ್ ಪದಕ ವಿಜೇತೆ ಲೊವ್ಲಿನಾ ಬೊರ್ಗೊಹೈನ್ ಅವರು ಬುಧವಾರ ಬೆಳ್ಳಿ ಪದಕ ಗೆದ್ದಿದ್ದಾರೆ.

ಇಂದು ನಡೆದ ಬಾಕ್ಸಿಂಗ್ ಸ್ಪರ್ಧೆಯ ಮಹಿಳೆಯರ 75 ಕೆಜಿ ವಿಭಾಗದ ಫೈನಲ್‌ನಲ್ಲಿ ಲೊವ್ಲಿನಾ ಬೊರ್ಗೊಹೈನ್ ಅವರು, ಹಾಲಿ ವಿಶ್ವ ಚಾಂಪಿಯನ್ ಮತ್ತು ಎರಡು ಬಾರಿ ಒಲಿಂಪಿಕ್ ಪದಕ ವಿಜೇತ ಲಿ ಕಿಯಾನ್ ವಿರುದ್ಧ ಸೋಲು ಅನುಭವಿಸುವುದರೊಂದಿಗೆ ಬೆಳ್ಳಿಗೆ ತೃಪ್ತಿಪಟ್ಟರು.

ಇನ್ನು ಬಾಕ್ಸಿಂಗ್ ಸ್ಪರ್ಧೆಯ ಮಹಿಳೆಯರ 57 ಕೆಜಿ ವಿಭಾಗದ ಸೆಮಿಫೈನಲ್‌ನಲ್ಲಿ ಪರ್ವೀನ್ ಹೂಡಾ ಅವರು ಎರಡು ಬಾರಿಯ ವಿಶ್ವ ಚಾಂಪಿಯನ್ ಚೈನೀಸ್ ತೈಪೆಯ ಲಿನ್ ಯು ಟಿಂಗ್ ವಿರುದ್ಧ ಸೋಲು ಅನುಭವಿಸುವುದರೊಂದಿಗೆ ಕಂಚಿಗೆ ತೃಪ್ತಿಪಟ್ಟರು.

ಈ ಮೂಲಕ ಭಾರತದ ಬಾಕ್ಸರ್‌ಗಳು ಒಂದು ಬೆಳ್ಳಿ ಮತ್ತು ನಾಲ್ಕು ಕಂಚು ಸೇರಿದಂತೆ ಐದು ಪದಕಗಳನ್ನು ಗೆದ್ದಿದ್ದಾರೆ. ಕಳೆದ ಆವೃತ್ತಿಯಲ್ಲಿ ಭಾರತ ಒಂದು ಚಿನ್ನ ಮತ್ತು ಒಂದು ಕಂಚು ಗೆದ್ದಿತ್ತು.

'ನಾನು ಅತ್ಯುತ್ತಮ ಪ್ರದರ್ಶನ ನೀಡಿದ್ದೇನೆ. ಆದರೂ ಚಿನ್ನವನ್ನು ತರಲು ಸಾಧ್ಯವಾಗಲಿಲ್ಲ. ನನ್ನ ಆಟದಿಂದ ನನಗೆ ಸಂತೋಷವಾಗಿದೆ. ನಾನು ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆಲ್ಲಲು ಪ್ರಯತ್ನಿಸುತ್ತೇನೆ' ಎಂದು ಬೋರ್ಗೊಹೈನ್ ಅವರು ಪಂದ್ಯದ ನಂತರ ಹೇಳಿದ್ದಾರೆ.

# ಹಳದಿ ಸಮುದ್ರದಲ್ಲಿ ಚೀನಾದ ಜಲಾಂತರ್ಗಾಮಿ ಮುಳುಗಿ 55 ನಾವಿಕರ ಸಾವು

ನವದೆಹಲಿ, ಅ.4– ಹಳದಿ ಸಮುದ್ರದಲ್ಲಿ ಚೀನಾದ ಜಲಾಂತರ್ಗಾಮಿ ನೌಕೆ ಮುಳುಗಡೆಯಾದ ಪರಿಣಾಮ ಕನಿಷ್ಠ 55 ನಾವಿಕರು ಸಾವನ್ನಪ್ಪಿರುವ ಘಟನೆ ಬುಧವಾರ ವರದಿಯಾಗಿದೆ.

ಹಳದಿ ಸಮುದ್ರದಲ್ಲಿ ವಿದೇಶಿ ಹಡಗುಗಳಿಗಾಗಿ ತಯಾರಿಸಿದ ಬಲೆಯಲ್ಲಿ ಚೀನಾದ ಪರಮಾಣು ಜಲಾಂತರ್ಗಾಮಿ ಸಿಕ್ಕಿಬಿದ್ದಿದೆ. ಪರಮಾಣು ಜಲಾಂತರ್ಗಾಮಿ ನೌಕೆಯನ್ನು ಹಳದಿ ಸಮುದ್ರದಲ್ಲಿ ಬ್ರಿಟಿಷ್ ಮತ್ತು ಅಮೇರಿಕನ್ ಹಡಗುಗಳನ್ನು ಹಿಡಿಯುವ ಉದ್ದೇಶದಿಂದ ನಿರ್ಮಿಸಲಾಯಿತು. ಆದರೆ ಅದು ತನ್ನದೇ ಆದ ಬಲೆಗೆ ಸಿಕ್ಕಿಬಿದ್ದಿದೆ. ಬ್ರಿಟಿಷ್ ಗುಪ್ತಚರ ವರದಿಯು ಜಲಾಂತರ್ಗಾಮಿ "ಚೈನ್ ಮತ್ತು ಆಂಕರ್" ನೆಟ್ ಅನ್ನು ಎದುರಿಸಿದೆ ಎಂದು ಹೇಳಿದೆ. ಜಲಾಂತರ್ಗಾಮಿ ನೌಕೆಯ ಆಮ್ಲಜನಕ ವ್ಯವಸ್ಥೆಯಲ್ಲಿನ ಅಸಮರ್ಪಕ ಕಾರ್ಯದಿಂದಾಗಿ ಜಲಾಂತರ್ಗಾಮಿಯಲ್ಲಿದ್ದ ನಾವಿಕರು ಸಾವನ್ನಪ್ಪಿದ್ದಾರೆ. ಜಲಾಂತರ್ಗಾಮಿ ನೌಕೆಯಲ್ಲಿದ್ದ ನಾವಿಕರು ಯಾರೂ ಬದುಕುಳಿಯಲಿಲ್ಲ. ಕನಿಷ್ಠ 55 ಚೀನೀ ನಾವಿಕರು ಸಾವನ್ನಪ್ಪಿದ್ದಾರೆ ಎಂದು ಶಂಕಿಸಲಾಗಿದೆ. ಪ್ರಾಣ ಕಳೆದುಕೊಂಡ ನಾವಿಕರು ಚೀನಾದ PLA ನೇವಿ ಜಲಾಂತರ್ಗಾಮಿ '093–417'ನ ಕ್ಯಾಪ್ಟನ್ ಮತ್ತು 21 ಇತರ ಅಧಿಕಾರಿಗಳು ಸೇರಿದ್ದಾರೆ. ಆದರೆ, ಈ ಘಟನೆಯನ್ನು ಒಪ್ಪಿಕೊಳ್ಳಲು ಚೀನಾ ಅಧಿಕೃತವಾಗಿ ನಿರಾಕರಿಸಿದೆ. ಅಲ್ಲದೆ, ಜಲಾಂತರ್ಗಾಮಿ ನೌಕೆಗೆ ಯಾವುದೇ ಅಂತಾರಾಷ್ಟ್ರೀಯ ನೆರವು ಪಡೆಯಲು ಚೀನಾ ನಿರಾಕರಿಸಿದೆ.

## ಅ.9ರಂದು ಅಪ್ರೆಂಟಿಸ್ ಮೇಳ

ಮೈಸೂರು, ಅ.4– ಅ.9 ರಂದು ಎನ್.ಆರ್ ಮೊಹಲ್ಲಾದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಅಪ್ರೆಂಟಿಸ್ ಮೇಳ ನಡೆಯಲಿದ್ದು, ವಿವಿಧ ಪ್ರತಿಷ್ಠಿತ ಉದ್ದಿಮೆಗಳು ಪಾಲ್ಗೊಳ್ಳುತ್ತಿವೆ. ಅಪ್ರೆಂಟಿಸ್ ಮೇಳದಲ್ಲಿ ITI/DIPLOMA/BE ಉತ್ತೀರ್ಣರಾದ ಅಭ್ಯರ್ಥಿಗಳು ಭಾಗವಹಿಸಬಹುದು. ಮಾಹಿತಿಗಾಗಿ ನೋಡಲ್ ಅಧಿಕಾರಿಗಳಾದ ಬೋಪಯ್ಯ ದೂ.ಸಂ: 9945711787, ಪ್ಲೇಸ್‌ಮೆಂಟ್ ಅಫೀಸರ್ ನಾಗೇಶ್ ಎಂ.ಹೆಚ್ ದೂ.ಸಂ: 9945616088 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.



# ಹುಬ್ಬಳ್ಳಿ ಗಲಭೆ ಪ್ರಕರಣ ವಾಪಸ್‌ಗೆ ಪತ್ರ ಬರೆದರೆ ತಪ್ಪಿಲ್ಲ, ಜಾತಿ ಗಣತಿ ವರದಿ ಬಿಡುಗಡೆಯಾದರೆ ಒಳ್ಳೇದು




ಬೆಂಗಳೂರು, ಅ.4– ಹಳೆ ಹುಬ್ಬಳ್ಳಿ ಗಲಭೆ ಪ್ರಕರಣ ವಾಪಸ್‌ಗೆ ಡಿಸಿಎಂ ಡಿ.ಕೆ. ಶಿವಕುಮಾರ್ ಪತ್ರ ಬರೆದಿದ್ದರೆ ಅದರಲ್ಲಿ ತಪ್ಪೇನು ಇಲ್ಲ, ಒಳ್ಳೆಯದೇ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಬುಧವಾರ ಬೆಂಗಳೂರಿನಲ್ಲಿ ಮಾಧ್ಯಮ ಪ್ರತಿನಿಧಿಗಳ ಮುಂದೆ ಹೇಳಿದ್ದಾರೆ.

ಸಚಿವರು, ಶಾಸಕರಿಗೆ ಮನವಿ ಸಲ್ಲಿಸಿದರೆ ನಮಗೆ ಕಳುಹಿಸಿಕೊಡುತ್ತಾರೆ. ಆ ಮನವಿ ನನಗೆ ಬರುತ್ತದೆ, ಇಲ್ಲದಿದ್ದರೆ ಇಲಾಖೆ ಡಿಜಿಗೆ ಕಳುಹಿಸುತ್ತಾರೆ. ಆಗ ನಾವು ಸಂಪುಟ ಉಪ ಸಮಿತಿ ಮುಂದೆ ಚರ್ಚೆ ಮಾಡುತ್ತೇವೆ. ಏನೇನು ಸೆಕ್ಷನ್ ಹಾಕಿರುತ್ತಾರೆ ಎಲ್ಲವನ್ನೂ ಪರಿಶೀಲನೆ ಮಾಡುತ್ತೇವೆ. ಅಂತಿಮವಾಗಿ ಕೇಸ್ ಹಿಂಪಡೆಯುವ ಬಗ್ಗೆ ಸಂಪುಟದಲ್ಲಿಯೇ ತೀರ್ಮಾನ ಮಾಡಲಾಗುತ್ತದೆ. ಪತ್ರ ಬರೆದರು ಎಂದು ಬೊಬ್ಬೆ ಹೊಡೆದರೆ ನಾವು ಏನು ಮಾಡಬೇಕು. ನಾನು ಇನ್ನೂ ಪತ್ರ ನೋಡಿಲ್ಲ, ಒಂದು ವೇಳೆ ಪತ್ರ ಬರೆದರೂ ತಪ್ಪಿಲ್ಲ ಎಂದರು.

ಬಿಹಾರ ಸರ್ಕಾರ ಜಾತಿ ಗಣತಿ ವರದಿ ಪ್ರಕಟಿಸಿದ ಬೆನ್ನಲ್ಲೇ ಕರ್ನಾಟಕ ರಾಜ್ಯ ದಲ್ಲೂ ಜಾತಿಗಣತಿ ವರದಿ ಬಿಡುಗಡೆಗೆ ಒತ್ತಾಯ ಕೇಳಿ ಬಂದಿದೆ. ಈ ಕುರಿತು ಕೇಳಿದಾಗ, ಸರ್ಕಾರಕ್ಕೆ ಜಾತಿ ಗಣತಿ ವರದಿ ಸಲ್ಲಿಸಿದ ಬಳಿಕ ಚರ್ಚೆ ಮಾಡೋಣ. ಶೀಘ್ರವೇ ಸರ್ಕಾರಕ್ಕೆ ವರದಿ ಸಲ್ಲಿಸುವುದಾಗಿ ಜಯಪ್ರಕಾಶ್ ಹೆಗ್ಡೆ ಹೇಳಿದ್ದಾರೆ. ಜಾತಿ ಗಣತಿ ನಡೆಸಲು ಅಂದಾಜು 100 ಕೋಟಿ ರೂಪಾಯಿಗೂ ಹೆಚ್ಚು ಖರ್ಚಾಗಿದೆ. ಇಷ್ಟು ಹಣ ಖರ್ಚು ಮಾಡಿ ವರದಿ ಬಿಡುಗಡೆ ಮಾಡದಿದ್ದರೇ ವ್ಯರ್ಥ ಆಗುವುದಿಲ್ಲವೇ, ಜಾತಿಗಣತಿ ಬಿಡುಗಡೆಯಾದರೆ ಒಳ್ಳೆಯದು ರಾಜ್ಯದಲ್ಲಿ ಮೀಸಲಾತಿ ಕೂಗು ಕೇಳಿಬಂದಿದೆ. ಸರ್ಕಾರ ದುಂದುವೆಚ್ಚಕ್ಕಾಗಿ ಜಾತಿ ಗಣತಿ ಮಾಡಿಲ್ಲ ಎಂದು ಹೇಳಿದರು.

# ದೆಹಲಿ ಅಬಕಾರಿ ನೀತಿ ಪ್ರಕರಣ: ಇ.ಡಿಯಿಂದ ಎಎಪಿ ಸಂಸದ ಸಂಜಯ್ ಸಿಂಗ್ ಬಂಧನ



ನವದೆಹಲಿ, ಅ.4– ದೆಹಲಿ ಅಬಕಾರಿ ನೀತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಆಮ್ ಆದ್ಮಿ ಪಕ್ಷದ ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್ ಅವರನ್ನು ಜಾರಿ ನಿರ್ದೇಶನಾಲಯ(ಇ.ಡಿ) ಬುಧವಾರ ಬಂಧಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಇಂದು ಬೆಳಿಗ್ಗೆಯಿಂದ ಅವರ ಮನೆಯಲ್ಲಿ ಶೋಧ ಕಾರ್ಯಾಚರಣೆ ನಡೆಸಿದ ಬಳಿಕ ಇ.ಡಿ ಬಂಧಿಸಿದೆ.

ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೆ ಕೆಲವರ ಸ್ಥಳಗಳ ಮೇಲೂ ದಾಳಿ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮದ್ಯದ ವ್ಯಾಪಾರಿಗಳಿಗೆ ಪರವಾನಗಿ ನೀಡಲು ದೆಹಲಿ ಸರ್ಕಾರದ 2021–22ರ ಅಬಕಾರಿ ನೀತಿಯು ಕಾರ್ಟೆಲೈಸೇಶನ್‌ಗೆ ಅವಕಾಶ ಮಾಡಿಕೊಟ್ಟಿದೆ. ಲಂಚವನ್ನು ನೀಡಿದ ಕೆಲವು ಡೀಲರ್‌ಗಳಿಗೆ ಅನುಕೂಲ ಮಾಡಿಕೊಡಲಾಗಿತ್ತು ಎಂದು ಆರೋಪಿಸಲಾಗಿತ್ತು. ಈ ಆರೋಪಗಳನ್ನು ಎಎಪಿ ಬಲವಾಗಿ ನಿರಾಕರಿಸಿತ್ತು.

ಅಕ್ರಮದ ಆರೋಪದ ಹಿನ್ನೆಲೆಯಲ್ಲಿ ಅಬಕಾರಿ ನೀತಿಯನ್ನು ದೆಹಲಿ ಸರ್ಕಾರ ರದ್ದು ಮಾಡಿತ್ತು. ಪ್ರಕರಣ ಕುರಿತಂತೆ ಸಿಬಿಐ ತನಿಖೆಗೆ ದೆಹಲಿ ಲೆಫ್ಟಿನೆಂಟ್ ಗವರ್ನರ್ ಶಿಫಾರಸು ಮಾಡಿದ್ದರು, ನಂತರ, ಇ.ಡಿ ಅಕ್ರಮ ಹಣ ಸಾಗಣೆ ತಡೆ ಕಾಯ್ದೆಯಡಿ (ಪಿಎಂಎಲ್‌ಎ) ಪ್ರಕರಣವನ್ನು ದಾಖಲಿಸಿಕೊಂಡಿತ್ತು. 51 ವರ್ಷದ ರಾಜ್ಯಸಭಾ ಸಂಸದ ಸಂಜಯ್‌ಸಿಂಗ್ ಜೊತೆ ನಂಟು ಹೊಂದಿರುವ ಸಿಬ್ಬಂದಿ ಮತ್ತು ಇತರರನ್ನು ಇ.ಡಿ ಈ ಹಿಂದೆ ವಿಚಾರಣೆಗೆ ಒಳಪಡಿಸಿತ್ತು.



## ಅರ್ಜಿ ಆಹ್ವಾನ

ಮೈಸೂರು, ಅ.4– 2023–24ನೇ ಸಾಲಿನ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನಕ್ಕಾಗಿ ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶ https://ssp.postmatric.karnataka. gov.in/ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ಸಂಬಂಧಪಟ್ಟ ಬ್ಯಾಂಕಿಗೆ ಭೇಟಿ ನೀಡಿ, ಅವರ ಆಧಾರ್ ಸಂಖ್ಯೆಯನ್ನು NPCI (National Payment Corporation of India)ರಲ್ಲಿ ಕಡ್ಡಾಯವಾಗಿ ಬ್ಯಾಂಕ್ ಖಾತೆಗೆ mapping ಮಾಡಿಸಿ, ಆಧಾರ್ ಸೀಡಿಂಗ್ ಮಾಡಿಸುವಂತೆ ತಿಳಿಸಲಾಗಿದೆ. ದೂ. 0821–2520910 ಸಂಪರ್ಕಿಸಬಹುದು.



### ಗೌರವಾನ್ವಿತ ಲಘು ವ್ಯಾಜ್ಯಗಳ ನ್ಯಾಯಾಧೀಶರ ನ್ಯಾಯಾಲಯ ಮೈಸೂರು ಎಂ.ವಿ.ಸಿ.ನಂ. 178/2022

**ಅರ್ಜಿದಾರರು**: ಪುನೀತ್ ಕುಮಾರ್ ಎಂ.ಜಿ. ಬಿನ್ ಗೋವಿಂದೇಗೌಡ ಸುಮಾರು 28 ವರ್ಷ, ವಾಸ: ರಾಜೀವ್ ಗ್ರಾಮ, ಮುಳ್ಳೂರು ಅಂಚೆ, ಕಸಬಾ ಹೋಬಳಿ, ಪಿರಿಯಾಪಟ್ಟಣ ತಾಲ್ಲೂಕು, ಮೈಸೂರು ಜಿಲ್ಲೆ. **ವಿರುದ್ಧ**
ಎದುರುದಾರರು: ಜಮೀರ್ ಷರೀಫ್ ಮತ್ತು ಇತರರು

**4ನೇ ಎದುರುದಾರರು** : ಶಿವಲಿಂಗನಾಯಕ ಬಿನ್ ಸ್ವಾಮಿನಾಯಕ ಸುಮಾರು 55 ವರ್ಷ, ವೃತ್ತಿ ವ್ಯಾಪಾರ , ವಾಸ ನಂ. 74/2, ಆಲನಹಳ್ಳಿ, ಮೈಸೂರು ತಾಲ್ಲೂಕು. ಮೈಸೂರು ಜಿಲ್ಲೆ–570010

**ನ್ಯಾಯಾಲಯದ ಸಮನ್ಸ್ ಪತ್ರಿಕಾ ಪ್ರಕಟಣೆ ಮೂಲಕ**

ಮೇಲ್ಕಂಡ ಅರ್ಜಿದಾರರು ಎದುರುದಾರರುಗಳ ವಿರುದ್ಧ ಮೋಟಾರ್ ರಸ್ತೆ ಅಪಘಾತದಲ್ಲಿ ಆದ ಗಾಯಗಳಿಗೆ ಪರಿಹಾರ ಕೋರಿ ಘನ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯ 4ನೇ ಎದುರುದಾರರು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿದ್ದರೂ ಸಹ ನ್ಯಾಯಾಲಯದ ಸಮನ್ಸ್ ಮತ್ತು ನೊಂದಾಯಿತ ಅಂಚೆಯನ್ನು ಕೂಡ ತೆಗೆದುಕೊಳ್ಳದೆ ಇದುದ್ದರಿಂದ ಅರ್ಜಿದಾರರು 4ನೇ ಎದುರುದಾರರ ವಿರುದ್ಧ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿರುತ್ತಾರೆ. ನೀವು ದಿನಾಂಕ 4.11.2023 ರಂದು ಬೆಳಗ್ಗೆ 11.00 ಗಂಟೆಗೆ ದಾವೆಯು ವಿಚಾರಣೆಗೆ ಇರುವುದರಿಂದ ನಿಮ್ಮದೇನಾದರೂ ತಕರಾರು ಇದ್ದಲ್ಲಿ ನೀವಾಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ಮೇಲ್ಕಂಡ ನ್ಯಾಯಾಲಯದಲ್ಲಿ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಏಕಪಕ್ಷೀಯವಾಗಿ ಪ್ರಕರಣವನ್ನು ಇತ್ಯರ್ಥಪಡಿಸಲಾಗುವುದು. ದಿನಾಂಕ: 27ನೇ ಸೆಪ್ಟೆಂಬರ್ 2023ರಂದು ನಮ್ಮ ಸಹಿ ಮತ್ತು ಮೊಹರಿನೊಡನೆ ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ, ಸಹಿ/– ಶಿರಸ್ತೆದಾರರು, ಗೌರವಾನ್ವಿತ ಲಘು ವ್ಯಾಜ್ಯಗಳ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು

ಅರ್ಜಿದಾರರ ಪರ ವಕೀಲರು, ಎಂ.ಜೆ ಸ್ವಾಮಿ, ಜಯಸೂರ್ಯ ಕಾಂಪ್ಲೆಕ್ಸ್, ಬಿ.ಎಂ ರಸ್ತೆ, ಸರ್ಕಾರಿ ಆಸ್ಪತ್ರೆ ಎದುರು, ಪಿರಿಯಾಪಟ್ಟಣ, ಮೈಸೂರು ಜಿಲ್ಲೆ



### ಮೈಸೂರು ಅರಮನೆ ಮಂಡಳಿ, ಮೈಸೂರು

ಕಾರ್ಯನಿರ್ವಾಹಕ ಅಧಿಕಾರಿರವರ ಕಛೇರಿ, ಮೈಸೂರು. ದೂ:0821–2421051 ಇಮೇಲ್: ddmysorepalace@gmail.com

ಸಂಖ್ಯೆ:ಕಾನಿಅ/ಮೈಅಮಂ/ಉನಿ/ಸಿವಿಲ್/ಟೆಂಡರ್–10/2023–24 ದಿನಾಂಕ:03.10.2023

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉಪ–ನಿರ್ದೇಶಕರು, ಮೈಸೂರು ಅರಮನೆ ಮಂಡಳಿ ಮೈಸೂರು ಇವರಿಂದ ಮೈಸೂರು ಅರಮನೆಯ ಆವರಣದಲ್ಲಿ ದಸರಾ–2023ರ ಪ್ರಯುಕ್ತ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಬ್ಯಾಕ್‌ಡ್ರಾಪ್ ಅನ್ನು ಅಳವಡಿಸುವ ಕಾಮಗಾರಿಯನ್ನು ಕೈಗೊಳ್ಳುವ ಸಂಬಂಧ ಒಟ್ಟು **ರೂ.20.00/– ಲಕ್ಷಗಳು** ಒಂದು ಕೆಲಸಕ್ಕೆ ಸದರಿ ಕೆಲಸದಲ್ಲಿ ಅನುಭವವಿರುವ ಅರ್ಹ ಗುತ್ತಿಗೆದಾರರು/ಏಜೆನ್ಸಿ/ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿವುಳ್ಳ ಅರ್ಜಿದಾರರು (1) ವಿದ್ಯುನ್ಮಾನ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್) ವ್ಯವಸ್ಥೆ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **11.10.2023 10:30 ಗಂಟೆಯವರೆಗೆ.** (2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ **12.10.2023 11:00 ಗಂಟೆಗೆ.** ಹೆಚ್ಚಿನ ವಿವರಗಳಿಗೆ **https://kppp.karnataka.gov.in** ಅಂತರ್ಜಾಲದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯ ಎಲ್ಲಾ ದಿನಗಳಂದು ಪಡೆಯಬಹುದು.

ಸಹಿ/– ಉಪ ನಿರ್ದೇಶಕರು
ಮೈಸೂರು ಅರಮನೆ ಮಂಡಳಿ, ಮೈಸೂರು

DIPR/MYS/KAVITA/466/23-24